
ಸೆಪ್ಟೆಂಬರ್ - 1996 ಬೆಲೆ 4 ರೂ

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ, ಆಗಸ್ಟ್-ಸೆಪ್ಟಂಬರ್, 1996 ಬಿಡಿ ಸಂಚಿಕೆ 4 ರೂ.

ಸಂಪುಟ : 26   ಸಂಚಿಕೆ : 3   ಬಸವ ಶಕೆ : 863.
ವಾರ್ಷಿಕ ಚಂದಾ : 40 ರೂ.   ಆಜೀವ ಸದಸ್ಯತ್ವ : 400 ರೂ.

ಮುಖಪುಟ : ದಿ. 30-6-1995 ರಂದು ಲಿಂಗೈಕ್ಯರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 66 ನೇ ಜಯಂತಿಯನ್ನು ದಿ. 16-9-1996 ರಂದು ಆಚರಿಸಲಾಯಿತು.

ಹೊದ್ದಿಕೆಯ 4 ನೇ ಪುಟ : ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವ ಸಮಾರಂಭದಲ್ಲಿ ಎಡದಿಂದ ಬಲಕ್ಕೆ ಆರ್. ಬಿ. ಹೆಬ್ಬಳ್ಳಿ, ಸಚಿವ ಗುರುಪಾದಪ್ಪ ನಾಗಮಾರಪಳ್ಳಿ, ಪೂಜ್ಯ ಮಾತಾಜಿ, ಉಪಸಭಾಪತಿ ರಾಣಿ ಸತೀಶ್, ಸಿ. ಸೋಮಶೇಖರ್ ಮುತ್ತಿತರರು.

KALYANA KIRANA-Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074. Ph : 8437234

ಗುರು ಲಿಂಗಾನಂದರಿಗೆ ನಮೋ ನಮೋ
ಪುಷ್ಪಾಂಜಲಿ (ಲಾವಣಿಯ ದಾಟಿಯಲ್ಲಿ)

ಬಸವ ಪ್ರಭುವಿನ ಚಿತ್ಕಳೆಯೊಂದು
ಬೆಳಗಿತು ಭಾನು-ಭುವಿಗಳನ್ನು
ಮನಗೂಳಿಯ ಶಿಶು ಸಂಗಮದೇವರು
ಲಿಂಗದಾಲಿಂಗನ ಹೊಂದಿಹರು ||೧||

ಪ್ರವಚನ ಪಿತಾಮಹರೆನಿಸಿದ ಗುರುವು
ಬಸವ ಪ್ರಭೆಯನು ಸೂಸಿದರು
ಜಾತಿ ಭೇದದ ಕರ್ಮವ ಕಳೆಯಲು
ಧರ್ಮದ ಕಂಕಣ ಕಟ್ಟಿದರು ||೨||

ಅರಿದಡೆ ಶರಣ ಮರೆದಡೆ ಮಾನವ
ಅರುವಿನ ಕುರುಹನು ತೋರಿದರು
ಶರಣರ ಬಳಗವ ಕಟ್ಟುತ ನಡೆದು
ಗುರುವಿನ ಪದವಿಯ ಹೊಂದಿದರು ||೩||

ಸುಂದರ ಸಂಜೆಯೊಳ್ ಸಂಗಮಗೈದು
ವಚನ ಧಾರೆಯ ಹರಿಸಿದರು
ಶರಣರು ಬಿತ್ತಿದ ಭಕ್ತಿಯ ಬೆಳೆಗೆ
ತತ್ತ್ವದ ನೀರನು ಉಣಿಸಿದರು ||೪||

ಬಸವನಾಣತಿಯಿಂ ದೀಕ್ಷೆಯ ಧರಿಸಿ
ಮನ್ನಣೆ ಹೊಂದಿದ ಮಹಾಯೋಗಿ
ವಾಙ್ಮಯ ತಪಸಿಯ ಅನುಭವವಾಣಿಗೆ
ನಾಡಿನ ಜನತೆಯು ತಲೆದೂಗಿ ||೫||

ಕ್ರಾಂತಿಯ ಕಹಳೆಯ ಮೊಳಗಿಸಲೆಳಸಿ
ನಾಡು ನಾಡಿಗೆ ಸಂಚರಿಸಿ
ನಡೆ-ನುಡಿಗಳನ್ನು ಒಂದಾಗಿಸುತ
ಶರಣರ ಮೇಳವ ತಾವ್ ನಡೆಯಿಸಿ ||೬||

ತನುವೇ ಮಂದಿರ ಮನವೇ ಲಿಂಗ
ಮನುಕುಲಕೊಬ್ಬನೆ ಮಹದೇವ
ಜ್ಯೋತಿಯ ತೆರದಲಿ ಉರಿದುಕೊಂಡು
ಬೆಳಗನು ನೀಡಿದ ಶ್ರೀ ಗುರುವೆ ||೭||

ಮಹಾಮಾತೆಗೆ ಬೋಧನೆ ನೀಡಿದ
ಮಂಗಳ ಪಾಡಿದ ಬಸವೇಶ
ಕಂಗಳು ನಿಮ್ಮನು ಕಾಣದಿದ್ದರೂ
ನಮ್ಮೊಡನಿರುವಿರಿ ಲಿಂಗೇಶ ||೮||

ಶ್ರದ್ಧಾಂಜಲಿಯಿದು ಪುಷ್ಪಾಂಜಲಿಯಿದು
ನಮಿಸುವೆ ನಿನಗೆ ಓ ಗುರುವೆ
ನಿಮ್ಮಯ ಕರುಣೆ ಇರಲೆಮಗೆಂದೂ
ಧರ್ಮಕೆ ಜಯ ಜಯ ಜಯ ಗುರುವೆ

–ಶ್ರೀಮತಿ ಅನ್ನಪೂರ್ಣ ಮನ್ನಾಪುರ
ಮಂಡಿಹಾಳ, ಧಾರವಾಡ ಜಿಲ್ಲೆ

ಪ್ರವಚನ ಪಿತಾಮಹ
ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು

— ಪೂಜ್ಯ ಮಾತಾಜಿ

(ಪ್ರವಚನಗಳ ಮೂಲಕ ಅಪಾರವಾದ ಜನಜಾಗೃತಿಯುಂಟು ಮಾಡಿ, 40 ವರ್ಷಗಳ ಕಾಲ ಧರ್ಮಬೋಧೆಯನ್ನು ವಾಙ್ಮಯ ತಪಸ್ಸನ್ನಾಗಿ ರೂಢಿಸಿಕೊಂಡು ದಿ. 30.6.1995ರಂದು ತಮ್ಮ 64ನೆಯ ವಯಸ್ಸಿನಲ್ಲಿ ಲಿಂಗೈಕ್ಯರಾದ ಕೂಡಲ ಸಂಗಮದ ಬಸವ ಧರ್ಮದ ಮಹಾ ಜಗದ್ಗುರು ಪೀಠದ ಪ್ರಥಮ ಅಧಿಕಾರಿಗಳಾದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಜನಿಸಿದ್ದು ಗಣೇಶ ಚೌತಿ ದಿ.15-9-1931ರಂದು ಅವರ ಅಭಿಮಾನಿಗಳು ರಾಷ್ಟ್ರೀಯ ಬಸವದಳಗಳ ಮೂಲಕ 66ನೆಯ ಜಯಂತಿಯನ್ನು ಅದರ ನಿಮಿತ್ತ ರಾಷ್ಟ್ರೀಯ ಬಸವ ದಳಗಳ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದರ ನಿಮಿತ್ತ ಈ ಲೇಖನ).

"ಭಾರತ ದೇಶ ತನ್ನ ಉದಾತ್ತ ಪರಂಪರೆಯಿಂದ ತೇಜಸ್ವಿಯಾಗಿ ಬೆಳಗಬೇಕಾದರೆ ಜನಾಂಗ ನಿರ್ಮಾಣದ ಕೆಲಸ ಮೊದಲು ಆಗಬೇಕು. ಪ್ರಾಥಮಿಕ ಶಾಲೆಯಿಂದ ಹಿಡಿದು ಸ್ನಾತಕೋತ್ತರ ಪದವೀಧರರಾಗುವವರೆಗೂ ನೀತಿ ಶಾಸ್ತ್ರವನ್ನೇ ಬೋಧಿಸದಿದ್ದರೆ ಜನತೆಯಲ್ಲಿ ಪಾಪ-ಪುಣ್ಯಗಳ ಕಲ್ಪನೆ, ರಾಷ್ಟ್ರ ಪ್ರಜ್ಞೆ ಮುಂತಾದುವು ಮೂಡಲು ಹೇಗೆ ಸಾಧ್ಯ? ಪಕ್ಷಗಳನ್ನು ಬದಲಿಸಿ ಅಧಿಕಾರ ಕೊಟ್ಟರೆ ರಾಷ್ಟ್ರದ ಸಮಸ್ಯೆ ಪರಿಹಾರವಾಗವು ಇದು ಹೇಗೆ ಎಂದರೆ ಜಲಾಗಾರದಲ್ಲಿರುವ ನೀರನ್ನು ಶುದ್ಧಿ ಮಾಡದೆ ನಲ್ಲಿಯನ್ನು ಬದಲಿಸಿದಂತೆ. ನಲ್ಲಿಯನ್ನು ಬದಲಿಸಿದರೆ ನೀರು ಶುದ್ಧಿಯಾಗದು. ಹಾಗೆ ಇಂದು ಒಂದು ಪಕ್ಷವನ್ನು ಗಾದಿಯ ಮೇಲಿಂದ ಇಳಿಸಿ ಇನ್ನೊಂದು ಪಕ್ಷವನ್ನು ಅಧಿಕಾರಕ್ಕೆ ತಂದರೂ ಎರಡರಲ್ಲಿಯೂ ಇದ್ದ ಜನ ಅವರೇ ಆದರೆ ರಾಷ್ಟ್ರದ ವಾತಾವರಣ ಬದಲಾಗುವದೆಂತು. ಭೌತಿಕವಾದ ಮನೆ, ಡ್ಯಾಂ ಕಟ್ಟುವ ಇಂಜನಿಯರರಿಗೆ ತರಬೇತಿ ಇದೆ. ಮಕ್ಕಳಿಗೆ ಪಾಠ ಹೇಳುವ ಶಿಕ್ಷಕರಿಗೆ ತರಬೇತಿ ಇದೆ. ದೇಹದ ರೋಗ ಗುಣಪಡಿಸುವ ವೈದ್ಯರಿಗೆ ತರಬೇತಿ ಇದೆ. ಆದರೆ ದೇಶದ ಭವಿಷ್ಯ ನಿರ್ಧರಿಸುವ ರಾಜಕಾರಣಿಗಳಿಗೆ ತರಬೇತಿಯಿಲ್ಲ. ಸಮಾಜದ ಸೂತ್ರಧಾರರಾದ ಸ್ವಾಮಿಗಳು-ಮಠಾಧಿಪತಿಗಳಿಗೆ ತರಬೇತಿ ಇಲ್ಲ. ಹೀಗಾದಾಗ ಇವರು ಹೇಗೆ ರಾಷ್ಟ್ರ-ಸಮಾಜಗಳನ್ನು ಮುನ್ನಡೆಸಬಲ್ಲರು? ಇಂಥ ಚಿಂತನಶೀಲ ಪ್ರಶ್ನೆಗಳನ್ನು ಹಾಕುತ್ತ, ಅವುಗಳಿಗೆ ಉತ್ತರವನ್ನು ನೀಡುತ್ತಾ ಸಾಗುತಿತ್ತು ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನ, ಪುರಾಣ-ಪ್ರವಚನಗಳೆಂದರೆ ಬೇಸರದ ಬುಗ್ಗೆ, ಅವು ಮುಪ್ಪಿನ ಮುದುಕರಿಗೆ ಮಾತ್ರ ಎಂಬ ರೂಢಿಗೊಂಡ ನಂಬಿಗೆಗಳನ್ನು ಸಡಲಿಸಿ ಸಣ್ಣ ಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಎಲ್ಲಾ ವಯಸ್ಸಿನವರು, ಸಾಮಾನ್ಯ ಬುದ್ಧಿಮಟ್ಟದಿಂದ ಪರಿಣಿತ ಮತಿಗಳವರೆಗೆ ಎಲ್ಲರನ್ನು ಆಕರ್ಷಿಸುತ್ತಿದ್ದ ಅಪೂರ್ವ ಪ್ರವಚನಕಾರರು ಪೂಜ್ಯ ಲಿಂಗಾನಂದ ಸ್ವಾಮಿಗಳು. ಅವರ ಪ್ರವಚನಗಳು ಸಾಮಾನ್ಯವಾಗಿ ಮೂವತ್ತರಿಂದ ನಲವತ್ತು ಐವತ್ತು ದಿವಸಗಳವರೆಗೆ ದಿನನಿತ್ಯ ಅಖಂಡವಾಗಿ ಸಾಗುತ್ತಿದ್ದುದಲ್ಲದೆ ವಿಷಯಗಳ ಪುನರಾವರ್ತನೆಯಾಗದೆ ನಿತ್ಯ ನೂತನವಾಗಿರುತ್ತಿದ್ದವು. ಹೀಗಾಗಿ ಶ್ರೋತೃಗಳ ಸಂಖ್ಯೆಯು ದಿನ ದಿನಕ್ಕೂ ವೃದ್ಧಿಯಾಗುತ್ತಿದ್ದುದು ಒಂದು ವಿಶೇಷ ಸಂಗತಿ. ಪ್ರವಚನಗಳು ಕೇವಲ ಧಾರ್ಮಿಕ ವಿಷಯಕ್ಕೆ ಮಾತ್ರ ಸೀಮಿತವಾಗಿರದೆ ಶೈಕ್ಷಣಿಕ, ಸಾಮಾಜಿಕ ಸಾಂಸ್ಕೃತಿಕ, ರಾಜಕೀಯ ಹೀಗೆ ಬಹುಬಗೆಯ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಿದ್ದುದರಿಂದ ಎಲ್ಲ ಆಸಕ್ತಿಯ ಶ್ರೋತೃವೃಂದ ಸಮಾವೇಶವಾಗುತ್ತಿದ್ದುದು ಗಮನಾರ್ಹ ಸಂಗತಿ. ಸಾಮಾನ್ಯವಾಗಿ ಪ್ರವಚನ, ಪುರಾಣ, ಕೀರ್ತನೆಗಳಿಗೆ ಮಠ-ಮಂದಿರಗಳನ್ನು ಪ್ರವಾಚಕರು ಆಯ್ದುಕೊಳ್ಳುವುದು ರೂಢಿಯ ವಿಷಯ. ಆದರೆ ಪೂಜ್ಯ ಶ್ರೀಲಿಂಗಾನಂದ ಸ್ವಾಮಿಗಳು ತಮ್ಮ ಪ್ರವಚನಗಳಿಗೆ ಆಯ್ದುಕೊಳ್ಳುತ್ತಿದ್ದುದು ಹುಬ್ಬಳ್ಳಿಯ ನೆಹರೂ ಮೈದಾನ, ಧಾರವಾಡದ ಕಡಪಾ ಮೈದಾನಗಳಂತಹ ವಿಶಾಲಬಯಲುಗಳನ್ನು. ಅವರು ಅಂಥ ಬಯಲುಗಳಲ್ಲಿ ಪ್ರವಚನ

ಮಾಡುತ್ತಾರೆಂಬ ಸುದ್ದಿ ಪ್ರಚಾರವಾಗುತ್ತಿದ್ದಂತೆಯೇ ಮೊದಮೊದಲು ಜನರು ಸೋಜಿಗಗೊಂಡು, 'ನಮ್ಮೂರಲ್ಲಿ ಜನ ಸೇರರು. ಸ್ವಾಮಿಗಳಿಗೆ ಗೊತ್ತಿಲ್ಲ ಆದಕ್ಕೇ ಇಂಥ ಬಯಲನ್ನು ಆಯ್ದುಕೊಂಡಿದ್ದಾರೆ" ಎಂದು ಕಳವಳಿಸುತ್ತಿದ್ದರು. ನಂತರ ಬರುಬರುತ್ತಾ ಮೈದಾನಗಳು ಕಿಕ್ಕಿರಿದು ತುಂಬಿದಾಗ ಬೆರಗಾಗುತ್ತಿದ್ದರು. ಪೂಜ್ಯ ಶ್ರೀಗಳ ಸಾತ್ವಿಕ ತೇಜಸ್ಸು, ಘಂಟಾನಾದದಂತಹ ಧ್ವನಿಶಕ್ತಿ, ಸ್ಪಷ್ಟ ನಿರೂಪಣೆ, ಆಳವಾದ ಅಧ್ಯಯನ, ಅಪೂರ್ವವಾಗ್ಮಿತ್ವ ಅಪ್ರತಿಮವಾಗಿದ್ದವು. ಬಾಲ್ಯದಿಂದ ವಿದ್ಯಾರ್ಥಿ ಜೀವನದ ಕಡೆಯವರೆಗೂ ಬಡತನದ ಬೇಗೆಯಲ್ಲಿ ಬೆಂದರೂ, ಸನ್ಯಾಸವನ್ನು ತೆಗೆದುಕೊಂಡು ಮೂಢ ಸಂಪ್ರದಾಯ ಅಂಧಶ್ರದ್ಧೆಯ ವಿರುದ್ಧ ಜಾಗೃತಿ ಮೂಡುವಾಗ ಸಂಪ್ರದಾಯವಾದಿಗಳ ಅಸಹನೆ-ಮಾತ್ಸರ್ಯಗಳನ್ನು ಎದುರಿಸಬೇಕಾಯಿತಾದರೂ ತಮ್ಮ ಪ್ರತಿಭೆಪಾಂಡಿತ್ಯ ಪರಿಶ್ರಮಗಳಿಂದ ಬೆಂಕಿಯಲ್ಲಿ ಅರಳಿನಿಂತ ಹೂವಿನಂತೆ ರೂಪುಗೊಂಡರೆಂದರೆ ಉತ್ಪ್ರೇಕ್ಷೆಯಲ್ಲ.

ಭಾವೈಕ್ಯತೆಯ ಹರಿಕಾರ

ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು ಜನತೆಯಲ್ಲಿ ವಿಶಿಷ್ಟ ದೃಷ್ಟಿಕೋನವನ್ನು ಬೆಳೆಸುವಲ್ಲಿ ಪ್ರಭಾವಶಾಲಿ ವಾಗ್ಮಿಗಳಾಗಿದ್ದುದು ಮಾತ್ರವಲ್ಲ ಭಾವೈಕ್ಯತೆಯ ಹರಿಕಾರರಾಗಿದ್ದರು. ಯಾವುದೇ ಜಾತಿ ಮತ ಪಂಥ ಭೇದವಿಲ್ಲದೆ ಜನರು ಪ್ರವಚನ ಕೇಳಲು ಆಗಮಿಸುತ್ತಿದ್ದರು. ಕರ್ನಾಟಕ ರಾಜಧಾನಿ ಬೆಂಗಳೂರಿನ ಹದಿನೆಂಟು ಬಡಾವಣೆಗಳಲ್ಲಿ ಸಾರ್ವಜನಿಕವಾಗಿ ಪ್ರವಚನಗಳನ್ನು ಎರಡು ವರ್ಷದಕಾಲ ಮಾಡಿದ್ದು ಒಂದು ವಿಶೇಷವಾದರೆ ಮಂಗಳೂರಿನ ನೆಹರೂ ಮೈದಾನದಲ್ಲಿ ಐವತ್ತು ದಿವಸಗಳ ಕಾಲ ಮಾಡಿ ಅಲ್ಲಿಯ ಜನರನ್ನೂ ಆಕರ್ಷಿಸಿದ್ದುದು ಇನ್ನೂ ವಿಶೇಷ. ಭಕ್ತಿಗೆ, ಸ್ನೇಹಕ್ಕೆ, ಜ್ಞಾನಕ್ಕೆ ಜಾತಿ ಮತ ಪಂಥಗಳು ಅಡ್ಡಿ ಬರುವುದಿಲ್ಲ ಎನ್ನುವುದಕ್ಕೆ ಪೂಜ್ಯ ಶ್ರೀಗಳ ಪ್ರವಚನಗಳೆ ಸಾಕ್ಷಿಯಾಗುತ್ತವೆ.

ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಹಿಂದುತ್ವದ ವ್ಯಾಖ್ಯಾನ ಬಹಳ ಗಮನಾರ್ಹ. ಹೀಗಾಗಿ ಪಾರಂಪರಿಕ ಮತ್ತು ಆಧುನಿಕ ವಿಚಾರಧಾರೆಯ ಸಾಮರಸ್ಯವನ್ನು ಅಲ್ಲಿ ಕಾಣಬಹುದಾಗಿತ್ತು. ಹಿಂದು ಒಂದು ವಿಶಿಷ್ಟ ಧರ್ಮ ಸೂಚಕ ಪದವಲ್ಲ. ಹಲವಾರು ಧರ್ಮಗಳ ಒಕ್ಕೂಟವಾದ ಸಮುದಾಯ ವಾಚಕ ಪದ. ಇಲ್ಲಿ ಹಲವು ಧರ್ಮಗಳು ಆಯಾ ಧರ್ಮಗಳ ಶಾಸ್ತ್ರಗಳು, ಅಸಂಖ್ಯಾತ ಮಹಾಪುರುಷರು ಆಗಿ ಹೋಗಿದ್ದರೂ. ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ವೈಶಿಷ್ಟ್ಯವಿಲ್ಲಿದೆ. ಹೇಗೆ ವಿವಿಧ ಹಣ್ಣುಗಳು ವಿವಿಧ ತರಕಾರಿಗಳು ಬೇರೆ ಬೇರೆ ಅನ್ನಾಂಗಗಳನ್ನು ನೀಡಿ ಶರೀರಕ್ಕೆ ಪುಷ್ಟಿ ನೀಡುತ್ತವೋ ಹಾಗೆ ಹಿಂದು ಕಕ್ಷೆಯಲ್ಲಿ ಬರುವ ಎಲ್ಲ ಧರ್ಮಗಳು ಪರಸ್ಪರ ಪೂರಕವಾಗಿವೆ" ಎಂದು ವಿವಿಧ ಧರ್ಮಗಳ ಸಾರವನ್ನು ಮನನೀಯವಾಗಿ ವಿಶ್ಲೇಷಿಸುತ್ತಿದ್ದರು.

ಭಾರತೀಯರು ಧರ್ಮ-ಜಾತಿಗಳ ವ್ಯತ್ಯಾಸವನ್ನರಿಯದೆ, ಮೂಢ ನಂಬಿಕೆ-ನಿಜ ಧರ್ಮವಂತಿಕೆಯನ್ನು ಸ್ಪಷ್ಟವಾಗಿ ಗುರುತಿಸಲಾರದೆ ಜಾತ್ಯಾತೀತರು ಎಂದುಕೊಳ್ಳುತ್ತ ಧರ್ಮವನ್ನು ತಿರಸ್ಕರಿಸುವ ಬಗ್ಗೆ ಪೂಜ್ಯ ಶ್ರೀಗಳು ಅತ್ಯಂತ ವ್ಯಾಕುಲಿತರಾಗಿ ಪ್ರವಚನಗಳಲ್ಲಿ ಧರ್ಮ-ಜಾತಿಗಳ ಸ್ಪಷ್ಟಚಿತ್ರಣ ನೀಡಿ, "ಇಂದು ನಮಗೆ ಜಾತಿ ಬೇಡ ಧರ್ಮಬೇಕು. ಜಾತಿ ಎಂದರೆ ಕತ್ತಲೆಯಿದ್ದಂತೆ ಧರ್ಮವೆಂದರೆ ಜ್ಯೋತಿ ಇದ್ದಂತೆ ಎಂದು ವಿವರಿಸುತ್ತಿದ್ದರು. ಜಾತಿ ಎಂದರೆ ಹಿಂದು ಸಮಾಜಕ್ಕೆ ಒಂದು ರೋಗ, ಧರ್ಮ ಎಂದರೆ ನಿಜಾರ್ಥದಲ್ಲಿ ಔಷಧಿ ಆದರೆ ಜನರು ಸ್ಪಷ್ಟವಾಗಿ ತಿಳಿಯದೆ ಜಾತೀನೂ ಬೇಡ, ಧರ್ಮವೂ ಬೇಡ" ಅನ್ನುತ್ತಾರೆ. ಎಂದು ವಿಷಾದಿಸುತ್ತಿದ್ದರು. ಧಾರ್ಮಿಕ ಆಚರಣೆಗಳಿಗೆ ವೈಚಾರಿಕತೆಯ ಪರುಷ ಸ್ಪರ್ಶ ನೀಡುತ್ತಿದ್ದ ಪೂಜ್ಯ ಶ್ರೀ ಗುರೂಜಿಯವರು ನೆಗಡಿ ಬಂದರೆ ನೆಗಡಿ ನಿವಾರಣೆಗೆ ಚಿಕಿತ್ಸೆ ಮಾಡಬೇಕಲ್ಲದೆ ಮೂಗನ್ನೆ ಕೊಯ್ಯಬಾರದು. ನಂತರ ಪಶ್ಚಾತ್ತಾಪ ಪಡಬೇಕಾದೀತು ಎಂದು

ಜನತೆಯನ್ನು ಎಚ್ಚರಿಸುತ್ತ ಮೂಢನಂಬಿಕೆಯನ್ನುತೊಡೆದು ಹಾಕಿ ಪ್ರಗತಿಪರ ಚಿಂತನೆಯನ್ನು ಧಾರ್ಮಿಕರು ಅಳವಡಿಸಿಕೊಳ್ಳಬೇಕೆಂದು ಕರೆಕೊಡುತ್ತಿದ್ದರು.

ಶ್ರೀ ಗುರು ಬಸವಣ್ಣನವರಿಂದ ದಿವ್ಯ ಆದೇಶವೊಂದನ್ನು ಪಡೆದು ಪದವೀಧರರಾದ ಮೇಲೆ ಬಸವ ತತ್ವ ಪ್ರಚಾರಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಬಸವಾದಿ ಪ್ರಮಥರ ಸಾಹಿತ್ಯ ಸಂದೇಶಗಳನ್ನು ಮನೆ ಮನೆಗೂ ಮುಟ್ಟಿಸಿದ ಜಂಗಮ ಜ್ಯೋತಿ. ವಚನಗಳನ್ನು ಉಪನಿಷತ್ ಶ್ಲೋಕಗಳಂತೆ ಬಳಸಿಕೊಂಡು ಪೂಜ್ಯರು ನೀಡುತ್ತಿದ್ದ ಶಾಸ್ತ್ರೀಯ ಪ್ರವಚನಗಳು ಅತ್ಯಂತ ತಾತ್ವಿಕವಾಗಿ ತಾರ್ಕಿಕವಾಗಿ ವೈಚಾರಿಕವಾಗಿ ಹರಿಯುತ್ತಲಿದ್ದು, ಜನತೆಯನ್ನು ಮಂತ್ರಮುಗ್ಧಗೊಳಿಸುತ್ತಿದ್ದವು. ವರ್ಷದಲ್ಲಿ ಒಂದೂ ದಿನ ತಪ್ಪದಂತೆ ಪ್ರವಚನಗಳನ್ನು ಮಾಡುತ್ತ ಭಕ್ತಿ ಜ್ಞಾನಗಳನ್ನು ವರ್ಧಿಸುತ್ತಾ ಸಂಚರಿಸುವ ಚರಜಂಗಮ ಮೂರ್ತಿಗಳಾಗಿದ್ದ ಪೂಜ್ಯಶ್ರೀಲಿಂಗಾನಂದ ಮಹಾಸ್ವಾಮಿಗಳು ಜಂಗಮತ್ವಕ್ಕೆ ವ್ಯಾಖ್ಯಾನದಂತಿದ್ದರು. "ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ" ಎಂಬ ಮಹಿಳಾ ಗುರುಪೀಠವನ್ನು ಧಾರವಾಡದಲ್ಲಿ, 'ವಿಶ್ವಕಲ್ಯಾಣ ಮಿಷನ್' ಎಂಬ ಧರ್ಮಪ್ರಚಾರಕ ಸಂಸ್ಥೆಯನ್ನು ಬೆಂಗಳೂರಿನಲ್ಲಿ 'ಬಸವ ಧರ್ಮಪೀಠ' ಎಂಬ ಧಾರ್ಮಿಕ ಕೇಂದ್ರವೊಂದನ್ನು ಬಿಜಾಪುರ ಜಿಲ್ಲೆಯ ಕೂಡಲಸಂಗಮದಲ್ಲಿ ಸ್ಥಾಪಿಸಿದರಲ್ಲದೆ ನೂರಾರು ರಾಷ್ಟ್ರೀಯ ಬಸವ ದಳಗಳನ್ನು ಪ್ರಾರಂಭಿಸಿ ಸದಾ ಧಾರ್ಮಿಕ ಸಾಹಿತ್ಯಕ ಚಟುವಟಿಕೆ ನಡೆಯಲು ಪ್ರೇರಕ ಶಕ್ತಿಯಾದರು. ಅಸಂಖ್ಯಾತ ಜನರಲ್ಲಿ ಪ್ರವಚನವೆಂಬ ಕೂರಿಗೆಯ ಮೂಲಕ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಬಿತ್ತಿದ ಬಸವತತ್ವದ ಬೆಳೆ ಇಂದು ಶರಣ ಸಮುದಾಯದ ಬೆಳೆ ಬೆಳೆಯುವಲ್ಲಿ ಯಶಸ್ವಿಯಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

11/9/96 —ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು

ಬಸವ ಧರ್ಮ ಪೀಠದ ಪರಮಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆಮಹಾದೇವಿಯವರ ದಿವ್ಯ ಪಾದಾರವಿಂದಗಳಲ್ಲಿ ರಾಜಮಣಿಯು ಭಕ್ತಿಪೂರ್ವಕವಾಗಿ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು.

ಲಿಂಗಾಯತ ಧರ್ಮದ ತತ್ವಗಳು ಆಚರಿಸಲು ಸುಲಭವಾಗಿವೆ. ಆದರೆ ಕೆಲವರು ತಾವು ಲಿಂಗಾಯತರೆಂದು ಹೇಳಿಕೊಳ್ಳಲು ಹಿಂದುಮುಂದು ನೋಡುತ್ತಾರೆ. ವಿಭೂತಿಯನ್ನು ಹಣೆಗೆ ಹಚ್ಚುತ್ತಿಲ್ಲ. ಇಷ್ಟಲಿಂಗವನ್ನು ಧರಿಸುತ್ತಿಲ್ಲ. ಒಟ್ಟಿನಲ್ಲಿ ಲಿಂಗಾಯತ ಧರ್ಮದ ಆಚರಣೆ ಕ್ಷೀಣವಾಗುತ್ತಿದೆ. ಮೇಲಾಗಿ ಲಿಂಗಾಯತ ಸಮಾಜ ಧಾರ್ಮಿಕವಾಗಿ, ನೈತಿಕವಾಗಿ ರಾಜಕೀಯವಾಗಿಯೂ ಸಮಗ್ರ ಸಂಘಟನೆಯನ್ನು ಕಳೆದುಕೊಂಡು ಸಂಪ್ರದಾಯ, ಒಳಪಂಗಡ ಭೇದ ಭಾವಗಳಲ್ಲಿ ನರಳುತ್ತಿದೆ.

ಲಿಂಗಾಯತ ಸಮಾಜದ ಮುಂದೆ ಬಗೆಹರಿಸಲು ಅನೇಕ ಗಂಭೀರ ಸಮಸ್ಯೆಗಳಿವೆ. ಈ ಧರ್ಮಕ್ಕೆ 800 ವರ್ಷಗಳ ಐತಿಹಾಸಿಕ ಪರಂಪರೆ ಇದ್ದರೂ ಇನ್ನೂ ಈ ಧರ್ಮದ ಸ್ಥಾಪಕರು, ಧರ್ಮಸಂಹಿತೆ ಮುಂತಾದ ಮುಖ್ಯ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳು ಕೇಳಿ ಬರುತ್ತಿವೆ. ಇದೇ ಪರಿಸ್ಥಿತಿ ಮುಂದುವರಿದರೆ ಲಿಂಗಾಯತ ಹೇಳಹೆಸರಿಲ್ಲದಂತಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ತಾವು ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರೆಂದು ಘೋಷಿಸಿದ್ದೀರಿ. ಇದು ಒಂದು ಐತಿಹಾಸಿಕ ಅದ್ಭುತ ಸಾಧನೆಯಾಗಿದೆ.

ಬಸವಣ್ಣನವರು ಸ್ಥಾಪಕರೆಂಬುದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೆ ಕೆಲವರು ಪಂಚಾಚಾರ್ಯರೆಂದು ಹೇಳುತ್ತಿದ್ದುದರಿಂದ ನನ್ನ ಮನಸ್ಸಿಗೆ ಅಪಾರ ನೋವಾಗುತ್ತಿತ್ತು. ಈಗ ತಾವು ಹೇಳಿದ ಮೇಲೆ ಬಸವಣ್ಣನವರು ಸ್ಥಾಪಕರೆಂಬುದು ಸ್ಪಷ್ಟವಾಯಿತು.

ಜಗತ್ತಿನಲ್ಲಿ ವರ್ಧಮಾನ ಮಹಾವೀರನು ಜೈನ ಧರ್ಮವನ್ನು, ಗೌತಮ ಬುದ್ಧನು ಬೌದ್ಧ ಧರ್ಮವನ್ನು, ಗುರು ನಾನಕನು, ಸಿಖ್ ಧರ್ಮವನ್ನು, ಯೇಸು ಕ್ರಿಸ್ತನು ಕ್ರೈಸ್ತ ಧರ್ಮವನ್ನು, ಮೊಹಮದ್ ಪೈಗಂಬರನು ಇಸ್ಲಾಂ ಧರ್ಮವನ್ನು ಸ್ಥಾಪಿಸಿರುವಂತೆ ಧರ್ಮಪಿತ ಬಸವಣ್ಣನವರು ಲಿಂಗಾಯತ ಧರ್ಮವನ್ನು ಸ್ಥಾಪಿಸಿರುವರು. ಆದರೆ ಹಿಂದೂ ಧರ್ಮಕ್ಕೆ ಸ್ಥಾಪಕರಿಲ್ಲ. ಇದೆಲ್ಲ ಐತಿಹಾಸಿಕವಾಗಿದೆ.

ಸಂಪ್ರದಾಯದಂತೆ ಲಿಂಗೋದ್ಭವರಾದ ಪಂಚಾಚಾರ್ಯರು ವೀರಶೈವ ಧರ್ಮದ ಸ್ಥಾಪಕರೆಂದು ಹೇಳಲಾಗಿದೆ. ಆದರೆ ಪಂಚಾಚಾರ್ಯರು ಕಾಲ್ಪನಿಕರು. ಪಂಚಾಚಾರ್ಯರು ಯಾರು? ಅವರ ತಂದೆತಾಯಿಗಳು ಯಾರು? ಯಾರು? ಅವರು ಹುಟ್ಟಿದ ಸ್ಥಳಯಾವುದು? ಅವರು ಹುಟ್ಟಿದ ವರ್ಷ ಯಾವುದು? ಅವರು ಇದ್ದುದಕ್ಕೆ ಇರುವ ಆಧಾರಗಳು ಯಾವುವು? ಅವರು ಜಗತ್ತಿಗೆ ಕೊಟ್ಟ ಕೊಡುಗೆಗಳೇನು? ಲಿಂಗದಲ್ಲಿ ಉದ್ಭವವಾಗುವುದು ಹೇಗೆ? ಎಂಬ ಪ್ರಶ್ನೆಗಳನ್ನು ಯಾರಾದರೂ ಹಾಕಿದರೆ ಉತ್ತರಿಸುವುದು ಕಷ್ಟ. ಹಿಂದೆ ಜನರಲ್ಲಿ ಐತಿಹಾಸಿಕ ಪ್ರಜ್ಞೆ ಕಡಿಮೆಯಿತ್ತು. ಜನಪದಗಳನ್ನು ಕಟ್ಟುಕತೆಗಳನ್ನು ಇತಿಹಾಸವೆಂದು ನಂಬುತ್ತಿದ್ದರು. ಈಗ ಸಾಮಾನ್ಯ ಜನರಲ್ಲೂ ಐತಿಹಾಸಿಕ ಪ್ರಜ್ಞೆ ಮೂಡುತ್ತಿದೆ. ಜನರು ಸತ್ಯ ಯಾವುದು ಕಾಲ್ಪನಿಕರು ಯಾರು ಎಂಬುದನ್ನು ತಿಳಿದುಕೊಳ್ಳುತ್ತಿದ್ದಾರೆ.

ಹಿಂದೆ ನಡೆದ ಸಂಗತಿಗಳನ್ನು ವೈಜ್ಞಾನಿಕವಾಗಿ ಹೇಳುವುದು ಇತಿಹಾಸ, ಸತ್ಯಾನ್ವೇಷಣೆಯು ಇತಿಹಾಸದ ಗುರಿ. ಹೀಗಿರುವಾಗ ಕಾಲ್ಪನಿಕ ದಂತಕತೆಗಳು ಇತಿಹಾಸವಾಗುವುದಿಲ್ಲ. ಇತಿಹಾಸಕಾರರು ಇತಿಹಾಸ ಬರೆಯುವಾಗ ಮೊದಲು ಘಟನೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಸಂಗ್ರಹಿಸಿ, ಅವುಗಳ ಸತ್ಯಾಸತ್ಯತೆಯನ್ನು ವಿಮರ್ಶಿಸಿ, ಆಮೇಲೆ ಮೌಲ್ಯ ನಿರ್ಣಯಿಸಿ ಸತ್ಯವಾದುದನ್ನು ಮಾತ್ರ ಇತಿಹಾಸದಲ್ಲಿ ಬರೆಯುತ್ತಾರೆ. ಇದು ಇತಿಹಾಸ. ನಂಬಲಾಗದ ಕಟ್ಟುಕತೆಗಳು ಇತಿಹಾಸದ ವ್ಯಾಪ್ತಿಗೆ ಬರುವುದಿಲ್ಲ.

ಯಾರು? ಹೇಗೆ? ಎಂದು ಪ್ರಶ್ನಿಸುವ ಈ ಕಾಲದಲ್ಲಿ ಕಾಲ್ಪನಿಕರನ್ನು ಧರ್ಮ ಸ್ಥಾಪಕರೆಂದು ಜನತೆಗೆ ಹೇಳುವುದು ಕಷ್ಟ. ಯಾವುದೇ ಸಂಗತಿಯನ್ನು ಆದರಲ್ಲೂ ಇಂದಿನ ಯುವ ಜನತೆಗೆ ವೈಜ್ಞಾನಿಕವಾಗಿ ಹೇಳಬೇಕು. ಆದುದರಿಂದ ಐತಿಹಾಸಿಕ ಮಹಾಪುರುಷರಾದ ಧರ್ಮಪಿತ ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರೇ ಹೊರತು ಬೇರೆ ಯಾರೂ ಅಲ್ಲ. ಈ ಸತ್ಯವನ್ನು ಒಪ್ಪದಿದ್ದರೆ ಅದು ಇತಿಹಾಸಕ್ಕೆ ಮಾಡಿದ ಸ್ಪಷ್ಟ ಅಪಚಾರವಾಗುತ್ತದೆ. ಶೂನ್ಯ ಸಂಪಾದನೆಯಲ್ಲಿ ಲಿಂಗಾಯತ ಎಂಬ ಪದವನ್ನು ಬಳಸಲಾಗಿದೆ. ಇದರಲ್ಲಿ ಲಿಂಗ ಮತ್ತು ಜಂಗಮ ಸೃಷ್ಟಿಕರ್ತ ಬಸವಣ್ಣನವರೆಂದು ಹೇಳಲಾಗಿದೆ. ಆದ್ದರಿಂದ ಬಸವಣ್ಣನವರು ಸ್ಥಾಪಕರು. ತಾವು ಬಸವಣ್ಣನವರು ಲಿಂಗಾಯತ ಧರ್ಮದ ಸ್ಥಾಪಕರೆಂಬ ಐತಿಹಾಸಿಕ ಸತ್ಯವನ್ನು ಎತ್ತಿಹಿಡಿದು ಅದನ್ನು ಜಗತ್ತಿಗೆ ತಿಳಿಸಿದ ಮಹಾಜಗದ್ಗುರುಗಳಾಗಿದ್ದೀರಿ. ಬಗೆಹರಿಸಲು ಇನ್ನೂ ಅನೇಕ ಸಮಸ್ಯೆಗಳಿವೆ.

ತಮಗೆ ದೇವರು ಆಯಸ್ಸು ಆರೋಗ್ಯ ಸಕಲ ಸಂಪತ್ತನ್ನು ಕೊಡಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ರಾಜಮಣಿ
ಶ್ರೀ ಸು. ಮಲ್ಲಿಕಾರ್ಜುನಪ್ಪನವರ ಹೆಂಡತಿ
ಮತ್ತೀಪುರ, ಕೊಳ್ಳೇಗಾಲು ತಾಲ್ಲೂಕು.

ಓಂ ಶ್ರೀ ಗುರು ಬಸವಲಿಂಗಾಯನಮಃ

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹತ್ತನೆಯ

ಶರಣ ಮೇಳ

1997 ನೆಯ ಜನವರಿ
12,13,14ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಆವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವ ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ 1988ನೆಯ ಇಸವಿ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋಧ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹತ್ತನೆಯ ಶರಣ ಮೇಳವು 1997ನೇ ಇಸವಿಯ ಜನವರಿ 12, 13, 14 ಮತ್ತು 15ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಧರ್ಮ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ:3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ-587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂ : STD 08351-74-838

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂ ಪ್ರೇರಣೆಯ ಕೊಡುಗೆ ನೀಡಿರಿ.

1. ಮಹಾಪೋಷಕರು 5000ರೂ ಮತ್ತು ಮೇಲೆ ಕೊಟ್ಟವರು
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ. (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

80 G ಇನ್‌ಕಮ್ ಟ್ಯಾಕ್ಸ್ ಸೌಲಭ್ಯವನ್ನು ಹೊಂದಿರುವ "ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್" ಶರಣ ಮೇಳದಲ್ಲಿ ಸಕ್ರಿಯವಾಗಿ ಸಹಕರಿಸುತ್ತಿದ್ದು, 80 G ಸೌಲಭ್ಯ ಬೇಕು ಎನ್ನುವ ದಾನಿಗಳು ***Basava Mahamane Charitable Trust*** ಹೆಸರಿನಲ್ಲಿ ಚೆಕ್/ಡ್ರಾಫ್ಟ್‌ಗಳನ್ನು ಕಳುಹಿಸತಕ್ಕದ್ದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು.. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ರಕ್ಷಾ ಪುಟದಲ್ಲಿದೆ. ***State Bank of India, Koodala Sangama***ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು. (S.B.I. ಶಾಖೆ ನಂ. 717)

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗರು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ, ಕೂಡಲಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ-ಭಕ್ತಿಗೀತೆಗಳ ಆಡಿಯೋ ಮತ್ತು ವೀಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1.	ಧರ್ಮ ಗುರು	-	ಮಂತ್ರಪುರುಷ ಬಸವಣ್ಣನವರು
2.	ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.	ಧರ್ಮ ಲಾಂಛನ	-	ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.
4.	ಧರ್ಮ ಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ
5.	ಧರ್ಮ ಧ್ವಜ	-	ಷಟ್ಕೋನ ಸಹಿತ ಬಸವ ಧ್ವಜ
6.	ಧರ್ಮದ ಧ್ಯೇಯ	-	ಜಾತಿವರ್ಣವರ್ಗ ರಹಿತ, ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಕಣ್ಮರೆಯಾದ ನಿಸ್ವಾರ್ಥ ಚೈತನ್ಯ ಶರಣೆ. ವಿ.ಪಿ. ಉಮಾದೇವಿ

ದಕ್ಷ ಆಡಳಿತಗಾರ್ತಿಯಾಗಿ ದುಡಿಯುತ್ತಿದ್ದ ಬಸವ ಧರ್ಮ ಪೀಠದ ನಿಸ್ವಾರ್ಥ ಸೇವಾಮೂರ್ತಿಯಾಗಿದ್ದ ಶರಣೆ. ವಿ.ಪಿ. ಉಮಾದೇವಿಯವರು ದಿ.14-8-1996ರಂದು ಕ್ಯಾನ್ಸರ್ ವ್ಯಾಧಿಯಿಂದ ಜರ್ಜರಿತರಾಗಿ ಮೈಸೂರಿನಲ್ಲಿ ಲಿಂಗೈಕ್ಯರಾದರು. ಪ್ರಚಾರ ಪ್ರಿಯರಲ್ಲದ ಅವರು ಧರ್ಮಪೀಠದಲ್ಲಿ ಹಣಕಾಸಿನ ವ್ಯವಹಾರ, ದಾಸೋಹ ನಿಧಿಯ ನಿರ್ವಹಣೆ ಪುಸ್ತಕ ಮಳಿಗೆ ಮುಂತಾಗಿ ನೋಡಿಕೊಳ್ಳುತ್ತಿದ್ದರು. ಕೊಡಗು ಜಿಲ್ಲೆಯ ಕುಶಾಲ ನಗರದ ಶ್ರೀ ವಿ. ಪುಟ್ಟು ಶೆಟ್ಟಿ ಮತ್ತು ಶ್ರೀಮತಿ ರಂಗಲಕ್ಷ್ಮಮ್ಮ ಅವರ ಸುಪುತ್ರಿಯಾದ ವಿ.ಪಿ. ಉಮಾದೇವಿ ಎಂ.ಎಸ್.ಸಿ ಪದವೀಧರೆ. ಮೈಸೂರಿನಲ್ಲಿ ನನ್ನ ಪ್ರವಚನವಾದಾಗ ತಾವು ಒಂದು ನೌಕರಿಯಲ್ಲಿ ಇರುವುದಾಗಿಯೂ ಕೆಲವು ಸಮಯದಲ್ಲೇ ಅದನ್ನು ತ್ಯಜಿಸಿ ಬರುವುದಾಗಿಯೂ, ಆಶ್ರಯ ನೀಡಬೇಕೆಂದು ಕೋರಿದರು. ಅವರಿಗೆ ಲೌಕಿಕ ಜೀವನದಲ್ಲಿ ಆಸಕ್ತಿಯೇ ಇರಲಿಲ್ಲ. ನಂತರ ಬಂದು ಜವಾಬ್ದಾರಿಯಿಂದ ಅನೇಕ ಕೆಲಸಗಳನ್ನು ವಹಿಸಿಕೊಂಡು ನನ್ನ ಶ್ರಮ ಕಡಿಮೆಗೊಳಿಸಿದರು. ಒಮ್ಮೆ ಅವರ ತಂದೆಯವರಾದ ಶ್ರೀ ಪುಟ್ಟು ಶೆಟ್ಟರಿಗೆ ಪಾರ್ಶ್ವವಾಯುವಾಗಿದೆ ಎಂದು ನೋಡಲು ಹೋದರು. ಒಂದು ಗಡ್ಡೆ ಕಾಣಿಸಿಕೊಂಡಿದೆ ಎಂದು ತಿಳಿಸಿ ಪತ್ರ ಬರೆದರು. ಗಡ್ಡೆಗಳಿಗೆ ಹೋಮಿಯೋಪತಿಯಲ್ಲಿ ಒಳ್ಳೆಯ ಚಿಕಿತ್ಸೆಯಿದೆ ಎಂದು ಮೊದಲು ಚಿಕಿತ್ಸೆ ಆರಂಭಿಸಲಾಯಿತು. ಹೋಮಿಯೋಪತಿ ಚಿಕಿತ್ಸೆ ಉಮಾದೇವಿಯವರ ಮೇಲೆ ಪರಿಣಾಮ ಬೀರಲೇಇಲ್ಲ. ಅನಿವಾರ್ಯವಾಗಿ ಆಲೋಪತಿ ಚಿಕಿತ್ಸೆ ಆರಂಭಿಸಲಾಯಿತು. ನಮ್ಮ ಸಂಸ್ಥೆಯಿಂದ (ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್) 55000-00 (ಐವತ್ತೈದು ಸಾವಿರ) ರೂಗಳನ್ನು ಖರ್ಚು ಮಾಡಿದೆವು. ಈ ಅವಧಿಯಲ್ಲಿ ಪರಮ ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳು ಹಿರಿಯೂರಿನಲ್ಲಿ ಪ್ರವಚನ ಮಾಡುವಾಗ ಲಿಂಗೈಕ್ಯರಾದರು. ನಮ್ಮ ಸಂಸ್ಥೆಯ ಆದಾಯ ಮೂಲವು ಬತ್ತಿಹೋಯಿತು. ಅಗಾಧವಾದ ಖರ್ಚು ಬರುವ ಕ್ಯಾನ್ಸರ್ ವ್ಯಾಧಿಗೆ ಚಿಕಿತ್ಸೆ ಮುಂದುವರಿಸಲು ನಮ್ಮ ಕೈಲಿ ಆಗದೇ ಹೋಯಿತು. ಅಲ್ಲಿಯವರೆಗೂ ಉಮಾದೇವಿಯವರ ತಾಯಿತಂದೆ, ಸೋದರರಿಗೆ ನಿಜ ಸಂಗತಿ ತಿಳಿಸಿ ಗಾಬರಿ ಮಾಡುವ ಅವಸರ ಮಾಡಿರಲಿಲ್ಲ. ನಮ್ಮ ಕೈಸೋತಾಗ ಅನಿವಾರ್ಯವಾಗಿ ತಿಳಿಸಬೇಕಾಯಿತು. ಬಹಳ ಸುಸಂಸ್ಕೃತರು, ಸದ್ಭಾವಿಗಳೂ ಆದ ಅವರು ಖರ್ಚು ಎಷ್ಟೇ ಬರಲಿ ಚಿಕಿತ್ಸೆ ಮುಂದುವರಿಸಬೇಕು ಎಂದು ತಿಳಿಸಿ, ಮುಂದಿನ ಖರ್ಚು ಅವರೇ ನೋಡಿಕೊಂಡರು. ಸುಮಾರು ಒಂದೂ ಮುಕ್ಕಾಲು ಲಕ್ಷ ಖರ್ಚಾಗಿರಬಹುದೇನೊ, ಇಷ್ಟು ಪ್ರಯತ್ನದಿಂದಲೂ ಚಿಕಿತ್ಸೆ ಯಶಸ್ವಿಯಾಗಲಿಲ್ಲ ಬೆಂಗಳೂರಿನ ಕ್ಯಾನ್ಸರ್ ಪರಿಣಿತರು, ಇನ್ನು ಉಮಾದೇವಿಗೆ ವಾಸಿಯಾಗದು. ಅತ್ಯಂತ ನೋವಿನ ಚಿಕಿತ್ಸೆಗಳಿವು. ಇನ್ನು ಎರಡು ತಿಂಗಳು ಇದ್ದರೆ ಹೆಚ್ಚುಆದ್ದರಿಂದ ಅವರು ತಮ್ಮ ಬಂಧುಗಳ ಜೊತೆಗಿರಲಿ.'' ಎಂದು ಸೂಚಿಸಿದರು. ಮೈಸೂರು ಪ್ರಶಾಂತ ಮತ್ತು ಹವಾ ಮಾಲಿನ್ಯವಿಲ್ಲದ ನಗರವಾದ್ದರಿಂದ ಮೈಸೂರು ಸೋದರರ ಮನೆಯಲ್ಲೇ ಇದ್ದು, ದಿ. 14-8-1996ರಂದು ಶರಣೆ ಉಮಾದೇವಿ ನರ್ಸಿಗ್ ಹೋಂದಲ್ಲಿ ದಿವಂಗತರಾದರು.

ಅವರ ಕೆಲವೊಂದು ಗುಣಗಳನ್ನು ಪ್ರಾಣಬಿಡುವ ಕೆಲವು ಹಿಂದಿನ ದಿನಗಳ ವರ್ತನೆಯನ್ನು ಗಮನಿಸಬೇಕು. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಶರಣೆ ಉಮಾದೇವಿಯವರಿಗೆ ಸನ್ಯಾಸ ಜೀವನಕ್ಕೆ ಬಂದುದರಿಂದ ಅವರ ತಾಯಿ-ತಂದೆ ನಲವತ್ತು ಸಾವಿರ ರೂಗಳನ್ನು ಒತ್ತಾಯದಿಂದ ಕೊಟ್ಟರು. ಅದನ್ನು ತಂದು ಸಮರ್ಪಿಸಿ "ಹಣ ಇಟ್ಟುಕೊಂಡು ನಾನೇನು ಮಾಡಲಿ? ಎಲ್ಲ ಖರ್ಚುವೆಚ್ಚ ನೀವೇ ನೋಡಿಕೊಳ್ಳುತ್ತೀರಿ ಇದನ್ನು

ಧರ್ಮ ಗ್ರಂಥ ನಿಧಿಗೆ ತೆಗೆದುಕೊಳ್ಳಿ. ಆ ಪುಸ್ತಕ ಲೋಕದ ಅಜ್ಞಾನ ತೊಡೆಯುವಂತೆ ಆಗಬೇಕು" ಎಂದು ಕೊಟ್ಟು ಬಿಟ್ಟರು.

"ಮಾತಾಜಿಯವರ ದರ್ಶನ ಪಡೆಯುವ ಮುನ್ನವೇ ಎಲ್ಲಿ ನಾನು ಪ್ರಾಣ ಬಿಡುತ್ತೇನೋ" ಎಂದು ಪರಿತಪಿಸುತ್ತಿದ್ದರು. ಆಗ ನಾನು ಬಸವೇಶ್ವರ ವಿಶ್ವವಿದ್ಯಾಲಯ ನಾಮಕರಣ ಚಳುವಳಿಯಲ್ಲಿ ತೊಡಗಿ ಗುಲಬರ್ಗಾ ಬೀದರ ಕಡೆ ಸಂಚರಿಸುತ್ತಿದ್ದೆನು. ನಾನು ಬಂದ ಮೇಲೆ ಸಮಾಧಾನ ಪಟ್ಟರು. ಮೈಸೂರಿಗೆ ಹೋಗುವ ಮುನ್ನ ತಮ್ಮ ಮನಸ್ಸಿನ ಹಂಬಲವನ್ನು ಮುಂದಿಟ್ಟರು.'' ನಮ್ಮ ಮನೆಯವರು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದಾರೆ ನಾನು ನೌಕರಿ ಮಾಡಿ ಗಳಿಸಿದ ಹಣ ನನ್ನದಾಗಿ ಇದೆ. ಪೋಸ್ಟಿನಲ್ಲಿ ಇಟ್ಟು ಬಂದಿದ್ದೆ ಅದಕ್ಕೆಲ್ಲ ನಿಮ್ಮ ಹೆಸರನ್ನೇ ನಾಮಕರಣ ಮಾಡಿದ್ದೇನೆ. ನನ್ನಿಂದ ನಮ್ಮ ತಾಯಿ-ತಂದೆ, ಸೋದರ-ಸೋದರಿಯರು ಹಣ ಕೇಳುವುದಿಲ್ಲ. ಮೇಲಾಗಿ ಇಂದು/ಈ ಸಂಸ್ಥೆಗೆ ಎಷ್ಟೇ ಧನ ಸಹಾಯ ಒದಗಿದರೂ ಅದು ಸಾರ್ಥಕವಾಗುತ್ತದೆ. ನಿಮ್ಮ ಯೋಜನೆಗಳು ಅದ್ಭುತವಾಗಿವೆ. ಎಷ್ಟು ಜನರಿಗೆ ಆಶ್ರಯ ನೀಡಿದ್ದೀರಿ. ಪೂಜ್ಯ ಅಪ್ಪಾಜಿಯವರು ಲಿಂಗೈಕ್ಯರಾದ ಮೇಲೆ ಆರ್ಥಿಕ ಸಂಪನ್ಮೂಲದ ಕೊರತೆಯಾಗಿದೆ. ಆದ್ದರಿಂದ ನಿಮ್ಮ ಯೋಜನೆಗಳೆಲ್ಲ ನನಸಾಗಲು ಹಣದ ನೆರವು ಬೇಕು. ಅದಕ್ಕಾಗಿ ನಾನು ನೌಕರಿ ಮಾಡಿ ಸಂಗ್ರಹಿಸಿದ್ದನ್ನು ಸಂಸ್ಥೆಗೇ ನೀಡುತ್ತೇನೆ" ಎಂದು ಹೇಳಿದರಲ್ಲದೆ, ಅವರ ತಾಯಿ ಶ್ರೀಮತಿ ರಂಗಲಕ್ಷ್ಮಮ್ಮ ಮತ್ತು ತಂದೆ ಶ್ರೀ ಪುಟ್ಟುಶೆಟ್ಟಿ ಮತ್ತು ಅವರ ತಂದೆಯವರಾದ ದಾನಬುದ್ಧಿಯ ಶ್ರೀ ವೆಂಕಟ ಸುಬ್ಬಶೆಟ್ಟಿಯವರ ಸ್ಮರಣಾರ್ಥ ಮತ್ತು ತಾಯಿ ಶ್ರೀರಂಗಲಕ್ಷ್ಮಮ್ಮ ಅರಸೀಕೆರೆ ಇವರ ಹೆಸರಿನಲ್ಲಿ ದಾಸೋಹವನ್ನು ಶರಣ ಮೇಳದ ಸಮಯದಲ್ಲಿ ಮಾಡಬೇಕು ಎಂದರು. ಹುಟ್ಟಿನಿಂದ ವೈಶ್ಯರಿದ್ದರೂ ಲಿಂಗಾಯತ ಧರ್ಮಾನುಯಾಯಿಯಾದ್ದರಿಂದ ಇದರ ಪ್ರಕಾರವೇ ಸಂಸ್ಕಾರವಾಗಬೇಕು ಎಂದರು. ನನಗೆ ಬಸವ ಗುರುವಿನ, ಬಸವ ಧರ್ಮ ಪೀಠದ ಸೇವೆ ಬಹಳಷ್ಟು ಮಾಡಬೇಕೆಂದಿತ್ತು. ಆ ಆಸೆ ನೆರವೇರಲಿಲ್ಲ". ಎಂದು ಪರಿತಪಿಸಿದರು. ಕಡೆಯ ದಿನಗಳನ್ನು ಕಳೆಯುವಾಗಲಂತೂ ಸದಾ ಮಂತ್ರ ಜಪ, ಇನ್ನೊಂದು ಜನ್ಮವೆತ್ತಿಯಾದರೂ ಬಸವ ಗುರುವಿನ ಸೇವೆ ಮಾಡಬೇಕೆಂಬ ಕನವರಿಕೆ. ಬೆಂಗಳೂರಿಂದ ಶರಣ ವಿಶ್ವೇಶ್ವರಯ್ಯ ಎಂಬುವವರು ನೋಡಲು ಹೋಗಿದ್ದರು ಆಶೀರ್ವಾದ ಪತ್ರ ಕೊಟ್ಟು ಕಳಿಸಿದೆ. ಮಾತಾಜಿಯವರಿಗೆ ಏನು ಹೇಳಬೇಕು ಎಂದು ಇವರು ಕೇಳಿದರೆ, ಚೆನ್ನಾಗಿದ್ದಾರೆ, ಸುಧಾರಿಸಿಕೊಂಡಿದ್ದಾರೆ ಎಂದು ಹೇಳಿರಿ. ಮಾತಾಜಿಯವರಿಗೇ ಅನೇಕ ಕೆಲಸ, ಒತ್ತಡ ನನ್ನ ಬಗ್ಗೆ ಅವರು ಚಿಂತಿಸುವಂತಾಗಬಾರದು" ಎಂದರಂತೆ. ಅಂತೂ ಯಾವ ಜನ್ಮದ ಕರ್ಮಫಲವೋ ಕ್ಯಾನ್ಸರ್ ಎಂಬ ಪೀಡೆ ದಿ. 14-8-1996ರಂದು ಅವರನ್ನು ದೇಹದಿಂದ ಬಂಧಮುಕ್ತಗೊಳಿಸಿತು.

ಮೈಸೂರು-ಬೆಂಗಳೂರು ರಾಷ್ಟ್ರೀಯ ಬಸವದಳದವರು ಲಿಂಗೈಕ್ಯ ಸಂಸ್ಕಾರ ನೆರವೇರಿಸಿದರು. ಮೈಸೂರು ರಾಷ್ಟ್ರೀಯ ಬಸವ ದಳದ ಶರಣೆ ಸರೋಜಮ್ಮ ನಾಗರಾಜು ಅವರ ನೇತೃತ್ವದಲ್ಲಿ ಬಸವ ಮಂದಿರದಲ್ಲಿ ಭಾನುವಾರ ದಿ. 1-9-96 ರಂದು ಶರಣ ಗಣ ದಾಸೋಹ, ಸಾಮೂಹಿಕ ಪ್ರಾರ್ಥನೆ-ಲಿಂಗೈಕ್ಯರ ಸಂಸ್ಮರಣೆ ವಿಧಿವತ್ತಾಗಿ ನಡೆದವು. ಇಂಥ ಓರ್ವ ನಿಷ್ಠಾವಂತ ಕಾಯಕ ಜೀವಿಯನ್ನು ಕಳೆದುಕೊಂಡುದು ನಮ್ಮ ಸಂಸ್ಥೆಗೆ ತುಂಬಿ ಬಾರದ ನಷ್ಟ. ಲಿಂ|| ಉಮಾದೇವಿಯವರ ಅತ್ಯುತ್ಕಟ ಹಂಬಲದಂತೆ ಅವರು ಹೊಸ ಜನ್ಮ ತಳೆದು ಬಂದು ಬಸವ ಗುರುವಿನ ಸೇವೆಯನ್ನು ಮಾಡುವಂತಾಗಲಿ ಎಂದೇ ಹಾರೈಸೋಣ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಬಸವೇಶ್ವರ ವಿಶ್ವವಿದ್ಯಾಲಯವೆಂದು ಗುಲಬರ್ಗಾ ವಿ.ವಿಗೆ ಹೆಸರಿಡಲು ಆಗ್ರಹಿಸುವ ಚಳುವಳಿ ಕುರಿತು

ಶರಣ ಬಂಧುಗಳೇ,

ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ಹೆಸರನ್ನಿಡಲು ಆಗ್ರಹಿಸಿ ಸರ್ಕಾರಕ್ಕೆ 1996ರ ಜನವರಿ 21ರಂದು ಮನವಿ ನೀಡಿ ಕಾರ್ಯಾಚರಣೆಗಾಗಿ ಫೆಬ್ರವರಿ 12ರವರೆಗೆ ಸಮಯ ನೀಡಿ, ಸರ್ಕಾರ ಗಮನ ಕೊಡದ್ದರಿಂದ ಫೆಬ್ರವರಿ 13ರಿಂದ ಚಳುವಳಿ ಪ್ರಾರಂಭಿಸಲಾಯಿತು. ವಿವಿಧ ಹಂತದ ಕಾರ್ಯಕ್ರಮ ನಡೆಸಲಾಯಿತು. ಇದೆಲ್ಲ ತಮಗೆ ಗೊತ್ತೇ ಇದೆ. ಅಸೆಂಬ್ಲಿ ಅಧಿವೇಶನ ಮುಗಿಯುವವರೆಗೆ ಚಳುವಳಿಯನ್ನು ತೀವ್ರಗೊಳಿಸಬಾರದೆಂದು, ಅಸೆಂಬ್ಲಿ ಮುಗಿದ ನಂತರ ಈ ಬಗ್ಗೆ ಗಮನ ಹರಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಜೆ.ಹೆಚ್. ಪಟೇಲರು ತಮ್ಮ ಪ್ರತಿನಿಧಿಗಳ ಮೂಲಕ ನೇರವಾಗಿ ಮತ್ತು ಪ್ರಸಾರ ಮಾಧ್ಯಮಗಳ ಮೂಲಕ ಮನವಿ ಮಾಡಿಕೊಂಡರು. ಅದಕ್ಕೆ ಮಾನ್ಯತೆ ನೀಡಿ ಚಳುವಳಿಯನ್ನು ತೀವ್ರಗೊಳಿಸಲಿಲ್ಲ. ಬೀದರ ಮತ್ತು ಗುಲ್ಬರ್ಗಾಗಳಲ್ಲಿ, ನಿರಂತರವಾಗಿ ನಡೆಯುತ್ತಿರುವ ಸರತಿ ಸತ್ಯಾಗ್ರಹವನ್ನು ಅದೇ ಟೆಂಟ್‌ಗಳಲ್ಲಿ ಮುಂದುವರಿಸಲಾಗಿದೆ. ಬಸವೇಶ್ವರ ಹೆಸರನ್ನಿಡುವ ಕಾರ್ಯವನ್ನು ಸರ್ಕಾರ ಪೂರ್ಣಗೊಳಿಸಿದ ಮೇಲೆಯೇ ಈ ಎರಡೂ ಕಡೆಯ ಟೆಂಟ್‌ಗಳನ್ನು ತೆಗೆಯುವ ಸಂಕಲ್ಪವನ್ನು ಶರಣರು ಹೊಂದಿದ್ದಾರೆ. ಅಕ್ಟೋಬರ್ 2 ರಿಂದ ಜೈಲ್ ಭರೋ ಕಾರ್ಯಕ್ರಮ ಹಮ್ಮಿಕೊಂಡು ಸಿದ್ಧತೆ ಮಾಡಲಾಗುತ್ತಿತ್ತು. ಆದರೆ ಮಹತ್ವಪೂರ್ಣವಾದ ಒಂದು ಕಾರ್ಯನಿಮಿತ್ತ ನಾನು ಪ್ರವಾಸ ಹೋಗಬೇಕಾಗಿರುವುದರಿಂದ (ಜನವರಿಯಲ್ಲಿ ಶರಣಮೇಳ ಮುಗಿದ ಮೇಲೆ ಫೆಬ್ರವರಿಯಲ್ಲೇ ಹೋಗಬೇಕಾಗಿತ್ತು. ವಿ.ವಿ. ನಾಮಕರಣ ಚಳುವಳಿಯಿಂದಾಗಿ ಹೋಗಲಾಗಲಿಲ್ಲ) ಹೊರಟಿದ್ದೇನೆ. ನಮ್ಮ ಅನುಪಸ್ಥಿತಿಯಲ್ಲಿ ಚಳುವಳಿಯ ರೂಪುರೇಷೆ ನಿರ್ಧರಿಸಲು ಮತ್ತು ರಾಸ್ತಾರೋಖೋ, ಜೈಲ್ ಭರೋ ಮುಂತಾಗಿ ಹಮ್ಮಿಕೊಳ್ಳಲು, ದಿನಾಂಕಗಳನ್ನು ನಿಶ್ಚಯಿಸಲು ರಾಷ್ಟ್ರೀಯ ಬಸವದಳ ರಾಜ್ಯ ಸಮಿತಿಯ ಅಧ್ಯಕ್ಷರಾದ ಶರಣ. ಬಸವ ಕುಮಾರ್ ಪಾಟೀಲರಿಗೆ ಮತ್ತು ಉಪಾಧ್ಯಕ್ಷರಾದ ಶರಣ ಆರ್.ಜಿ. ಶೆಟಗಾರ ಅವರಿಗೆ ಜವಾಬ್ದಾರಿ ವಹಿಸಿಕೊಡಲಾಗಿದೆ. ಬೀದರ ಗುಲಬರ್ಗಾದ ಇನ್ನಿತರ ಹಿರಿಯರ, ಗಣ್ಯರ ಸಲಹೆ-ಸೂಚನೆ ಪಡೆದು ಬಳ್ಳಾರಿ-ರಾಯಚೂರು ರಾ.ಬ. ದಳಗಳೊಡನೆ ಸಮಾಲೋಚಿಸಿ ಚಳುವಳಿಯ ದಿನಾಂಕ ಮತ್ತು ರೂಪುರೇಷೆ ಕುರಿತು ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷ ಬಸವ ಕುಮಾರ್ ಪಾಟೀಲರು ಪತ್ರಿಕಾ ಹೇಳಿಕೆ ಮೂಲಕ, ಸುತ್ತೋಲೆಯ ಮೂಲಕ ತಿಳಿಸಬಹುದು. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವ ದಳ ಮತ್ತು ಇನ್ನಿತರ ಬಸವಾಭಿಮಾನಿ ಸಂಘ-ಸಂಸ್ಥೆಗಳು, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣದ ಸದಸ್ಯರು ರಾಜ್ಯ ಸಮಿತಿಯ ಅಭಿಪ್ರಾಯಕ್ಕೆ ಸ್ಪಂದಿಸಿ, ಚಳುವಳಿಯಲ್ಲಿ ಸಕ್ರಿಯವಾಗಿ ಪಾಲುಗಾರರಾಗಬೇಕೆಂದು ಸೂಚಿಸುತ್ತೇವೆ.

ರಾಷ್ಟ್ರೀಯ ಬಸವದಳ
ಕೂಡಲ ಸಂಗಮ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಕೇಂದ್ರ ಸಮಿತಿ

ಶರಣ ಮೇಳ ಉತ್ಸವ ಸಮಿತಿಯ ಪದಾಧಿಕಾರಿಗಳು

ಅನುಗ್ರಹ :

ಲಿಂ|| ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಬಸವ ಧರ್ಮದ ಮಹಾಜಗದ್ಗುರು ಪೀಠ,
ಮಹಾಮನೆ, ಮಹಾಮಠ, ಕೂಡಲ ಸಂಗಮ.

ಕಾರ್ಯಾಧ್ಯಕ್ಷರು :

ಪೂಜ್ಯ ಶ್ರೀ ಮಹಾ ಜಗದ್ಗುರು
ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

ಪ್ರಧಾನ ಕಾರ್ಯದರ್ಶಿ :

ಶರಣ ಎನ್. ಪುಟ್ಟರುದ್ರಪ್ಪ
ನಿವೃತ್ತ ಸೂ. ಇಂಜನಿಯರ್, ಬೆಂಗಳೂರು.

ಕಾರ್ಯದರ್ಶಿಗಳು :

ಶರಣ. ವಿಜಯಾನಂದ, ಬೆಂಗಳೂರು
ಶರಣ. ಕೊಂಡಜ್ಜಿ ಜಿ. ಬಸಪ್ಪ, ಬೆಂಗಳೂರು

ಕೋಶಾಧ್ಯಕ್ಷರು :

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ
ಜಗನ್ಮಾತಾ ಅಕ್ಕಮಹಾದೇವಿ ಮಠ, ಧಾರವಾಡ

ಸಂಚಾಲಕರು :

ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಪೂಜ್ಯ ಶ್ರೀ ಮಾತೆ ದಾನೇಶ್ವರಿದೇವಿ
ಪೂಜ್ಯ ಶ್ರೀ ಮಾತೆ ಬಸವರತ್ನಾದೇವಿ

ಪ್ರಧಾನ ಸಂಘಟಕರು :

ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ
ಪೂಜ್ಯ ಶ್ರೀ ನಿಜಗುಣಾನಂದ ಸ್ವಾಮಿ,

ವಲಯ ಸಂಘಟಕರು-ಗಣನಾಯಕರು:

ಶರಣ. ಬಸವಕುಮಾರ ಪಾಟೀಲ, ಬೀದರ
ಶರಣ. ಡಾ|| ನಿತೀನಚಂದ್ರ ಹತ್ತೀಕಾಳ,
ಧಾರವಾಡ
ಶರಣ. ಅಶೋಕ ಗುಡ್ಡೋಡಗಿ
ಶರಣ. ಬಸವರಾಜೇಂದ್ರಪ್ಪ
ಶರಣ. ಆರ್. ಚಂದ್ರಶೇಖರ್, ನೀಲಗಿರಿ
ಶರಣ. ಸುಭಾಷ್ ಪಾಟೀಲ, ಹೈದರಾಬಾದ್
ಶರಣ. ಆರ್.ಜಿ. ಶೆಟಗಾರ, ಗುಲಬರ್ಗಾ
ಶರಣೆ. ದೇವಿಕಾ ಶರಣಪ್ಪ, ಬೆಂಗಳೂರು
ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ,
ಈಚಲಕರಂಜಿ
ಶರಣೆ. ಸರೋಜಮ್ಮ ನಾಗರಾಜ, ಮೈಸೂರು
ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಶರಣೆ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಶರಣೆ, ಅನ್ನಪೂರ್ಣ ಹಂಗರಗಿ, ಬೀದರ

ಸಲಹಾ ಸಮಿತಿ :

ಶರಣ. ಡಿ.ಎಂ. ಚಂದ್ರಶೇಖರ್
ಶರಣೆ. ರಾಣಿ ಸತೀಶ್
ಉಪಸಭಾಪತಿ, ವಿಧಾನ ಪರಿಷತ್ತು
ಶರಣ. ಬಿ.ಎಸ್. ಪರಮಶಿವಯ್ಯ, ಬೆಂಗಳೂರು
ಶರಣ. ಬಿ.ಟಿ. ಉಮೇಶ್, ಬೆಂಗಳೂರು
ಶರಣ. ಜಿ. ಶಿವಕುಮಾರ್, ಬೆಂಗಳೂರು
ಶರಣ. ಆರ್.ಜಿ. ಶಿವಕುಮಾರ್, ಬೆಂಗಳೂರು
ಶರಣ. ರಾಜಶೇಖರ ಮಡಕಿ,
ಬಸವ ಸೆಂಟರ್, ಸೊಲ್ಲಾಪುರ
ಶರಣೆ. ಎಸ್.ಜಿ. ಸುಶೀಲಮ್ಮ
ಸುಮಂಗಲಿ ಸೇವಾಶ್ರಮ, ಬೆಂಗಳೂರು
ಶರಣ. ಆರ್.ಬಿ. ಹೆಬ್ಬಳ್ಳಿ, ಮುಂಬಯಿ

ವಿಭಾಗೀಯ ಸಂಘಟಕರು :
ತಮಿಳುನಾಡು :

ಶರಣ. ಪಚ್ಚೂರು ನಾಗಪ್ಪ, ಪುದುಪೇಟೆ
ಶರಣ. ಬಿ.ಎಸ್. ಜಗದೀಶ್, ಗುಡಿಯಾತ್ತಂ
ಶರಣ. ಮನೋಹರನ್, ಕೂನೂರು
ಶರಣ. ಶಿವಯ್ಯ ದೇನಾಡು, ನೀಲಗಿರಿ
ಶರಣ. ಪಿ.ಶಿವಲಿಂಗಪ್ಪ, ಅಂಬೂರು
ಶರಣ. ಜಿ.ಆರ್. ಬಸವರಾಜನ್, ಮದ್ರಾಸ್

ಮಹಾರಾಷ್ಟ್ರ :

ಶರಣ. ರಾವ್‌ಸಾಹೇಬ ಬಾಪೂಸಾಹೇಬ-
ಕಿತ್ತೂರಕರ, ಗಡಹಿಂಗ್ಲಾಜ್
ಶರಣ. ಶಿವಕುಮಾರ್ ಹಸರಗುಂಡೆ, ಉದಗೀರ
ಶರಣ. ಶಿವಶಂಕರಪ್ಪ ಕಾಡಾದಿ, ಸೊಲ್ಲಾಪುರ
ಶರಣ. ಎ.ಬಿ. ಅಮಾಸಿ, ಕಣ್‌ಕವಲಿ.
ಶರಣ. ಶಿವಪುತ್ರಪ್ಪ ಹೋಳಿಕಟ್ಟಿ, ಮೈಂದರ್ಗಿ
ಶರಣ. ಎಸ್.ಎಸ್. ಪೂಜಾರ, ಮೀರಜ
ಶರಣ. ಡಾ|| ಎಂ.ಎಸ್. ಮಾಲಂಗ, ಉಮರ್ಗಾ
ಶರಣ. ಡಾ|| ಅಶೋಕ ಏಳಾಪುರ, ಉಮರ್ಗಾ

ಆಂಧ್ರಪ್ರದೇಶ :

ಶರಣ. ಸುಭಾಷ್ ಪಾಟೀಲ, ಹೈದರಾಬಾದ
ಶರಣ. ಬಸವರಾಜ ಕೊಂಡಾ, ಮಹಬೂಬನಗರ
ಶರಣ. ಅಡಿವೆಪ್ಪ ಚಂದ್ರೆ, ಜಹಿರಾಬಾದ
ಶರಣ. ಸುರೇಶ ಕೋರೆ, ಹೈದರಾಬಾದ

ಕರ್ನಾಟಕ :

ಶರಣ. ಜೆ. ಬಸಪ್ಪ, ವಕೀಲರು, ಗಂಗಾವತಿ
ಶರಣ. ಶಿವರಾಜಪಾಟೀಲ, ಅತಿವಾಳ, ಬೀದರ
ಶರಣ. ವಿ.ಜಿ. ಸತ್ಯನಾರಾಯಣಶೆಟ್ಟರು
ಚಿತ್ರದುರ್ಗ
ಶರಣ. ಎಸ್. ಶರಣಪ್ಪ, ಚಳ್ಳಕೆರೆ
ಶರಣ. ಎ.ಸಿ. ಪಟ್ಟಣದ, ಬಾದಾಮಿ
ಶರಣ. ಎಸ್.ಬಿ. ಸುಲ್ತಾನಪುರಿ, ಬೆಳಗಾಂವ
ಶರಣ. ಬಸವರಾಜ ಕೋರಿವಾಲೆ, ನಿಪ್ಪಾಣಿ
ಶರಣ. ಅಶೋಕ ದುಮಾಲೆ, ನಿಪ್ಪಾಣಿ
ಶರಣ. ಡಾ|| ಎ.ಆರ್. ಕಡಗೋಳ, ಗೋಕಾಕ
ಶರಣ. ಡಾ|| ಸಿ.ಪಿ. ಪಟ್ಟಣಶೆಟ್ಟಿ, ಗೋಕಾಕ
ಶರಣ. ಸಿ. ಬಸವರಾಜು, ತುಮಕೂರು
ಶರಣ. ಗಣೇಕಲ್ ಶರಣಪ್ಪ, ರಾಯಚೂರು
ಶರಣ. ಶಂಕರಪ್ಪ ಮಹಾಂತಗೋಳ, ಗುಲಬರ್ಗಾ
ಶರಣ. ವಿರುಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ಶರಣ. ಜಿ.ಟಿ. ಬಸವರಾಜಪ್ಪ, ಸಿರುಗುಪ್ಪ
ಶರಣ. ಬೀರಳ್ಳಿ ರಾಮರೆಡ್ಡಿ, ಸಿರುಗುಪ್ಪ
ಶರಣೆ. ಅನ್ನಪೂರ್ಣಮ್ಮ, ಕೊರಟಗೆರೆ

ಶರಣ. ಡಿ.ಜಿ. ಚೌಗಲಾ, ಖವಟಕೊಪ್ಪ
ಶರಣ. ಡಾ|| ಆರ್.ಬಿ. ಕಾಲತಿಪ್ಪಿ, ತೇರದಾಳ

ಸ್ವಾಗತ ಸಮಿತಿ :
ಪೋಷಕಾಧ್ಯಕ್ಷರು :
ಶರಣ. ಕೆ.ಆರ್. ಸೋಮಶೇಖರ್
ಶ್ರೀ ಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್

ಗೌರವಾಧ್ಯಕ್ಷರು :

ಶರಣ. ಜಿ.ಎನ್. ಬಸವರಾಜು
ಉಮಾಶಂಕರ್ ಎಲೆಕ್ಟ್ರಿಕಲ್ಸ್, ಬೆಂಗಳೂರು

ಕಾರ್ಯಾಧ್ಯಕ್ಷರು :

ಶರಣ. ಎಸ್. ಲಿಂಗಣ್ಣ, ಚಿತ್ರದುರ್ಗ

ಉಪಾಧ್ಯಕ್ಷರು :

ಶರಣ. ವಿ.ಜಿ. ಷಣ್ಮುಗಮ್, ಬ್ಲೆಂಡ್‌ಪ್ಯಾಕ್,
ಬೆಂಗಳೂರು
ಶರಣ. ಬಿ.ಎಂ. ಹೊರಕೇರಿ, ಬಾದಾಮಿ
ಶರಣ. ಕೆ.ಆರ್. ಪರಂಜ್ಯೋತಿ, ಬೆಂಗಳೂರು
ಶರಣ. ವಿರುಪಾಕ್ಷಪ್ಪ ಅಂಗಡಿ
ರಾ.ಬ.ದಳ, ಬೆಳಗಾಂವ
ಶರಣ. ಎಸ್. ಯಲ್ಲಯ್ಯ, ಸಿರುಗುಪ್ಪ

ಸಂಚಾಲಕ ಸಮಿತಿ :
ಅಧ್ಯಕ್ಷರು :

ಶರಣ. ಬಸವರಾಜ ಲುಕ್ಕ, ಬಾಗಲಕೋಟೆ

ಉಪಾಧ್ಯಕ್ಷರು :

ಶರಣ. ಜಿನಕೇರಿ ಷಡಕ್ಷರಪ್ಪ
ಶರಣ. ಹೆಚ್.ಎಸ್. ಬಸವರಾಜು
ಶರಣ. ಟಿ.ಎಂ. ದಾಸಪ್ಪ, ತಿಪಟೂರು

ಸೇವೆ :

ಬಸವ ಧರ್ಮ ಸಂಸತ್ ಸದಸ್ಯರು
ರಾಷ್ಟ್ರೀಯ ಬಸವ ದಳಗಳ ಸದಸ್ಯರು

ಅಪ್ರತಿಮ ವಾಗ್ಮಿ; ಪ್ರವಚನ ಪಿತಾಮಹ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿ

- ಎ.ಜಿ. ವಿರೂಪಾಕ್ಷಪ್ಪ, ದಾವಣಗೆರೆ

ಧಾರ್ಮಿಕ ಕ್ಷೇತ್ರದಲ್ಲಿ ಅವರವರ ಶ್ರದ್ಧೆ ಮತ್ತು ನಂಬುಗೆಗೆ ಪಾತ್ರವಾದ ತತ್ತ್ವ ಸಿದ್ಧಾಂತಗಳನ್ನು ಪ್ರಚಾರಗೊಳಿಸಲು ಆಸ್ತಿಕರು, ಪಂಡಿತರು ಮತ್ತು ಮಠ-ಪೀಠಗಳ ಅಧಿಕಾರಿಗಳು ಬಗೆಬಗೆಯ ವಿಧಾನಗಳನ್ನು ಅನುಸರಿಸುತ್ತಾರೆ. ಕೆಲವರು ಕೀರ್ತನಗಳ ಮೂಲಕ, ಕೆಲವರು ನಾಟಕ-ಗಾಯನ ಉಪನ್ಯಾಸಗಳ ಮೂಲಕ, ಮತ್ತೆ ಕೆಲವರು ವಿದ್ವತ್‌ಪೂರ್ಣ ಲೇಖನಗಳ ಮೂಲಕವೂ ತತ್ತ್ವಪ್ರಚಾರ ಮಾಡುವುದು ಬಹುಕಾಲದಿಂದಲೂ ನಡೆದು ಬಂದ ರೂಢಿ.

ಆದರೆ ಪರಮ ಪೂಜ್ಯ ನಿಜೈಕ್ಯ ಲಿಂಗಾನಂದ ಮಹಾಸ್ವಾಮಿಗಳವರು ತಾವು ನೆರೆನಂಬಿದ ಬಸವಾದಿ ಪ್ರಮಥರ ತತ್ತ್ವ ಸಿದ್ಧಾಂತ, ವಚನ ಸಾಹಿತ್ಯಗಳನ್ನು ಜನಮನದಲ್ಲಿ ಬಿತ್ತಲು ಬಳಸಿಕೊಂಡ ಮಾಧ್ಯಮವೆಂದರೆ ಪ್ರವಚನಗಳು. ಪ್ರವಚನವೆಂಬುದು ಕೀರ್ತನ-ಪುರಾಣ ಇತ್ಯಾದಿ ಸಂಪ್ರದಾಯಿಕ ಮಾರ್ಗಗಳಿಗಿಂತ ಭಿನ್ನವಾದುದು. ಇದು ಲೇಖನ ಭಾಷಣಗಳಂತೆ ಪಂಡಿತ ರಂಜಕವೂ ಅಲ್ಲದ, ನಾಟಕ ರೂಪಕಗಳಂತೆ ಜನಸಾಮಾನ್ಯರ ರಂಜಕವೂ ಅಲ್ಲದ ಒಂದು ವಿಶಿಷ್ಟ ವಿಧಾನ. ಅದರಲ್ಲಿಯೂ ಪೂಜ್ಯ ಲಿಂಗಾನಂದ ಸ್ವಾಮೀಜಿಯವರು ಅನುಸರಿಸುತ್ತಿದ್ದ ಪ್ರವಚನ ಧಾಟಿ ಅತಿ ವಿಶಿಷ್ಟವಾದುದು. ಅವರ ಭಾಷೆ ಎಷ್ಟು ಸರಳವೋ, ಅಷ್ಟೇ ನಿಷ್ಠುರ ಮತ್ತು ನಿಖರವಾಗಿರುತ್ತಿತ್ತು. ಬಸವಾದಿ ಶಿವಶರಣರ ಲೋಕ ಕಲ್ಯಾಣಕರ ವಿಚಾರಧಾರೆಯನ್ನು ನಿರರ್ಗಳವಾಗಿ ಪ್ರತಿಪಾದಿಸುತ್ತ, ಸಂಕುಚಿತವಾದಿಗಳನ್ನು ಮತ್ತು ಸಂಶಯವಾದಿಗಳನ್ನು ನಿರಾಯಾಸವಾಗಿ ಒಡಂಬಡಿಸುವ ಅವರ ವಾಕ್ಪಟುತ್ವ ಅಪೂರ್ವವಾದುದು. ಅವರ ಪ್ರವಚನಗಳ ತಿರುಳು ಬಸವ ತತ್ವವು ಸಮಾನತೆಯನ್ನು ಸಾರುವ ಸರ್ವ ಶ್ರೇಷ್ಠ ವಿಶ್ವಧರ್ಮ ಎಂಬುದೇ ಆಗಿರುತ್ತಿತ್ತು. ಆದರೆ ಅನ್ಯ ಧರ್ಮಾನುಯಾಯಿಗಳಿಗೆ ಕಿಂಚಿತ್ತು ಮನ ನೋಯದಂತೆ ವಿಷಯ ಮಂಡನೆ ಮಾಡುತ್ತಿದ್ದರು.

|| ಸ್ವಾಮಿ ಲಿಂಗಾನಂದರು ||

ಶ್ರೀ ಲಿಂಗಾನಂದ ಸ್ವಾಮಿಗಳನ್ನು (ಅವರ ಪೂರ್ವಾಶ್ರಯದ ಜನ್ಮನಾಮ ಸಂಗಮೇಶ ಕಪ್ಪರದ) ಯಾರೂ ಸನ್ಯಾಸಿ ಅಥವಾ ಸ್ವಾಮಿಯನ್ನಾಗಿ ಮಾಡಲಿಲ್ಲ. ಅವರು ಯಾವುದೇ ಸಾಂಪ್ರದಾಯಿಕ ಮಠ-ಪೀಠದ ಆಶ್ರಯ ಅಥವಾ ಅಧಿಕಾರದಲ್ಲೂ ಇರಲಿಲ್ಲ. ಅಂತೆಯೇ ಅವರನ್ನು ದಾವಣಗೆರೆಯ ಲಿಂ|| ಶರಣ ಮಾಗನೂರು ಬಸಪ್ಪನವರು "ಇದು ಮಾಡಿದ ಸ್ವಾಮಿ ಅಲ್ಲ; ತಾನಾಗಿಯೇ ಆಗಿರುವ ಸ್ವಾಮಿ" ಎಂದು ಸಂಬೋಧಿಸುತ್ತಿದ್ದರು. ಈ ಮಾತು ಯಥಾರ್ಥವೇ ಆಗಿತ್ತು. 1931, ಸಪ್ಟೆಂಬರ್ 15ರಂದು ಬಿಜಾಪುರದ ಮನಗೂಳಿಯಲ್ಲಿ

(ಮಣಿಗನ ಹಳ್ಳಿ)ಯ ಭಕ್ತವರ್ಗಕ್ಕೆ (ಪಂಚಮಸಾಲಿ) ಸೇರಿದ ಕಪ್ಪರದವರ ಮನೆತನದಲ್ಲಿ ಇವರ ಜನನ. ಬಾಗಲಕೋಟೆಯಲ್ಲಿ ಪ್ರೌಢ ಶಾಲಾಭ್ಯಾಸ, ಬೆಳಗಾವಿಯ ಲಿಂಗರಾಜಾ ಕಾಲೇಜಿನಲ್ಲಿ ಬಿ.ಎ.(ಆನರ್ಸ್) ವರೆಗೆ ಇವರ ಅಭ್ಯಾಸ. ಸದಾಚಟುವಟಿಕೆಯ ಜೀವನ. ಆಗಿನ ನವ ಮನ್ವಂತರದ ಮಂದಾರ ಅಲೆಯಾಗಿದ್ದ ಕಮ್ಯುನಿಷ್ಟ್-ತತ್ವಗಳನತ್ತ ಆಕರ್ಷಿತರಾಗಿದ್ದರು. ಆದರೆ ಬಸವಾದಿ ಶರಣರ ವಚನ ಸಾಹಿತ್ಯ-ಜೀವನ ವಿಧಾನಗಳ ಆಳವಾದ ಅಭ್ಯಾಸದಿಂದ ಕಮ್ಯುನಿಸಂ ಸಾರುವ ಸಮಾನತೆ-ಸ್ವಾತಂತ್ರ್ಯ ಸ್ವಾವಲಂಬನೆಯ ತತ್ವಗಳು ಕಾಯಕ-ದಾಸೋಹದಲ್ಲಿ ಪ್ರತಿಪಾದಿತರಾಗಿರುವುದನ್ನು ಮನಗಂಡು, ಭಾರತೀಯ ಪರಿಸರಕ್ಕೆ ಬಸವ ತತ್ವವೇ ಅತ್ಯಂತ ಸೂಕ್ತ ಸಾಮಾಜಿಕ ಧಾರ್ಮಿಕ ಸಿದ್ಧಾಂತ ಎಂಬ ದೃಢ ನಿಲುವಿಗೆ ಬಂದರು.

1965ರಲ್ಲಿ ಲಿಂ|| ಹಿರಿಯ ಸುತ್ತೂರು ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಲ್ಲಿ ತಾವು ಕೈಗೊಳ್ಳಲಿರುವ ಮಣಿಹದ ರೂಪು-ರೇಷೆಗಳನ್ನು ನಿವೇದಿಸಿಕೊಂಡರು. ಪೂಜ್ಯರು ಕಪ್ಪರದ ಸಂಗಮೇಶನಿಗೆ ಜಂಗಮ ದೀಕ್ಷೆಯನ್ನು ನೀಡಿ, ಸ್ವಾಮಿ ಲಿಂಗಾನಂದರು ಎಂಬ ನೂತನ ಅಭಿದಾನ ನೀಡಿದರು. ವೈರಾಗ್ಯದ ಪ್ರೇರಣೆಯಿಂದ 1956ರಲ್ಲಿ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಸೋಮವಾರ ನವೆಂಬರ್ 19ರಂದು ತಾವೇ ಕಾಷಾಯ ಲಾಂಛನ ಧರಿಸಿಕೊಂಡು ಜ್ಞಾನ ಸನ್ಯಾಸ ತೆಗೆದುಕೊಂಡು ಬಸವ ತತ್ತ್ವದ ಜೀವಾಳವಾದ ಲಿಂಗತತ್ತ್ವವನ್ನು ಪ್ರಚಾರ ಮಾಡುವ ಉದ್ದೇಶದಿಂದ "ಲಿಂಗಾನಂದ" ಎಂಬ ಹೆಸರನ್ನು ಇರಿಸಿಕೊಂಡು, ಸ್ವಾಮಿ ಲಿಂಗಾನಂದರಾಗಿ ಅಂದೇ ಜಂಗಮರಾಗಿ ಪ್ರಚಾರ-ಕಾರ್ಯಕ್ಕೆ ಹೊರಟುಬಿಟ್ಟರು. ಸಾಂಪ್ರದಾಯಿಕವಾಗಿ ಕ್ರಿಯಾ ಜಂಗಮ ದೀಕ್ಷೆ ಸುತ್ತೂರು ಜಗದ್ಗುರುಗಳಿಂದ ಪಡೆದುದು. ಸೋಮವಾರ ದಿ.7.8.1961ರಂದು ಉತ್ತರ ಕರ್ನಾಟಕದ ಸಂಪ್ರದಾಯ ಮಠಾಧೀಶರು ಜಂಗಮತ್ವವನ್ನು ಜಾತಿಗೆ ಸೀಮಿತಗೊಳಿಸಿದ್ದುದರಿಂದ ಭಕ್ತವರ್ಗ(ಪಂಚಮಸಾಲಿ)ದ ಸಂಗಮೇಶನಿಗೆ ಜಂಗಮ ದೀಕ್ಷೆ ಕೊಡಲು ಒಪ್ಪದುದುರಿಂದ ಶ್ರೀಗಳು ಜ್ಞಾನ ಸನ್ಯಾಸ ಹೊಂದಿದರು. ಸುತ್ತೂರು ಜಗದ್ಗುರು ಸಂಪ್ರದಾಯವು ಭಕ್ತವರ್ಗ ಪರಂಪರೆಯ ಮಠವೇ ಆದುದರಿಂದ, ಅಲ್ಲಿಗೆ ಪ್ರವಚನಕ್ಕೆ ಆಹ್ವಾನಿತರಾಗಿ ಹೋಗಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಸುತ್ತೂರು ಜಗದ್ಗುರುಗಳಿಂದ ಅಧಿಕೃತವಾಗಿ ಜಂಗಮ ದೀಕ್ಷೆ ಪಡೆದರು. ಅಲ್ಲಿಂದ ಸತತ 40 ವರ್ಷಗಳ ಕಾಲ ಕರ್ನಾಟಕ ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಸಂಚರಿಸುತ್ತಾ ಪ್ರವಚನಗಳ ಮೂಲಕ ತತ್ವಪ್ರಚಾರ ಕೈಗೊಂಡರು. ಅವರ ಪ್ರವಚನಗಳು ಅನ್ಯ ಧರ್ಮೀಯರಿಗೆ ಬಸವಧರ್ಮದ ಹಿರಿಮೆಯನ್ನು ಪರಿಚಯ ಮಾಡಿದರೆ, ಸ್ವಧರ್ಮೀಯರಿಗೆ ತಮ್ಮ ಧರ್ಮದ ನಿಜ ಪರಿಚಯವನ್ನು ಅರಿವು ಮಾಡಿಕೊಟ್ಟವು. ಅಂತೆಯೇ ಅವರು ಪ್ರವಚನ ಪಿತಾಮಹರೆನಿಸಿದರು.

ಮಹಾಜಗದ್ಗುರು

ಯಾವುದೇ ಪೀಠ-ಪಂಗಡಗಳ ಪಟ್ಟಭದ್ರ ಹಿತಾಸಕ್ತಿ ಇಲ್ಲದೆ ಕೇವಲ ಬಸವಣ್ಣನವರ ದಿವ್ಯನಾಮವೊಂದನ್ನೇ ಉಚ್ಚರಿಸುತ್ತಾ ಎಲ್ಲ ಪಂಗಡಗಳ ವಿಚಾರವಂತ ಜನರ

ಗೌರವಾದರಗಳಿಗೆ ಪಾತ್ರರಾದದ್ದು ಅವರ ಹಿರಿಮೆ. 1962ರಲ್ಲಿ ದಾವಣಗೆರೆಯಲ್ಲಿ ವಿಶ್ವ ಕಲ್ಯಾಣ ಮಂಟಪದ ರಚನೆ 1975ರ ಸುಮಾರಿಗೆ ಬೆಂಗಳೂರು ಮಹಾನಗರದಲ್ಲಿ ಬಸವ ಮಂಟಪ ನಿರ್ಮಾಣ ಹಾಗೂ ಮೈಸೂರು ರಸ್ತೆ, ಕುಂಬಳಗೋಡಿನಲ್ಲಿ 1978ರಲ್ಲಿ ಬಸವ ಗಂಗೋತ್ರಿ ಸ್ಥಾಪನೆ ಇವೆಲ್ಲಾ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ ಸಾಧನೆಯ ಹೆಗ್ಗುರುತುಗಳು. ಇದೆಲ್ಲಕ್ಕಿಂತಲೂ ಹೆಚ್ಚಿನ ಕಾರ್ಯವೆಂದರೆ 1970ರಲ್ಲಿ ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಸ್ಥಾಪನೆ ಮತ್ತು ತಮ್ಮ ಪರಮಕಾರುಣ್ಯದ ಶಿಷ್ಯೆ ಮಾತೆಮಹಾದೇವಿಯವರನ್ನು "ಪ್ರಥಮ ಮಹಿಳಾ ಜಗದ್ಗುರು" ಎಂದು ಘೋಷಿಸಿ ಶರಣ ತತ್ತ್ವ ಪ್ರಚಾರಕ್ಕೆ ನಿಯುಕ್ತಗೊಳಿಸಿದ್ದು. ಗುರುವನ್ನು ಮೀರಿದ ಶಿಷ್ಯೆಯಾಗಿ ಮಾತಾಜಿಯವರು ಸ್ವದೇಶ ಮಾತ್ರವಲ್ಲದೆ ವಿದೇಶಗಳಲ್ಲೂ ಅನೇಕ ಬಾರಿ ಸಂಚರಿಸಿ ಬಸವ ಸಂದೇಶವನ್ನು ಕನ್ನಡ, ಆಂಗ್ಲ ಭಾಷೆಗಳಲ್ಲಿ ಸಮರ್ಥವಾಗಿ ಸಾರುತ್ತಾ ಅನೇಕ ಅಂತರರಾಷ್ಟ್ರೀಯ ಧರ್ಮವೇದಿಕೆಗಳಲ್ಲೂ ಅಗ್ರಮಾನ್ಯರಾಗಿ ಮೆರೆದಿದ್ದಾರೆ.

ಮಾತೆಮಹಾದೇವಿ-ಪೂಜ್ಯ ಲಿಂಗಾನಂದರ ಮೇರು ಕೃತಿ ಎಂದರೆ ಬಸವಣ್ಣನವರ ವಿದ್ಯಾಕ್ಷೇತ್ರ ಮತ್ತು ಐಕ್ಯ ಕ್ಷೇತ್ರವಾದ ಕೂಡಲಸಂಗಮದಲ್ಲಿ ಸ್ಥಾಪಿಸಿರುವ ಬಸವಧರ್ಮ ಪೀಠ. ಈ ಮಹಾಮನೆ ಮಹಾ ಸಂಸ್ಥಾನ ಪೀಠಕ್ಕೆ ಪೂಜ್ಯ ಲಿಂಗಾನಂದ ಸ್ವಾಮಿಗಳವರನ್ನೇ "ಮಹಾಜಗದ್ಗುರು" ಅಭಿದಾನದೊಂದಿಗೆ ಪಟ್ಟಗಟ್ಟುವ ಮೂಲಕ ಮಾತಾಜಿಯವರು ತಮ್ಮ ಅಪ್ಪಾಜಿಯವರಿಗೆ ಗುರುಕಾಣಿಕೆ ಸಲ್ಲಿಸಿದರು. ಈ ವೇಳೆಗಾಗಲೇ ಪೂಜ್ಯರಿಗೆ 60 ಸಂವತ್ಸರಗಳನ್ನು ಮೀರಿದ ವಯಸ್ಸು ಆದರೂ ತಮ್ಮ ಪ್ರಿಯ ಕಾಯಕವಾದ ಪ್ರವಚಗಳನ್ನು ನಿಲ್ಲಿಸಿರಲಿಲ್ಲ. 1995ನೇ ಜೂನ್ 30ರಂದು ಹಿರಿಯೂರಿನಲ್ಲಿ ಪ್ರವಚನಕಾಯಕದಲ್ಲಿ ನಿರತರಾಗಿದ್ದಾಗ ಮಧ್ಯಾಹ್ನದ ಬಿಡುವಿನಲ್ಲಿ ಶಿಷ್ಯರೊಂದಿಗೆ ಸರಸ-ಸಂಭಾಷಣೆಯಲ್ಲಿ ತೊಡಗಿದ್ದಾಗಲೇ ಹಠಾತ್ತನೇ ಉಂಟಾದ ಹೃದಯಾಘಾತದಿಂದ ಲಿಂಗೈಕ್ಯರಾದರು. ಅವರ ಪಾರ್ಥಿವ ಶರೀರದ ಕ್ರಿಯಾಸಮಾಧಿಯನ್ನು ಕೂಡಲಸಂಗಮದ ಬಸವ ಪೀಠದ ಪರಿಸರದಲ್ಲೇ ಸ್ಥಾಪಿಸಲಾಗಿದೆ. ಆ ಪೂಜ್ಯರು ನಡೆಸುತ್ತಿದ್ದ ಬಸವ ತತ್ವ ಪ್ರಚಾರದ ಮಹಾಮಣಿಹವನ್ನು ಪೂಜ್ಯ ಮಾತಾಜಿಯವರು ತಮ್ಮ ಶಿರದಲಾಂತು ಸಮರ್ಥವಾಗಿ ಮುಂದುವರಿಸುತ್ತಿದ್ದಾರೆ. ಮುಂದಿನ ವರ್ಷದ ಏಪ್ರಿಲ್-ಮೇ ತಿಂಗಳಲ್ಲಿ ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ 5ನೇ ಬಸವಧರ್ಮ ಸಮ್ಮೇಳನ ನಡೆಸಿ ಹಿಂದಿ-ಇಂಗ್ಲಿಷ್ ಭಾಷಿತರಿಗೂ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಆಧ್ಯಾತ್ಮ ರಂಗದ ಹಿರಿಯರನ್ನೆಲ್ಲಾ ಕರೆಸಿ ಅವರಿಗೆ ಬಸವಾದಿ ಶರಣರ ತತ್ತ್ವ ಸಿದ್ಧಾಂತಗಳ ಪರಿಚಯ ಮಾಡಿಕೊಡುವ ಮಹಾನ್ ಗುರಿಯನ್ನು ಅವರು ಇಟ್ಟುಕೊಂಡು ಆ ದಿಸೆಯಲ್ಲಿ ಈಗಾಗಲೇ ಕಾರ್ಯಪ್ರವೃತ್ತರಾಗಿದ್ದಾರೆ. ಲಿಂಗಾಯತ ಧರ್ಮದ ಕೆಲವು ಸೈದ್ಧಾಂತಿಕ ಕೃತಿಗಳನ್ನು ಇಂಗ್ಲಿಷ್ ಮತ್ತು ಹಿಂದಿಗೆ ಭಾಷಾಂತರಿಸುವ ಮಹತ್ಕಾರ್ಯವನ್ನು ಸಹ ಅವರು ಈಗಾಗಲೇ ಕೈಗೊಂಡಿದ್ದಾರೆ.

೬೬ನೇ ಹುಟ್ಟುಹಬ್ಬದ ಸವಿನೆನಪು

ಬಸವ ಸಂದೇಶವನ್ನು ಮನ-ಮನೆಗಳಿಗೆ ಮುಟ್ಟಿಸುವ ಮಾಸಪತ್ರಿಕೆ "ಕಲ್ಯಾಣ ಕಿರಣ" ಪ್ರಕಟಣೆ, ಸಿದ್ಧಾಂತ-ಸಂಸ್ಕೃತಿಗಳ ಸಂರಕ್ಷಣೆಗಾಗಿ ಗಣಾಚಾರ ತತ್ವದಿಂದ ದುಡಿಯುತ್ತಿರುವ ರಾಷ್ಟ್ರೀಯ ಬಸವ ದಳ, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿಗಣ, ಪ್ರತಿವರ್ಷ ಮಕರ ಸಂಕ್ರಮಣದಂದು ನಡೆಯುವ ಶರಣಮೇಳ, ನಾಲ್ಕು ವರ್ಷಗಳಿಂದ ನಡೆಯುತ್ತಿರುವ ವಾರ್ಷಿಕ ಬಸವ ಧರ್ಮ ಸಮ್ಮೇಳನಗಳು, ಗುಲ್ಬರ್ಗಾ ವಿ.ವಿ.ಗೆ ಬಸವಣ್ಣನವರ ನಾಮಕರಣಕ್ಕಾಗಿ ಸತತ ಆರು ತಿಂಗಳಿಂದ ನಡೆಸಲಾಗುತ್ತಿರುವ ಅಪೂರ್ವ ಅಹಿಂಸಾತ್ಮಕ ಚಳವಳಿ-ಇವೆಲ್ಲಾ ಮಾತಾಜಿಯವರ ನವ-ನವೀನ ಉಪಕ್ರಮಗಳಾಗಿವೆ. ತಮ್ಮ ದೀಕ್ಷಾ ಗುರುವಿಗೆ ಶ್ರದ್ಧೆ-ಭಕ್ತಿಗಳ ಕಾಣಿಕೆ ಎಂಬಂತೆ ಅವರು ಈ ಎಲ್ಲ ಕಾರ್ಯಗಳನ್ನು ಹಮ್ಮಿಕೊಂಡಿದ್ದಾರೆ. ಇಂತಹ ನೈಜ ಶ್ರದ್ಧಾಂಜಲಿ ಸಮರ್ಪಣೆಯಲ್ಲಿ ನಾವೆಲ್ಲರೂ ಯಥಾ ಶಕ್ತಿ ಭಾಗಿಗಳಾಗೋಣ.

(ಜನತಾವಾಣಿ ದಿನಪತ್ರಿಕೆ, ದಾವಣಗೆರೆ
ದಿ.12.9.1996 ಸಂಚಿಕೆ)

(ಲೇಖನವನ್ನು ಬರೆದ ಶರಣ. ಎ.ಜಿ. ವಿರುಪಾಕ್ಷಪ್ಪ, ಪ್ರಕಾಶನ ಮಾಡಿದ ಜನತಾವಾಣಿ ದಿನ ಪತ್ರಿಕೆಗೆ ಕೃತಜ್ಞತೆಯನ್ನಾರ್ಪಿಸಿ ಕಲ್ಯಾಣ ಕಿರಣವು ಲೇಖನವನ್ನು ಪ್ರಕಟಿಸುತ್ತಿದೆ.)

ಸಂಪಾದಕರು

ಬಸವಣ್ಣನವರ ಲಿಂಗೈಕ್ಯ ಎಲ್ಲಿ? ಎಂದು? ಹೇಗೆ?

—ಮಾತಾಜಿ

[ಹನ್ನೆರಡನೆಯ ಶತಮಾನದ ಶ್ರೇಷ್ಠ ಸಮಾಜ ಸುಧಾರಕ, ಸಮತಾವಾದಿ, ಸ್ತ್ರೀ ವಿಮೋಚಕ, ಮಾನವತಾವಾದಿ, ದಲಿತೋದ್ಧಾರಕ ಬಸವಣ್ಣನವರು ಲಿಂಗೈಕ್ಯರಾಗಿ ಈ ವರ್ಷದ ಶ್ರಾವಣ ಪಂಚಮಿಗೆ 800 ವರ್ಷ ಪೂರೈಸುತ್ತಿವೆ. ಅವರ 800 ನೆಯ ಲಿಂಗೈಕ್ಯ ಸಂಸ್ಮರಣೆಯನ್ನು 19-8-1996 ರಂದು ವ್ಯಾಪಕವಾಗಿ ಮಾಡಲಾಗುತ್ತಿದೆ. ಈ ಸನ್ನಿವೇಶದಲ್ಲಿ ಬಸವಣ್ಣನವರ ಲಿಂಗೈಕ್ಯ ಕುರಿತು ವಿಶೇಷ ಲೇಖನವೊಂದನ್ನು ಪ್ರಕಟಿಸಲಾಗುತ್ತಿದೆ.]

ವಿಶ್ವಗುರು ಬಸವಣ್ಣನವರು ಕರ್ನಾಟಕದಲ್ಲಿ ಆಗಿಹೋದ ಶ್ರೇಷ್ಠ ಸಮಾಜ ಸುಧಾರಕರು, ಮಹಾಮಾನವತಾವಾದಿ, ಸಮತಾವಾದಿ, ದಲಿತೋದ್ಧಾರಕ, ಸ್ತ್ರೀ ವಿಮೋಚಕ, ಉತ್ತಮ ರಾಜಕಾರಣ ಮುತ್ಸದ್ಧಿ. ಬಸವಣ್ಣನವರು ಚಾಲುಕ್ಯರ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ ವಿಶ್ವವಿಖ್ಯಾತ ಅನುಭವ ಮಂಟಪವೆಂಬ ಅಧ್ಯಾತ್ಮಿಕ ಸಂಸ್ಥೆಯೊಂದನ್ನು ಕಟ್ಟಿ ಅದರ ಮೂಲಕ ಮಾನವೀಯತೆ ಮತ್ತು ಸಮತಾವಾದದ ಸಂದೇಶವನ್ನು ಸಾರಿದರು. ಕನ್ನಡ ಸಾಹಿತ್ಯದಲ್ಲಿ ದ್ವೀಪ ಸಂಭವದಂತಿರುವ ವಚನ ಸಾಹಿತ್ಯವು ಅತ್ಯಂತ ಮೌಲಿಕವೂ, ಪ್ರಗತಿಪರವೂ ಆಗಿ ಜಗತ್ತಿನ ಗಮನ ಸೆಳೆಯುತ್ತಿದೆ. ಕನ್ನಡ ನಾಡು ಅತ್ಯಂತ ಹೆಮ್ಮೆಯಿಂದ ಭಾರತದ ಮಟ್ಟದಲ್ಲಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇನ್ನಿತರ ದಾರ್ಶನಿಕ ಸಾಹಿತ್ಯ ಮಾತ್ರವಲ್ಲದೆ ಸಾಮಾಜಿಕ-ಆರ್ಥಿಕ ಸಿದ್ಧಾಂತಗಳ ಜೊತೆಗೆ ಸ್ಪರ್ಧೆಗಿಡಬಲ್ಲಷ್ಟು ಸತ್ವದಿಂದ ಕೂಡಿದೆ ಈ ವಚನ ಸಾಹಿತ್ಯ. ಅನುಭವ ಮಂಟಪ, ವಚನ ಸಾಹಿತ್ಯ, ಶರಣರ ಸಮಾವೇಶ, ಸಾಮಾಜಿಕ ಪರಿವರ್ತನೆ-ಈ ಎಲ್ಲವುಗಳ ಮೇಟಿಗೂಟ, ಕೇಂದ್ರ ಬಿಂದು ಕ್ರಾಂತಿಯೋಗಿ ಬಸವಣ್ಣನವರು. ಇವರು ಹುಟ್ಟಿದ್ದು ಇಂಗುಳೇಶ್ವರ ಬಾಗೇವಾಡಿಯ ಕಮ್ಮೆಕುಲದ ಶೈವ ಬ್ರಾಹ್ಮಣ ದಂಪತಿಗಳಾದ ಮಾದಲಾಂಬಿಕೆ-ಮಾದಿರಾಜರ ಮಗನಾಗಿ, ಆನಂದನಾಮ ಸಂವತ್ಸರದ (ಕ್ರಿ. ಶ. 1134) ವೈಶಾಖ ಮಾಸದಲ್ಲಿ ಅಕ್ಷಯ ತೃತೀಯದಂದು ರೋಹಿಣಿ ನಕ್ಷತ್ರದಲ್ಲಿ ಬಸವಣ್ಣನವರು ಜನಿಸಿದರು. ಬಾಲ್ಯದಿಂದಲೂ ಚಿಕಿತ್ಸಕ ಬುದ್ಧಿಯುವನಾದ ಬಸವರಸ ಆಚಾರ-ವಿಚಾರ-ಸಂಪ್ರದಾಯಗಳನ್ನು ನಿರಂತರವಾಗಿ ಪರೀಕ್ಷೆಗೆ ಒಳಪಡಿಸುತ್ತ ಮರೆಗೆ ಹಚ್ಚಿ ಪ್ರಶ್ನೆಗಳನ್ನು

ಕೇಳುತ್ತಿದ್ದ. ಸಮಾಜದಲ್ಲಿ ರೂಢಿಗೊಂಡಿದ್ದ ಜಾತಿಪದ್ಧತಿ, ಅದರ ಫಲಶ್ರುತಿ ಯಾದ ಅಸ್ಪೃಶ್ಯತೆ, ಬಡತನ, ಮೂಢ ನಂಬಿಕೆ ಅಸ್ಪೃಶ್ಯತೆ, ಬಡತನ, ಮೂಢನಂಬಿಕೆ, ಧರ್ಮ-ದೇವರ ಹೆಸರಿನಲ್ಲಿ ಸೋಗಿನಲ್ಲಿ ನಡೆಯುತ್ತಿದ್ದ ಹಿಂಸೆ, ಕ್ರೌರ್ಯ ಮತ್ತು ಶೋಷಣೆ ಇವೆಲ್ಲವು ಬಾಲಕ ಬಸವಣ್ಣನನ್ನು ಕಳವಳಕ್ಕೀಡು ಮಾಡಿದವು. ಸತ್ಯಾನ್ವೇಷಕರಾಗಿ ಬಸವಣ್ಣನವರು ಬಾಲಕರಿರುವಾಗಲೇ ತಾಯಿ-ತಂದೆಯರನ್ನು, ಹುಟ್ಟೂರನ್ನು ತೊರೆದು ಕೂಡಲ ಸಂಗಮಕ್ಕೆ ಆಗಮಿಸಿದರು. ಅವರ ಬಾಲ್ಯ ಅಲ್ಲಿಯೇ ಕಳೆಯಿತು. ಸಂಗಮ ಕ್ಷೇತ್ರದಲ್ಲಿದ್ದ ಗುರುಕುಲದಲ್ಲಿ, ಜಾತವೇದ ಮುನಿಗಳ ಕೃಪಾಶ್ರಯದಲ್ಲಿ ಬಸವಣ್ಣನವರು ಬೆಳೆದರು. ಸಂಗಮನಾಥನ ಅರ್ಚಕರಾಗಿ ಕೆಲಸ ಮಾಡುತ್ತಲೇ ವಿದ್ಯಾಭ್ಯಾಸವನ್ನು ಪೂರೈಸಿದರು.

ಒಂಭತ್ತನೆಯ ವಯಸ್ಸಿನಿಂದ ಇಪ್ಪತ್ತೊಂದರ ವರೆಗಿನ ಅವಧಿ ವಿಶ್ವಗುರು ಬಸವಣ್ಣನವರ ಜೀವನದ ಬಲು ಮಹತ್ವದ ಘಟ್ಟ. ಆಗಲೇ ಅವರ ಹೃನ್ಮಂದಿರದಲ್ಲಿ ಹೊಸ ಧರ್ಮವೊಂದರ ನೀಲನಕ್ಷೆ ಮೂಡಿತು. ಬಿಜ್ಜಳ ಮಹಾರಾಜನಲ್ಲಿ ಪ್ರಧಾನ ಅಮಾತ್ಯರಾಗಿದ್ದ ಬಲದೇವ ಮಂತ್ರಿಗಳು ತಮ್ಮ ಮನೆದೇವರು ಸಂಗಮನಾಥನ ದರ್ಶನಕ್ಕೆ ಬಂದಿರುವಾಗ ಪ್ರತಿಭಾವಂತ ತರುಣ ಬಸವರಸನನ್ನು ಕಂಡು, ಆತ ತಮ್ಮ ಸೋದರಳಿಯ, ತಂಗಿ ಮಾದಲಾಂಬಿಕೆಯ ಮಗ ಎಂದು ಸಂಭ್ರಮಪಟ್ಟು ತಮ್ಮ ಏಕೈಕ ಪುತ್ರಿ ನೀಲಗಂಗಳನ್ನು ಕೊಟ್ಟು ಮದುವೆ ಮಾಡಬಯಸಿದರು. ಇದೇ ಸನ್ನಿವೇಶದಲ್ಲಿ ಬಸವರಸರಿಗೆ ವಿಶೇಷ ದಿವ್ಯಾನುಭೂತಿ ಪ್ರಾಪ್ತಿ, ಸಗುಣ ಸಾಕ್ಷಾತ್ಕಾರವಾಯಿತಲ್ಲದೆ ಇಷ್ಟಲಿಂಗದ ಪರಿಕಲ್ಪನೆ ಮೂಡಿತು. ಪರಮಾತ್ಮನ ಅನುಗ್ರಹ ಹೊತ್ತು ಕೂಡಲ ಸಂಗಮದಿಂದ ಹೊರಟು ಮಂಗಳವೇಡೆಗೆ ಆಗಮಿಸಿದರು. ಬಲದೇವರ ಮಗಳನ್ನು ವಿವಾಹವಾಗಿ, "ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಅಮೃತ." ಎಂದು ಕರಣಿಕ ಕಾಯಕ ಕೈಗೊಂಡರು. ತಮ್ಮ ಪ್ರತಿಭೆ, ಪರಿಶ್ರಮ, ಪ್ರಾಮಾಣಿಕತೆಯಿಂದ ದಿನದಿನಕ್ಕೂ ಪ್ರಗತಿ ಸಾಧಿಸಿದರು. ಕಲ್ಯಾಣದಲ್ಲಿ ಚಾಲುಕ್ಯರ ಅರಸೊತ್ತಿಗೆ ಏರಿದ್ದ ತೈಲಪನು ವಿಷಯಾಸಕ್ತನೂ, ರಾಜ್ಯಾಡಳಿತದಲ್ಲಿ ನಿರಾಸಕ್ತನೂ ಆಗಿರುವಾಗ ಮಹಾಮಂಡಳೇಶ್ವರನಾಗಿದ್ದ ಬಿಜ್ಜಳ ಮಹಾರಾಜನು ಹಂತಹಂತವಾಗಿ ಬಲಿಷ್ಠನಾಗುತ್ತ ಬಂದು, ಮಂಗಳವೇಡೆಯಿಂದ ಕಲ್ಯಾಣಕ್ಕೆ ತನ್ನ ವಾಸ್ತವ್ಯವನ್ನು ಬದಲಾಯಿಸಿದನು. ತನ್ನ ವಿಶ್ವಾಸಿಕರಾಗಿದ್ದ ಬಲದೇವ ಮಂತ್ರಿಗಳ ಪರಿವಾರವನ್ನೂ ಕಲ್ಯಾಣಕ್ಕೆ ಬರಮಾಡಿಕೊಳ್ಳಲು ಇಚ್ಛಿಸಿದನು. ವಿಕ್ರಮನಾಮ ಸಂವತ್ಸರದಲ್ಲಿ (ಕ್ರಿ. ಶ. 1160) ಬಸವಣ್ಣನವರು ಕಲ್ಯಾಣಕ್ಕೆ ಆಗಮಿಸಿದರು.

ಅಯ್ಯಾ, ಭಕ್ತಿ ಬೀಡಾದುದು ಕಲ್ಯಾಣ 36 ವರುಷ
ಅನುಭವಕ್ಕೆ ಶಿವ ಸದನವಾದುದು 27 ವರುಷ

ಎಂದು ತಮ್ಮ ಒಂದು ವಚನದಲ್ಲಿ ಹೇಳಿರುವಂತೆ ಭಕ್ತಿಯನ್ನು ಬಿತ್ತಿ ಬೆಳೆಯುವ ಕಾರ್ಯ ಚಟುವಟಿಕೆ ಹಮ್ಮಿಕೊಂಡರು. ಒಂಭತ್ತು ವರ್ಷಗಳಾದ ಮೇಲೆ ಅನುಭವ ಮಂಟಪಕ್ಕೆ ಒಂದು ಸಾಂಸ್ಥಿಕ ರೂಪ ಬಂದಿತು. ಅಖಂಡ ಭಾರತದಿಂದ, ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗಿನ ಎಲ್ಲ ಭೂಭಾಗಗಳಿಂದ ಅನೇಕ ಸಾಧಕರು ಸಿದ್ಧಪುರುಷರು ಕಲ್ಯಾಣಕ್ಕೆ ಆಗಮಿಸಿದರು. ಅಲ್ಲಮಪ್ರಭು, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಕಾಶ್ಮೀರದ ಅರಸು ಮೋಳಿಗೆಯ ಮಾರಯ್ಯ, ಒರಿಸ್ಸಾದ ಸುಜ್ಞಾನಿದೇವ ಮುಂತಾದ ಮಹಿಮರೆಲ್ಲ ಅನುಭವ ಮಂಟಪದಲ್ಲಿ ಸಮಾವೇಶವಾದರು. ರಕ್ತ ಸಂಬಂಧಿಯಾದ ಸೋದರಳಿಯ ಚನ್ನಬಸವಣ್ಣನವರು ಧೀಮಂತ ಜ್ಞಾನಿಯಾಗಿ ಅನುಭವ ಮಂಟಪದಲ್ಲಿ ಕಂಗೊಳಿಸಿದರು. ಹುಟ್ಟಿನಿಂದ ಸಮಗಾರನಾಗಿ ಬಸವ ಧರ್ಮವನ್ನು ಸ್ವೀಕರಿಸಿದ್ದ ಹರಳಯ್ಯ, ಹುಟ್ಟಿನಿಂದ ಬ್ರಾಹ್ಮಣನಾಗಿ ಬಸವ ಧರ್ಮಾನುಯಾಯಿಯಾದ ಮಧುವರಸರ ಮಧ್ಯೆ ವೈವಾಹಿಕ ಬಂಧುತ್ವ ಏರ್ಪಡಿಸಲು ಅನುಭವ ಮಂಟಪ ಮುಂದಾದಾಗ ಸಂಪ್ರದಾಯವಾದಿಗಳು ಸಿಡಿದೆದ್ದರು. "ಇಷ್ಟಲಿಂಗವೆಂಬ ಗಣಲಾಂಛನ ಧರಿಸಿದ ಎಲ್ಲರೂ ಸಮಾನರು. ಈ ವಿವಾಹ ಸಮಾನ ಧರ್ಮೀಯರಲ್ಲಾದ ವಿವಾಹವೇ ವಿನಾ ವರ್ಣಸಂಕರವಲ್ಲ" ಎಂದು ಬಸವಣ್ಣನವರು ಪ್ರತಿಪಾದಿಸಿದರೂ, ಅಂತರಾತ್ಮವು ಒಪ್ಪಿದರೂ ಸಂಪ್ರದಾಯಜಡರನ್ನು ಎದುರು ಹಾಕಿಕೊಳ್ಳಲು ಬಿಜ್ಜಳನು ಧೈರ್ಯತಾಳಲಿಲ್ಲ. ಬಿಜ್ಜಳನ ಮಾನಸಿಕ ವಿಹ್ವಲತೆಯ ಪರಿಸ್ಥಿತಿಯ ದುರುಪಯೋಗ ಮಾಡಿಕೊಂಡ ರಾಜಕೀಯ ಮಹತ್ವಾಕಾಂಕ್ಷೆಯ ಜನರು ಬಸವಣ್ಣನವರನ್ನು ಗಡಿಪಾರು ಮಾಡಲು ಬಿಜ್ಜಳನನ್ನು ಪ್ರೇರೇಪಿಸಿದರು. ಗಡಿಪಾರಿನ ದಂಡವನ್ನು ಸ್ವೀಕರಿಸಿದ ಬಸವಣ್ಣನವರು ಕಲ್ಯಾಣದಿಂದ ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಮಾಸದ ದ್ವಾದಶಿ ದಿನ, ಮಂಗಳವಾರ ಹೊರಟರು. ಮುಂದೆ ಕೂಡಲ ಸಂಗಮಕ್ಕೆ ಆಗಮಿಸಿ, ತಪೋಮಗ್ನರಾದರು. ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳವಾರ (ದಿ. 2-7-1196) ಮರ್ತ್ಯಕ್ಕೆ ಬಂದ ಮಣಿಹ ಪೂರೈಸಿತೆಂದು ದೇವನಿಂದ ಕರೆ ಬಂದಾಗ ಉರಿಯುಂಡ ಕರ್ಪುರದಂತೆ ದೇವನಲ್ಲಿ ಒಂದಾದರು. ಆನಂದನಾಮ ಸಂವತ್ಸರ (ಕ್ರಿ. ಶ. 1134) ದಲ್ಲಿ ಹುಟ್ಟಿ 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳವಾರ ಲಿಂಗೈಕ್ಯರಾದರು.

ಲಿಂಗೈಕ್ಯ ಎಂದರೇನು ?

ಲಿಂಗೈಕ್ಯ ಎಂಬ ಪದವು ಸೈದ್ಧಾಂತಿಕ ಪರಿಭಾಷೆಯ ಪದ. ಅದನ್ನು ಅರ್ಥ ಮಾಡಿಕೊಳ್ಳದ ಜನರು ಭಾವುಕರಾಗಿ ಒಂದು ರೀತಿಯಲ್ಲಿ, ನಾಸ್ತಿಕರಾದವರು ಇನ್ನೊಂದು ರೀತಿಯಲ್ಲಿ ಚಿತ್ರಿಸುವರು, ಧರ್ಮಕರ್ತ ಬಸವಣ್ಣನವರ ಅಂತ್ಯದ ಬಗೆಗೆ

ಬಗೆಬಗೆಯ ವ್ಯಾಖ್ಯಾನ ಮಾಡುವರು. "ಕೂಡಲ ಸಂಗಮದಲ್ಲಿ ಬಸವಣ್ಣನವರು ಲಿಂಗೈಕ್ಯರಾದರು," ಎಂಬುದನ್ನು ಒಂದು ರೀತಿಯಲ್ಲಿ," ಕೂಡಲ ಸಂಗಮನಾಥನಲ್ಲಿ ಬಸವಣ್ಣನವರು ಲಿಂಗೈಕ್ಯರಾದರು." ಎಂದು ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನಿಸುವರು. ಆದ್ದರಿಂದ ಈ ಬಗ್ಗೆ ಸರಿಯಾಗಿ ತಿಳಿಯಬೇಕಾದುದು ಐತಿಹಾಸಿಕ ದೃಷ್ಟಿಯಿಂದ ಮತ್ತು ಅಧ್ಯಾತ್ಮಿಕ ದೃಷ್ಟಿಯಿಂದ ಅತ್ಯಗತ್ಯವಿದೆ.

ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ಸೈದ್ಧಾಂತಿಕ ಮತ್ತು ತಾಂತ್ರಿಕ ಪರಿಭಾಷೆ ಇರುತ್ತದೆ. ಆ ಧರ್ಮ ನಂಬುವ, ಪ್ರತಿಪಾದಿಸುವ ಸೈದ್ಧಾಂತಿಕ ಚೌಕಟ್ಟಿನ ಮೇಲೆಯೇ ಆ ಧರ್ಮಾನುಯಾಯಿಗಳ ಆಚಾರ–ವಿಚಾರ, ಜೀವನ–ದೃಷ್ಟಿಕೋನ, ಜೀವನ ವಿಧಾನ ನಿರ್ಧಾರವಾಗುತ್ತವೆ. ಸಾವು ಒಂದು ನೈಸರ್ಗಿಕ ಸಹಜಕ್ರಿಯೆ. ಆದರೂ ಶೈವರನ್ನು ಅದು ಕೈಲಾಸವಾಸಿಗಳನ್ನಾಗಿ, ವೈಷ್ಣವರನ್ನು ವೈಕುಂಠವಾಸಿಗಳನ್ನಾಗಿ, ಮತ್ತೆ ಕೆಲವರನ್ನು ಸ್ವರ್ಗವಾಸಿಗಳನ್ನಾಗಿ ಮಾಡುತ್ತದೆ. ದೇವರನ್ನು ನಂಬದ ನಿರೀಶ್ವರವಾದಿಗಳನ್ನು ನಿರ್ವಾಣಸ್ಥಿತಿಗೆ ಒಯ್ಯುತ್ತದೆ. ಶ್ರೀ ಗುರು ಬಸವಣ್ಣನವರು ಪ್ರತಿಪಾದಿಸಿದ, ಸಂಸ್ಥಾಪಿಸಿ ಬೋಧಿಸಿದ ಲಿಂಗಾಯತ ಧರ್ಮ ಸೇಶ್ವರವಾದಿ ಧರ್ಮ ; ಈ ಜಗತ್ತಿಗೆ ಸೃಷ್ಟಿಕರ್ತನೊಬ್ಬನಿದ್ದಾನೆ ; ಅವನೇ ಈ ಸೃಷ್ಟಿಯ ಆದಿಯೂ ಅಹುದು ಅಂತ್ಯವೂ ಅಹುದು ಎಂದು ನಂಬುತ್ತದೆ.

ವನದ ಕೋಗಿಲೆ ಮನೆಗೆ ಬಂದರೆ
ತನ್ನ ವನವ ನೆನೆವುದ ಮಾಣ್ಬುದೆ ?
ಮಲೆಯ ಗಜವು ಮನೆಗೆ ಬಂದರೆ
ತನ್ನ ಮಲೆಯ ನೆನೆವುದ ಮಾಣ್ಬುದೆ ?
ಕೂಡಲ ಸಂಗನ ಶರಣರು ಮರಳಿ ಮರ್ತ್ಯಕ್ಕೆ ಬಂದರೆ
ತಮ್ಮ ಆದಿಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೆ ?

ಹೀಗೆ ಜೀವಾತ್ಮನ ಉಗಮ ಸ್ಥಾನವೂ ದೇವನೆ, ಧ್ಯೇಯವೂ ಅವನೆ ! ನದಿಗೆ ಅರ್ಥಾತ್ ನೀರಿಗೆ ಉಗಮ ಸ್ಥಾನವೂ ಸಮುದ್ರವೆ, ; ಧ್ಯೇಯವೂ ಸಮುದ್ರ ತಾನೆ ? ಅದೇ ರೀತಿ ಜೀವಾತ್ಮನ ಆದಿ–ಅಂತ್ಯ ಎರಡೂ ಸೃಷ್ಟಿಕರ್ತನೆ. ಅದುವೆ 'ಲಿಂಗ ತತ್ತ್ವ' ಯಾವ ಮೂಲ ಚೈತನ್ಯದಿಂದ ಈ ಸಚರಾಚರ ಸೃಷ್ಟಿಯು ಹೊರಹೊಮ್ಮಿ, ಅದರ ಆಶ್ರಯದಲ್ಲೇ ಲೀಲೆಯಾಡಿ, ಕಡೆಗೆ ಯಾವುದರಲ್ಲಿ ಅಡಗುತ್ತದೆಯೋ ಆ ಮೂಲ ಚೈತನ್ಯವೇ **'ಲಿಂಗ'** ಯಾವ ಮಹಾಚೈತನ್ಯವನ್ನು ವೇದಾಂತಿಗಳು ಪರಬ್ರಹ್ಮನೆನ್ನುವರೋ, ಶೈವರು ಪರಶಿವನೆನ್ನುವರೋ, ಮುಸಲೀಮರು ಅಲ್ಲಾ ಎನ್ನುವರೋ ಅದನ್ನೇ 'ಲಿಂಗ' ಎಂದು ಆಗಮ ಸಿದ್ಧಾಂತಿಗಳು ಸಂಬೋಧಿಸುತ್ತಾರೆ. ಈ ಲಿಂಗ–

ದೇವನು ನಿರಾಕಾರನು, ನಿರ್ಗುಣನು, ಸರ್ವವ್ಯಾಪಿ, ಯಾವುದೇ ಲೋಕವಾಸಿಯಲ್ಲ. ಹೀಗಾಗಿ ಸಾಲೋಕ್ಯ, ಸಾಮೀಪ್ಯ ಮುಂತಾದ ಮೋಕ್ಷದ ಕಲ್ಪನೆಗೆ ಇಲ್ಲಿ ಅವಕಾಶವಿಲ್ಲ ಮತ್ತು ಬಸವ ಧರ್ಮದ ಸಿದ್ಧಾಂತದ ಪ್ರಕಾರ ಎಲ್ಲ ಲೋಕಗಳೂ ಇಲ್ಲಿಯೆ, ಈ ಮರ್ತ್ಯದಲ್ಲೇ. ಹೀಗಾಗಿ ಸತ್ತ ನಂತರ ಕೈಲಾಸ, ವೈಕುಂಠ, ಸ್ವರ್ಗ ಮುಂತಾದ ಪರಲೋಕಗಳ ಅಸ್ತಿತ್ವದಲ್ಲಿ ನಂಬಿಕೆಯೇ ಇಲ್ಲ. ಶುದ್ಧ ಜೀವಾತ್ಮವು ಬಂಧನಕ್ಕೊಳಗಾದಾಗ ಕಾರ್ಮಿಕ, ಮಾಯಾ, ಆಣವ ಮಲಗಳಿಂದಾವೃತವಾಗಿ ಬದ್ಧ ಜೀವವಾಗಿರುತ್ತದೆ. ಸದಾಚಾರ, ಸುಜ್ಞಾನ, ಸದ್ಭಕ್ತಿಗಳಿಂದ ಈ ಮೂರೂ ಮಲಗಳು ನಿವೃತ್ತಿಯಾಗಿ ಶುದ್ಧಗೊಂಡ ಜೀವವು ಸಚ್ಚಿದಾನಂದ ನಿತ್ಯ ಪರಿಪೂರ್ಣನಾದ ಸರ್ವವ್ಯಾಪಿ ದೇವನಲ್ಲಿ "ಉರಿಯುಂಡ ಕರ್ಪುರದಂತೆ" "ಸಮುದ್ರವನ್ನು ಬೆರೆತ ನದಿಯಂತೆ" ವಿಲೀನ ಹೊಂದಿ ಸಮರಸವಾಗುತ್ತದೆ. ಲಿಂಗ ಮತ್ತು ಅಂಗ ಸಾಮರಸ್ಯ ಎರಡು ರೀತಿ, ಒಂದು ಭಾವ ಲಿಂಗೈಕ್ಯ, ಇನ್ನೊಂದು ಕಾಯ ಲಿಂಗೈಕ್ಯ. ಸಾಧನೆ ಮಾಡುವಾಗ ಭಕ್ತನು ಲಿಂಗದೇವನೊಡನೆ ತಾದಾತ್ಮ್ಯಭಾವವನ್ನು ಅನುಭವಿಸುವುದು ಭಾವಲಿಂಗೈಕ್ಯ, ಸತ್ತನಂತರ ಪಂಚಭೂತಾತ್ಮಕ ದೇಹ ಪ್ರಕೃತಿಯಲ್ಲಿ ನಿಧಾನವಾಗಿ ವಿಸರ್ಜನೆಗೊಂಡ ಮೇಲೆ ಆತ್ಮವು ಸರ್ವವ್ಯಾಪಿ ಪರಮಾತ್ಮನಲ್ಲಿ ವಿಲೀನಗೊಳ್ಳುವುದು ಕಾಯ ಲಿಂಗೈಕ್ಯ. ಭಾವ ಲಿಂಗೈಕ್ಯವು ಒಂದು ಮಾನಸಿಕ ದಾರ್ಶನಿಕ ಅನುಭೂತಿ ; ಕಾಯ ಲಿಂಗೈಕ್ಯವು ಒಂದು ಸ್ಥಿತ್ಯಂತರ, ಅಸ್ತಿತ್ವಕ್ಕೆ ಸಂಬಂಧಿಸಿದ್ದು.

ಈ ಸೈದ್ಧಾಂತಿಕ ಹಿನ್ನೆಲೆಯಲ್ಲೇ ಲಿಂಗಾಯತ ಧರ್ಮದಲ್ಲಿ ಯಾರಾದರೂ ಮೃತರಾದಾಗ ಸತ್ತರು, ತೀರಿಹೋದರು, ಇಹಲೋಕ ತ್ಯಜಿಸಿದರು, ಕೈಲಾಸವಾಸಿಗಳಾದರು ವಿಧಿವಶವಾದರು, ಸ್ವರ್ಗವಾಸಿಗಳಾದರು ಎಂದು ಅನ್ನುವಂತೆ ಇಲ್ಲ. ನಿಜವಾದ ಅರ್ಥದಲ್ಲಿ ಎಲ್ಲರೂ ಲಿಂಗೈಕ್ಯರಾಗುವಷ್ಟು ಉನ್ನತ ಸ್ಥಿತಿಗೆ ಏರಿರುವುದಿಲ್ಲವಾದರೂ ಧರ್ಮದ ಚೌಕಟ್ಟಿನಲ್ಲಿ ಲಿಂಗೈಕ್ಯ ಪದವನ್ನು ಸತ್ತಾಗ ಬಳಸುವುದು ಅನಿವಾರ್ಯವಾಗುತ್ತದೆ.

ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೊಂದೆಡೆಯಿಲ್ಲ
ಕೂಡಲ ಸಂಗಮದೇವರ ಶರಣ....
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ ಉಪಮಿಸಬಲ್ಲವರ ಕಾಣೆನು.

ಬಸವಣ್ಣನವರ ಲಿಂಗೈಕ್ಯ.

ಧರ್ಮಪಿತ ಬಸವಣ್ಣನವರು ಲಿಂಗೈಕ್ಯರಾದರು, ಹೇಗೆ? ಕೂಡಲಸಂಗಮನಾಥನಲ್ಲಿ ಲಿಂಗೈಕ್ಯರಾದರು "ಎಂಬುದನ್ನು ಭಾವುಕ ಭಕ್ತರು ದೇವಾಲಯದಲ್ಲಿದ್ದ ಸ್ಥಾವರಲಿಂಗವನ್ನು ಸೀಳಿಕೊಂಡು ಒಳಗಿಳಿದರೆಂದು ನಂಬುತ್ತಾರೆ. ಇಲ್ಲವೇ ಸ್ಥಾವರ ಲಿಂಗವು ಬಾಯಿ ತೆರೆದುಕೊಂಡಿತು. ಅದರ ಒಳಗಿನಿಂದ ಶಿವನು ಮೇಲೆದ್ದು ಬಂದು ಬಸವಣ್ಣನವರನ್ನು ಆಲಂಗಿಸಿಕೊಂಡು ಮಾಯವಾದನು ಎಂದೂ ಬಣ್ಣಿಸುತ್ತಾರೆ. ಇಂತಹುದು ನಾಟಕ, ಚಲನ ಚಿತ್ರದ ಸೆಟ್ಟುಗಳ ಮೇಲೆ ಸಾಧ್ಯವೇ ವಿನಾ ಸೈದ್ಧಾಂತಿಕವಾಗಿ ಅಲ್ಲ. ಲಿಂಗದಲ್ಲಿ ಉದಯವಾಗುವುದು ಎಂದರೆ ಜನನ, ಲಿಂಗದಲ್ಲಿ ಹೋಗುವುದು, ಅಡಗುವುದು ಎಂದರೆ ಮರಣ ಎಂದು ಸಹಜವಾಗಿ ನಾವು ಅರ್ಥ ಮಾಡಬೇಕು.

ಇನ್ನು ದೇವರು–ಧರ್ಮ, ಅಧ್ಯಾತ್ಮ–ಅನುಭೂತಿ, ಆತ್ಮ–ದಿವ್ಯಾನಂದ ಮುಂತಾದ ಪದಗಳ ಅರ್ಥವನ್ನೇ ತಿಳಿಯದ, ದಿವ್ಯ ಜೀವನದ ಕಲ್ಪನೆಯೂ ಇಲ್ಲದ ವಿಕೃತ ಅಭಿರುಚಿಯ ಸಾಹಿತಿಗಳಿರುವುದುಂಟು, ವಿಜ್ಞಾನ, ತತ್ತ್ವಜ್ಞಾನ, ಮುಂತಾದುವು ಹೇಗೆ ವಿಸ್ತಾರವಾದ ಕ್ಷೇತ್ರುವನ್ನುಳ್ಳ ಜ್ಞಾನಶರಧಿಗಳೋ ಅದಕ್ಕಿಂತಲೂ ಆಳವಾದ ಸೂಕ್ಷ್ಮವಾದ ಅನುಭಾವ (Mystic Experience) ಪ್ರಧಾನ ದಾರ್ಶನಿಕ ಜಗತ್ತು–ಜೀವನ–ಮೌಲ್ಯಗಳು ಇವೆ ಎಂದು ನಂಬದ ಜನರಿವರು. ಆದರೆ, ವಿಜ್ಞಾನಿಗಳಲ್ಲಿರುವಷ್ಟು ಬೌದ್ಧಿಕ ಪ್ರಾಮಾಣಿಕತೆಯೂ ಇವರಲ್ಲಿರದು. ವಿಜ್ಞಾನಿಗಳು ಪ್ರಾಮಾಣಿಕವಾಗಿ ತಮ್ಮನ್ನು ತಾವು ಪ್ರಯೋಗಾತ್ಮಕ ವೈಜ್ಞಾನಿಕ ಕ್ಷೇತ್ರಕ್ಕೆ ಸೀಮಿತಗೊಳಿಸಿಕೊಂಡು ತಮ್ಮ ಅಭಿಪ್ರಾಯ ತಿಳಿಸುವರು. ಆದರೆ ಆಧ್ಯಾತ್ಮಿಕ ಸಾಧನೆಯಲ್ಲಾಗಲೀ, ಮೌಲ್ಯಗಳಲ್ಲಾಗಲೀ ಶ್ರದ್ಧೆ ಇಲ್ಲದೆ ಹೋದರೂ ತಮ್ಮದಲ್ಲದ ಕ್ಷೇತ್ರದಲ್ಲಿಯೂ ಅಭಿಪ್ರಾಯ, ನಿರ್ಣಯ ಸೂಚಿಸುವ ಧಾರ್ಷ್ಟ್ಯದವರು ಕೆಲವು ಸಾಹಿತಿಗಳು. ಪಾಶ್ಚಿಮಾತ್ಯ ಜಗತ್ತಿನ ಕೆಲವು ವಿದ್ವಾಂಸರು ಕುಂಡಲಿನಿ ಯೋಗ, ಮೂರನೆಯ ಕಣ್ಣು, ಮಿಸ್ಟಿಸಿಸಮ್ ಮುಂತಾದ ಕೆಲವು ಗ್ರಂಥಗಳನ್ನು ಬರೆಯುವ ಮುನ್ನ ಮಾಡಿರುವ ಅಧ್ಯಯನ, ಯೋಗಿಗಳು ಅನುಭಾವಿಗಳ ಒಡನಾಟಗಳನ್ನು ಗಮನಿಸಿದರೆ ಆ ಜನರು ತಾವು ಕೈಗೊಳ್ಳುವ ಸಂಶೋಧನೆ–ಅಧ್ಯಯನಕ್ಕೆ ಎಷ್ಟು ಪ್ರಾಮಾಣಿಕರಾಗಿ ಬದ್ಧರಾಗು ರಲ್ಲಾ ಎನಿಸಿ ಆಶ್ಚರ್ಯ–ಆನಂದ ಉಂಟಾಗುವುವು. ನಮ್ಮಲ್ಲಿ ಹಾಗಲ್ಲ ಆ ಕ್ಷೇತ್ರಗಳಲ್ಲಿ ಪರಿಣತಿ–ಪಾಂಡಿತ್ಯ ಹೋಗಲಿ ಅಧ್ಯಯನ ಮಾಡದಿದ್ದರೂ ಊಹಾಪೋಹದ ಮೇಲೆಯೇ ಅಭಿಪ್ರಾಯ ನೀಡುವುದುಂಟು; ಕಾಲ್ಪನಿಕ ಕಥೆ ಹೆಣೆಯುವುದುಂಟು.

ಇಂಥ ಜನರು "ಬಸವಣ್ಣನವರು ಕೂಡಲ ಸಂಗಮದಲ್ಲಿ ಐಕ್ಯರಾದರು," ಎಂಬುದನ್ನು ಎರಡು ನದಿಗಳ ಸಂಗಮ ಸ್ಥಳದಲ್ಲಿ ಆತ್ಮಹತ್ಯೆ ಮಾಡಿಕೊಂಡಿರಬೇಕು, ಇಲ್ಲವೇ ಯಾರಾದರೂ ಅವರನ್ನು ಕೊಲೆಗೈದಿರಬೇಕು ಎಂಬ ಊಹೆಗೆ ಬರುವರು.

"ಕೂಡಲ ಸಂಗಮ" ಒಂದು ಕ್ಷೇತ್ರ, ಒಂದು ಊರು. ಅಲ್ಲಿ ನದಿಯ ಸಂಗಮವಷ್ಟೇ ಅಲ್ಲ ಒಂದು ಗುರುಕುಲವಿದ್ದಿತು. ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ನವ ಧರ್ಮ ದ್ರಷ್ಟಾರರಾದ ಸ್ಥಳವದು. ಹೀಗಾಗಿ ಗಡಿಪಾರಾದ ನಂತರ ತಾವು ನಿರ್ಗಮಿಸಿ ವಾಸ್ತವ್ಯ ಮಾಡಿ, ಅಂತಿಮ ದಿನಗಳನ್ನು ತಪೋಮಗ್ನರಾಗಿ ಕಳೆಯಲು ಬಸವಣ್ಣನವರು ಕೂಡಲ ಸಂಗಮವನ್ನೇ ಆಯ್ದುಕೊಂಡಿರುವುದು ಸ್ವಾಭಾವಿಕ. ಕಲ್ಯಾಣದಿಂದ ಕೂಡಲ ಸಂಗಮದವರೆಗೆ ಅವರು ಸಾಗಿ ಬಂದ ಸ್ಥಳಗಳು ಮತ್ತು ಆ ಮಾರ್ಗದಲ್ಲಿ ದಂಡಗೊಂಡ ಬಸವಣ್ಣನ ಗುಡಿಗಳು ಅಲ್ಲಲ್ಲೇ ಇರುವುದನ್ನು ಕಾಣಬಹುದು. ಯಾವುದೇ ಸೈನ್ಯವಾಗಲಿ, ವೈರಿಗಳಾಗಲಿ ಬೆನ್ನಟ್ಟಿದುದನ್ನಾಗಲಿ ಏನಾದರೂ ಸಂಘರ್ಷ–ಹೋರಾಟ ನಡೆದುದನ್ನಾಗಲೀ ನಾವು ಕಾಣುವುದಿಲ್ಲ. ಅದೇ ವಚನ ಸಾಹಿತ್ಯ ಹೊತ್ತು ಹೊರಟ ತಂಡಗಳನ್ನು ಅಳಿಯ ಬಿಜ್ಜಳನ ಸೇನೆ ಬೆನ್ನುಹತ್ತಿದುದನ್ನು ಕಾದರವಳ್ಳಿ–ಮುರಗೋಡ ಬಳಿ ಕಾಳಗವಾದುದನ್ನು ಸ್ಥಳೀಯ ಆಖ್ಯಾಯಿಕೆ, ಕಾಲಜ್ಞಾನ ವಚನಗಳು ಮತ್ತು ಜಾನಪದ ಕಾವ್ಯಗಳ ಮೂಲಕ ತಿಳಿಯಬಹುದಾಗಿದೆ. ಹೀಗಾಗಿ ಬಸವಣ್ಣನವರು ವಧಿಸಲ್ಪಟ್ಟರು ಎಂಬ ಊಹಾತ್ಮಕ ಬರಹಕ್ಕೆ ನೆಲೆಸಿಗದು. ಒಂದು ವೇಳೆ ಅಂಥ ದುರ್ಘಟನೆ ಸಂಭವಿಸಿ ಬಸವಣ್ಣನವರು ಹುತಾತ್ಮರಾಗಿದ್ದರೆ, ಜನರು ಅಂಥ ಸ್ಥಳವನ್ನು ಸ್ಮಾರಕವಾಗಿ ಉಳಿಸಿಕೊಳ್ಳದೆ ಇರುತ್ತಿರಲಿಲ್ಲ.

ಇನ್ನು ಆತ್ಮಹತ್ಯೆಯ ಊಹಾಪೋಹವೂ ನೆಲೆಕಾಣದು. ಬಸವಣ್ಣನವರು ಬಹು ದಿಟ್ಟ ಮತ್ತು ಧೀಮಂತ ಸ್ವಭಾವದವರು. ಸಮಾಜದಲ್ಲಿ ಪರಿವರ್ತನೆ ತರಬೇಕು ಎನ್ನುವವರು ಯಾವಾಗಲೂ ಧೈರ್ಯಶಾಲಿಗಳೇ ಇರುತ್ತಾರೆ. ಅಂಥವರು ತಾವು ಕ್ರಾಂತಿಕಾರಿ ಹೆಜ್ಜೆಗಳನ್ನಿಡುವಾಗ ಮುಂದಿನ ಆಗುಹೋಗುಗಳನ್ನು ಅರಿತೇ ಹೆಜ್ಜೆ ಇಡುವರು. ತಾವು ಆಶ್ರಯಿಸಿದ ಸತ್ಯದ ದಾರಿ ಹೂವಿನದಲ್ಲ ಮುಳ್ಳುಕಲ್ಲಿನದು ಎಂದು ಅರಿತಿದ್ದ ಬಸವಣ್ಣನವರು ಕೂಡಲ ಸಂಗಮ ದೇವರ ರಾಜ ತೇಜದಲ್ಲಿಪ್ಪೆ, ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ? ಎಂದೇ ದೃಢವಾಗಿ ನಂಬಿದವರು. ಆತ್ಮಹತ್ಯೆ ಮಾಡಿಕೊಳ್ಳುವಂಥ ಜೀವಗಳ್ಳರಲ್ಲ ಧರ್ಮಪಿತ ಬಸವಣ್ಣನವರು. ಲಿಂಗೈಕ್ಯರಾಗುವಾಗ ನುಡಿದ ವಚನಗಳು ಅವರ ಉನ್ನತ ನಿಲುವಿಗೆ ಸಾಕ್ಷಿಯಾಗಿವೆ.

ಭಕ್ತಿ ಎಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು

ಆಚಾರವೆಂಬ ಕಾಯಹಾಯಿತ್ತು
ನಿಷ್ಪತ್ತಿ ಎಂಬ ಹಣ್ಣಾಯಿತ್ತು
ನಿಷ್ಪತ್ತಿ ಎಂಬ ಹಣ್ಣು ತಾನು
ತೊಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವಾ, ತನಗೆ ಬೇಕೆಂದು ಎತ್ತಿಕೊಂಡ. (೫೨೫)

ಈ ವಚನವು ಹೊರಹೊಮ್ಮುವ ಸ್ವಲ್ಪ ಮೊದಲು ತನ್ನಲ್ಲಿ ಬೆರೆಸಿಕೊಳ್ಳುವಂತೆ ಲಿಂಗದೇವನನ್ನು ಕೋರುವ ವಚನ ಹೀಗಿದೆ :

✳ ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೇ ಅಯ್ಯಾ ?
ಬಯಲ ಮರೀಚಿ ಜಲಕೆ ಕೆಸರುಂಟೆ ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ ?
ಕೂಡಲ ಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನ ನಿಂಬಿಟ್ಟುಕೊಳ್ಳಯ್ಯಾ. (೧೩೯೦)

✳ ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು
ಆ ಮರಕ್ಕೆ ಕೊಂಬೆ ಎರಡು, ಎಲೆ ಆರು
ಮೂವತ್ತಾರು ಪುಷ್ಪ, ಕಾಯಿ ಒಂದೆ !
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ !
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು.
ಕೂಡಲ ಸಂಗಮದೇವರು ಇತ್ತ ಬಾರೆಂದು
ತಮ್ಮ ಹೃದಯದಲ್ಲಿ ಇಂಬಿಟ್ಟುಕೊಂಡರು. (೧೩೯೧)

ಈ ವಚನಗಳನ್ನು ಓದಿದಾಗ ಬಸವಣ್ಣನವರು ಐಕ್ಯರಾಗುವಾಗ ರಚಿಸಿದವು ಎಂದು ಎಂಥವರಿಗೂ ಸ್ಪಷ್ಟವಾಗುವುದು. ಮತ್ತು ಯಾವುದೇ ರೀತಿಯ ಭಯವಾಗಲಿ, ಉದ್ವಿಗ್ನತೆ, ಗಾಬರಿ ಏನೊಂದೂ ಇರಲಿಲ್ಲ ಎಂದು ಗೋಚರವಾಗುವುದು. ಅವರಿಗೆ ತಮ್ಮ ಜೀವನದ ಆತ್ಮಾವಲೋಕನ ಮಾಡಿಕೊಂಡಾಗ ಸಂತೃಪ್ತಿ ಎನಿಸಿರುವುದೇ ಅಲ್ಲದೆ ತಾವು ಬಂದ ಮಣಿಹ ಪೂರೈಸಿದೆ ಎಂಬ ತೃಪ್ತಭಾವ ಸಮನಿಸಿದೆ.

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲಾ ತುದೆ
ಇನ್ನು ಹುಟ್ಟಲಾರೆನು, ಹೊಂದಲಾರೆನು.
ಜನನ-ಮರಣವೆಂಬೆರಡಕ್ಕೆ ಹೊರಗಾದೆನಯ್ಯಾ,
ನೀವು ಹೇಳಿದ ಮಣಿಹವ ಮಾಡಿದೆ
ಇನ್ನು ಕೂಡಿಕೊಳ್ಳಾ ಕೂಡಲ ಸಂಗಮದೇವಾ ! (೧೩೭೩)

ಯಾವುದೇ ಬಗೆಯ ನಿರಾಶೆ, ಹತಾಶೆ, ಕೀಳರಿಮೆ, ಕ್ಲೈಬ್ಯ ಮುಂತಾದ ದುರ್ಬಲ ಮನದ ವ್ಯಕ್ತಿಯ ಲಕ್ಷಣಗಳನ್ನು ಕಾಣದೆ ಸಾರ್ಥಕದ ಬಾಳನ್ನು ದೇವರು ಮೆಚ್ಚುವಂತೆ ಬಾಳಿಯಾಗಿದೆ ಎಂಬ ಸಂತೃಪ್ತ ಮನೋಭಾವವನ್ನು ಇಲ್ಲಿ ಕಾಣಬಹುದಾಗಿದೆ.

ಇಚ್ಛಾ ಮರಣತ್ವ

ಅನುಭವ ಮಂಟಪದ ದಾರ್ಶನಿಕ ದಿಗ್ಗಜಗಳಾದ ವಿಶ್ವಗುರು ಬಸವಣ್ಣ, ಚನ್ನ ಬಸವಣ್ಣ, ಶೂನ್ಯಪೀಠಾಧೀಶ ಅಲ್ಲಮಪ್ರಭು, ಶಿವಯೋಗಿ ಸಿದ್ಧರಾಮೇಶ್ವರ, ವೀರ ವಿರಾಗಿಣಿ ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದ ಕೆಲವು ಪ್ರಮುಖರು, ನಂತರ ಆಗಿಹೋದ ಮಲೆ ಮಹದೇಶ್ವರ, ತೋಂಟದ ಸಿದ್ಧಲಿಂಗೇಶ್ವರರು ಇಚ್ಛಾ-ಮರಣಿಗಳಾಗಿ ಲಿಂಗೈಕ್ಯರಾದುದನ್ನು ಗಮನಿಸಬಹುದು. ಶರಣರನ್ನು "ಕಾಯ ಸಹಿತ ಕೈಲಾಸಕ್ಕೆ ಹೋದರು" ಎಂದೂ ಗ್ರಾಮೀಣ ಭಾಷೆಯಲ್ಲಿ ಜನರು ಅನ್ನುವು-ದುಂಟು. ಇಚ್ಛಾಮರಣ ಎಂದರೆ ಆತ್ಮಹತ್ಯೆ ಎಂದು ತಪ್ಪಾಗಿ ಭಾವಿಸಿ, ವ್ಯಾಖ್ಯಾನಿಸ-ಬಾರದು. ಆತ್ಮಹತ್ಯೆಯಲ್ಲಿ ಬದುಕಲಾರದ ಹೇಡಿತನ ; ಏನನ್ನೂ ಸಾಧಿಸಲು ಆಗದ ನಿರಾಶೆ ಇದ್ದರೆ ಇಚ್ಛಾಮರಣದಲ್ಲಿ ಸಾರ್ಥಕದ ಬಾಳನ್ನು ಬಾಳಿದ ಪರಮ ತೃಪ್ತಿ ಇರುತ್ತದೆ.

"ಕಾಯ-ಜೀವನ ಹೊಲಿಗೆಯ ಬಿಚ್ಚಿದವನೇ ನಿಜ ಶರಣ." ಎಂಬ ವ್ಯಾಖ್ಯಾನ-ದಂತೆ ; ಪ್ರಾಣಲಿಂಗಿ ಸ್ಥಲ ಸಿದ್ಧಿಯಾದವನು ಗೂಡಿನ ಪಕ್ಷಿಯಂತೆ ಬದ್ಧಕಾಯನಂತೆ ಪಂಜರದ ಪಕ್ಷಿಯಲ್ಲ, ಯಾವಾಗ ಬೇಕಾದರೂ ದೇಹದ ಗೂಡನ್ನು ಬಿಟ್ಟು ಹಾರಬಲ್ಲ ಎಂಬ ವಿವರಣೆಯಂತೆ ಯೋಗಿಯು ಅಸಾಮಾನ್ಯ ಯೋಗ ತಂತ್ರದಿಂದ ತನಗೆ ಬೇಕೆನಿಸಿದಾಗ ಆತ್ಮವನ್ನು ದೇಹದಿಂದ ಬೇರ್ಪಡಿಸಿ, ದೇಹವನ್ನು ಬಿಸುಟುವ ಕಲೆಯನ್ನು ಸಿದ್ಧಿಸಿಕೊಂಡಿರುತ್ತಾನೆ. ಷಟಸ್ಥಲದಲ್ಲಿ ಪ್ರಾಣಲಿಂಗಿ ಸ್ಥಲವು ವಿಶೇಷವಾದಿ ಯೋಗತಂತ್ರಕ್ಕೆ ಮಹತ್ವ ನೀಡುತ್ತದೆ. ಆದ್ದರಿಂದ ಈ ಸ್ಥಲವನ್ನು ದಾಟಿದವರು ಇಚ್ಛಾಮರಣಿಗಳಾಗಿ ಆತ್ಮ-ದೇಹಗಳ ಬಂಧನವನ್ನು ಬಿಡಿಸಬಲ್ಲರು. ಅತ್ಯಂತ ಕಠಿಣತಮವಾದ ಈ ಸಾಧನೆಯನ್ನು ಕೆಲವೇ ಕೆಲವು ಶರಣರು ಸಾಧಿಸಿರುವುದನ್ನು ಅವರ ವಚನಗಳಲ್ಲಿ ಕಾಣಬಹುದು.

★ ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟೆಲುವ ಮುರಿದು
ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ !
ಬಿಚ್ಚಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗಂಡಿಯ,
ಕೂಡಲ ಸಂಗಮದೇವ ಹಿಡಿವಡೆದ. (814)

★ ಪೃಥ್ವಿ, ಅಪ್ಪು ತೇಜ, ವಾಯು, ಆಕಾಶ ನಿರಂಜನದೇವಾ
ನಿಮ್ಮ ಮಹಿಮೆಯ ಪ್ರಣವ ಸ್ವರೂಪಂಗಲ್ಲದೆ

ಕಾಣಲಾರಿಗೆಯೂ ಬಾರದಯ್ಯಾ.
ಜ್ಞಾನಜ್ಯೋತಿ ಧ್ಯಾನದಿಂದ ನಾಳಶುದ್ಧ ದ್ವಾರನಾಗಿ
ಆರಾಧಿಸಿ ಕಂಡೆ ನಮ್ಮ ಕೂಡಲ ಸಂಗಮದೇವನ (813)

★ ಬ್ರಹ್ಮರಂಧ್ರದಲ್ಲಿ ಬೆಳಗಿದಾತ ಮಡಿವಾಳಯ್ಯ
ಶಿಖಾಚಕ್ರದಲ್ಲಿ ಬೆಳಗಿದಾತ ಸಿದ್ಧರಾಮಯ್ಯ
ಪಶ್ಚಿಮ ಚಕ್ರದಲ್ಲಿ ಬೆಳಗಿದ ಮಹಾಮಹಿಮ
ನೀನಲ್ಲದೆ ಮತ್ತಾರು, ಕೂಡಲ ಸಂಗಮದೇವಾ ? (1356)

ಶ್ರಾವಣಶುದ್ಧ ಪಂಚಮಿಯಂದು ಶಿವಯೋಗಾನುಷ್ಠಾನದಲ್ಲಿ ಬಸವಣ್ಣನವರು ಕುಳಿತು ತನ್ಮಯರಾಗಿರುವಾಗಲೇ ಅವರಿಗೆ ಪರಮಾತ್ಮನಿಂದ ಒಂದು ಆದೇಶ ಪ್ರಾಪ್ತಿಯಾಗುತ್ತದೆ. ಈ ದೇವಾದೇಶವನ್ನು ಮಹಾಪ್ರಸಾದವೆಂದು ಸ್ವೀಕರಿಸುತ್ತಾರೆ; ಈ ಪ್ರಸಂಗವನ್ನು ಕೆಳಗಿನ ವಚನವು ಸ್ಪಷ್ಟಪಡಿಸುತ್ತದೆ.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಕೂಡಲ ಸಂಗಮ ದೇವರ ನಿರೂಪಕ್ಕೆ ಮಹಾಪ್ರಸಾದವೆಂಬೆನು. (1062)

ಆಧಾರ ಚಕ್ರದಿಂದ ಕುಂಡಲಿನಿ ಶಕ್ತಿಯನ್ನು ಮೇಲಕ್ಕೇರಿಸಿ ಆಜ್ಞಾ, ಸಹಸ್ರಾರಗಳನ್ನೂ ದಾಟಿ, ಶಿಖಾ ಚಕ್ರವನ್ನು ತಾಡಿಸಿ, ಪಶ್ಚಿಮ ಚಕ್ರದ ಕಪಾಟ ತೆರೆದು ಪ್ರಾಣವಾಯುವನ್ನು ಜೀವಾತ್ಮನನ್ನು ಪಶ್ಚಿಮ ಚಕ್ರದ ಮೂಲಕ ಬಿಡುಗಡೆ ಮಾಡುವ ಅದ್ಭುತ ಯೋಗ ಕೌಶಲ್ಯದ ಮೂಲಕ ಶಿವಯೋಗಿ, ದಾರ್ಶನಿಕ ಸಾಮ್ರಾಟ ಬಸವಣ್ಣನವರು ಲಿಂಗೈಕ್ಯರಾಗಿದ್ದಾರೆ. ಬಯಲಲ್ಲಿ ಅಂದರೆ ನಿರ್ವಿಕಾರ, ನಿರಂಜನ, ಪರತತ್ತ್ವದಲ್ಲಿ ವಿಲೀನವಾಗಿದ್ದಾರೆ. ಅವರು ಲಿಂಗೈಕ್ಯರಾದ ಸ್ವಲ್ಪವೇ ಸಮಯದಲ್ಲಿ ಧಾವಿಸಿದ ಮಡಿವಾಳ ಮಾಚಿದೇವರು ಹೀಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣ
ಸೀಮೆ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ
ಆ ಬಸವಣ್ಣಂಗೆ ಶರಣೆಂಬ ಪಥವನೆ ತೋರು ಕಂಡಾ
ಕಲಿದೇವರ ದೇವ (ಮ. ಮಾ. ೫೦೮)

ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು (೨–೭–೧೧೯೬) ಸುಪ್ರಭಾತದಲ್ಲಿ ಪೂಜೆಗೆ ಕುಳಿತವರು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ಸೂರ್ಯೋದಯವಾದ 28 ಗಳಿಗೆಗೆ ಬಸವಣ್ಣನವರು ಬಯಲಾದರು. ತಮ್ಮ ಅಸಾಮಾನ್ಯ ವ್ಯಕ್ತಿತ್ವ, ಅದ್ಭುತ ಯೋಜನೆ, ಅಪೂರ್ವ ಸಾಧನೆ-ಸಂದೇಶಗಳಿಂದ ಅಮರರಾಗಿರುವ ಬಸವಣ್ಣನವರು ನಮ್ಮೆಲ್ಲರ ಹೃದಯದಲ್ಲಿ ಪರಂಜ್ಯೋತಿಯಂತೆ ತೊಳಗಿಬೆಳಗುತ್ತಲಿದ್ದಾರೆ.

❋

(ಮಾತಾಜಿ)
ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠಾಧ್ಯಕ್ಷೆ, ಕೂಡಲ ಸಂಗಮ

ಸಮಗ್ರ ವರದಿ : ಶರಣ. ಡಿ. ಎಸ್. ವಿಜಯಾನಂದರು

ಬಸವಣ್ಣನವರ ವಿಚಾರ ಧಾರೆ ಎಂದೆಂದಿಗೂ ಪ್ರಸ್ತುತ

—ಗುರುಪಾದಪ್ಪ ನಾಗಮಾರಪಳ್ಳಿ

12 ನೆಯ ಶತಮಾನದಲ್ಲಿಯೇ ಬಸವಣ್ಣನವರು ಇಂದಿನ ಶತಮಾನಕ್ಕೂ ಪ್ರಸ್ತುತವಾಗುವ ವಿಚಾರಗಳನ್ನು ಪ್ರತಿಪಾದಿಸಿದ್ದರು. ಸಾಮಾಜಿಕವಾಗಿ ಹಿಂದುಳಿದವರನ್ನು ಮೇಲೆತ್ತಲು ಇಂದು ಮೀಸಲಾತಿಯನ್ನು ಆಚರಣೆಗೆ ತರಲಾಗಿದೆ. ಅಂದು ಅವರು ಅತ್ಯಂತ ಹಿಂದುಳಿದವರನ್ನು ಅಪ್ಪಾ-ಬೊಪ್ಪಾ ಎಂದು ಅವರನ್ನು ವಿಶೇಷವಾಗಿ ಆದರಿಸಿ ಮೇಲೆತ್ತುವ ಮೂಲಕ ಅಂದೇ ಮೀಸಲಾತಿಯನ್ನು ಜಾರಿಗೆ ತಂದಿದ್ದರು; ಇಂತಹ ಸ್ವತಂತ್ರವಾದ ವಿಚಾರವಾದಿಯಾದ ಮಹಾಪುರುಷ ಬಸವಣ್ಣನವರ ಅನುಯಾಯಿಗಳು ನಾವು ಎಂದುಕೊಳ್ಳಲು ಅಪಾರ ಅಭಿಮಾನ ಪಡಬೇಕು. ಅವರು ಬೋಧಿಸಿದ್ದನ್ನು ಎಲ್ಲವನ್ನೂ ನಡೆದು ತೋರಿಸಲು ನಮಗೆ ಸಾಧ್ಯವಿಲ್ಲವಾದರೂ ಎಷ್ಟು ಸಾಧ್ಯವೋ ಅಷ್ಟನ್ನು ಅನುಷ್ಠಾನಕ್ಕೆ ತರಬೇಕು" ಎಂದು ವಿಶ್ವಗುರು ಬಸವಣ್ಣನವರ "800 ನೆಯ ಲಿಂಗೈಕ್ಯ ಸಂಸ್ಮರಣಾ" ಕಾರ್ಯಕ್ರಮದ ಉದ್ಘಾಟನೆ ಮಾಡಿದ ಅರಣ್ಯ ಖಾತೆ ಸಚಿವ ಗುರುಪಾದಪ್ಪ ನಾಗಮಾರಪಳ್ಳಿಯವರು ನುಡಿದರು.

ಕುವೆಂಪು ಕಲಾಕ್ಷೇತ್ರದಲ್ಲಿ ದಿನಾಂಕ 19 ರಂದು ಬಸವಣ್ಣನವರ 800 ನೆಯ ಸಂಸ್ಮರಣಾ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ ಅವರು, "ನಮ್ಮ ಜೀವನದಲ್ಲಿ

ಬಂದಿರುವ ಪರಮ ಪವಿತ್ರವಾದ ಎಂಟನೆಯ ಲಿಂಗೈಕ್ಯ ಶತಮಾನೋತ್ಸವ ಸಂದರ್ಭವಿದು. ನಾವು ಧರ್ಮದಲ್ಲಿ ನಿರಾಸಕ್ತರು ಎಂದು ಹೇಳಿಕೊಳ್ಳುವುದು ಒಂದು ದೊಡ್ಡಸ್ತಿಕೆ ಎಂದೇ ಕೆಲವರು ಭಾವಿಸಿದ್ದಾರೆ. ಇದು ತಪ್ಪು. ಧರ್ಮವು ಮಾನವ ಜೀವನದ ಅವಿಭಾಜ್ಯ ಅಂಗ. ಧರ್ಮವಂತರೆಂದು ಹೇಳಿಕೊಳ್ಳಲು ನಾವು ಅತೀವ ಅಭಿಮಾನಪಡಬೇಕು. ಅದರಲ್ಲೂ ಬಸವಣ್ಣನವರ ಅನುಯಾಯಿಗಳೆಂದುಕೊಳ್ಳಲು ಇನ್ನೂ ಅಭಿಮಾನ ಪಡಬೇಕು" ಎಂದು ನುಡಿದರು.

ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವವನ್ನು ಉದ್ಘಾಟಿಸಿದ ಬಸವ ಧರ್ಮ ಪೀಠಾಧ್ಯಕ್ಷೆ **ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು**, "ಧರ್ಮಪಿತ ಬಸವಣ್ಣನವರು ಜಗತ್ತಿನ ಮೊಟ್ಟಮೊದಲ ಸಮತಾವಾದಿ ; ದಲಿತೋದ್ಧಾರಕ, ಸ್ತ್ರೀ ವಿಮೋಚಕ, ಅವರದು ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವ. ಸೃಷ್ಟಿಕರ್ತನೆಂಬ ಶಿಲ್ಪಿ ತನ್ನ ಅನುಗ್ರಹದ ಉಳಿ ಹಿಡಿದು ಕಟೆದ ಅಪರೂಪದ ಶಿಲ್ಪಕೃತಿ. ಇಂಥ ಬಸವಣ್ಣನವರು ಸುಮಾರು 63 ವರ್ಷಕಾಲ ಈ ಇಳೆಯ ಮೇಲಿದ್ದು ಮಹಾನ್ ಕಾರ್ಯ ಮಾಡಿದರು. ಅವರು ಬದುಕಿದ್ದು ಕೇವಲ 36 ವರ್ಷವೆಂದು ಕೆಲವರು ಭಾವಿಸಿದ್ದಾರೆ. ಅಯ್ಯಾ ಭಕ್ತಿ ಬೀಡಾದುದು 36 ವರ್ಷ ಅನುಭವಕ್ಕೆ ಶಿವಸದನವಾದುದು 27 ವರ್ಷ ಎಂಬ ಅವರದೇ ವಚನದಿಂದ ಮೂವತ್ತಾರು ವರ್ಷ ಬಸವಣ್ಣನವರು ಕಲ್ಯಾಣದಲ್ಲಿ ವಾಸ್ತವ್ಯ ಮಾಡಿದ ಅವಧಿಯೇ ವಿನಾ ಅವರ ಜೀವಿತಾವಧಿಯಲ್ಲ.

ನಳನಾಮ ಸಂವತ್ಸರದಲ್ಲಿ ಶ್ರಾವಣ ಶುದ್ಧ ಪಂಚಮಿಯಂದು ಜುಲೈ 2 ನೆಯ ದಿನಾಂಕ 1196 ರಲ್ಲಿ ಬಯಲಾದರು. ಇದನ್ನು ತೆಲುಗು ಸಾಹಿತ್ಯದ ನೆರವಿನಿಂದ, ಕಾಲಜ್ಞಾನ ವಚನಗಳ ಆಧಾರದಿಂದ ಸಿದ್ಧಮಾಡಿದವರು ಡಾ॥ ಬಾಡಾಲ ರಾಮಯ್ಯನವರು. ಅವರ ಸಂಶೋಧನೆ ಅಧಿಕೃತವೆನಿಸಿದ ಕಾರಣ, ಬಸವಣ್ಣನವರ ಲಿಂಗೈಕ್ಯ ದಿನವನ್ನು ಶ್ರಾವಣ ಶುದ್ಧ ಪಂಚಮಿ ಎಂದೇ ಗುರುತಿಸಲಾಗಿದೆ. ಇಂದಿಗೆ 800 ವರ್ಷಗಳು ತುಂಬುತ್ತಿವೆ. ಇಂದಿನಿಂದ ಒಂದು ವರ್ಷಕಾಲ ಲಿಂಗೈಕ್ಯ ಅಷ್ಟಶತಮಾನೋತ್ಸವವನ್ನು ಆಚರಿಸಲಾಗುತ್ತಿದೆ. ಈ ಸಮಯದೊಳಗಾಗಿ ನಾವು ಬಸವಣ್ಣನವರ ಸಾಧನೆ-ಸಂದೇಶ ಕುರಿತು ವ್ಯಾಪಕವಾಗಿ ಪ್ರಚಾರ ಮಾಡಬೇಕಾಗಿತ್ತು. ಈಗಲಾದರೂ ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಮಾಡಲು ಒಂದು ಯೋಜನೆಯನ್ನು ರೂಪಿಸಲಾಗುತ್ತಿದೆ. ರಾಜ್ಯದ ವಿವಿಧ ಸ್ಥಳಗಳಲ್ಲಿ, ರಾಷ್ಟ್ರದ ಹಲವಾರು ರಾಜ್ಯಗಳಲ್ಲಿ ಬಸವ ಸಂದೇಶ ಯಾತ್ರೆ ಹಮ್ಮಿಕೊಳ್ಳಲಾಗುತ್ತಿದೆ. ಇಂದು ಉದ್ಘಾಟನೆಯಾದ ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಮುಂದಿನ ವರ್ಷ ನಡೆಸಲಾಗುವುದು. ಇದಕ್ಕಾಗಿ ಶ್ರೀಮತಿ ರಾಣಿ ಸತೀಶ್ ಅವರ

ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಿತಿ ಮಾಡಲಾಗಿದೆ. ರಾಷ್ಟ್ರಮಟ್ಟದ ಸಮಿತಿಯನ್ನು ಮತ್ತು ಸಮ್ಮೇಳನ ನಿರ್ವಹಣಾ ಸಮಿತಿಯನ್ನು ಮುಂದೆ ರಚಿಸಲಾಗುವುದು" ಎಂದು ಮಾತನಾಡಿದರು.

"ಬಸವ ವಚನ ದೀಪ್ತಿ" ಎಂಬ ವಿಶ್ವಗುರು ಬಸವಣ್ಣನವರ ಲಭ್ಯವಿರುವ ಸಮಗ್ರ ವಚನಗಳ ಸಂಗ್ರಹವನ್ನು ಬಿಡುಗಡೆ ಮಾಡಿ ಮಾತನಾಡಿದ ರಾಣಿ ಸತೀಶ್‌ರವರು "ಎಂಟು ನೂರು ವರ್ಷಗಳ ಹಿಂದೆಯೇ ಬಸವಣ್ಣನವರು ಮಹಿಳಾ ಸಮಾನತೆ ಎತ್ತಿಹಿಡಿದರು. ಇಂದು ನಾನು ವಿಧಾನ ಪರಿಷತ್ತಿನ ಉಪಸಭಾಪತಿಯಾಗಿರುವುದು ದೊಡ್ಡದಲ್ಲ. ಅಂದೇ ಅಕ್ಕಮಹಾದೇವಿಯನ್ನು ಆಚಾರ್ಯಪುರುಷರಲ್ಲಿ ಒಬ್ಬಳನ್ನಾಗಿ ಗುರುತಿಸಿ, ಬಸವಣ್ಣನವರು ಸ್ತ್ರೀಯರ ಸರ್ವಾಂಗೀಣ ಉದ್ಧಾರಕ್ಕಾಗಿ ಯೋಜನೆ ರೂಪಿಸಿದರು. ಸಾಮಾಜಿಕ ಸಮಾನತೆಯನ್ನು ಜಾತ್ಯತೀತತೆಯನ್ನು ಅಂದೇ ಬೋಧಿಸಿದರು. ಇಂದು ಅನೇಕ ರಾಜಕಾರಣಿಗಳು ಜಾತಿಯನ್ನು ಬಂಡವಾಳ ಮಾಡಿಕೊಂಡು ಪರಸ್ಪರರಲ್ಲಿ ಪ್ರತ್ಯೇಕತೆಯ ಭಾವನೆ ಬೆಳೆಸುತ್ತಿದ್ದಾರೆ. ಆದ್ದರಿಂದ ರಾಜಕಾರಣಿಗಳಿಗೇ ಬಸವಣ್ಣನವರ ಆದರ್ಶ ಮಾರ್ಗ ಹೆಚ್ಚು ಅಗತ್ಯವೆನಿಸಿದೆ. ಲಿಂಗೈಕ್ಯ ಅಷ್ಟಶತಮಾನೋತ್ಸವವನ್ನು **ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು** ಹಮ್ಮಿಕೊಂಡಿರುವುದು ಅತ್ಯಂತ ಶ್ಲಾಘನೀಯ ಕಾರ್ಯವಾಗಿದೆ. ರಾಜ್ಯ ಮಟ್ಟದ ಸಮಿತಿಗೆ ನನ್ನನ್ನು ಅಧ್ಯಕ್ಷಳನ್ನಾಗಿ ಮಾಡಿರುವುದು ನನ್ನ ಪುಣ್ಯವೆಂದು ಭಾವಿಸಿದ್ದೇನೆ. ಅತ್ಯಂತ ನಿಷ್ಠೆಯಿಂದ ಈ ಸೇವೆಯನ್ನು ಪೂರೈಸಲು ಪ್ರಯತ್ನಿಸುತ್ತೇನೆ" ಎಂದು ನುಡಿದರು.

ಬೆಂಗಳೂರು ನಗರದ ಪೋಲೀಸ್ ಕಮೀಷನರ್ ಶ್ರೀ ಎಸ್. ಸಿ. ಬರ್ಮನ್ ಅವರು ದೃಷ್ಟಾಂತ ಸರಸಿ ಎಂಬ ಕೃತಿಯನ್ನು ಬಿಡುಗಡೆ ಮಾಡಿ, **"ಪೂಜ್ಯ ಮಾತಾಜಿಯವರು** ಬರೆದ ನೀತಿ ಕಥೆಗಳ ಈ ಕೃತಿ ಬಹುಮೌಲಿಕವಾಗಿದೆ. ಬಹು ಗಡುಚಾದ ತತ್ತ್ವಜ್ಞಾನ–ಧರ್ಮ ಮುಂತಾದುವನ್ನು ದೃಷ್ಟಾಂತ ಕಥೆಗಳ ಮೂಲಕ ಸುಲಭವಾಗಿ ತಿಳಿಯಪಡಿಸಿದ್ದಾರೆ" ಎಂದು ಶ್ಲಾಘಿಸಿದರಲ್ಲದೆ. **"ಪೂಜ್ಯ ಶ್ರೀ ಮಾತಾಜಿಯವರು** ಬಸವ ಧರ್ಮಪೀಠದ ಮೂಲಕ ಮಾಡುತ್ತಿರುವ ಕಾರ್ಯ ಅಭಿನಂದನಾರ್ಹ. ಇಂದು ನಮ್ಮ ದೇಶಕ್ಕೆ ಜನಾಂಗಕ್ಕೆ ಬಸವಣ್ಣನವರ ಮಾನವೀಯ ಸಂದೇಶ ಬಹು ಅಗತ್ಯವಾಗಿದೆ. ಸರ್ವ ಧರ್ಮ ಸಮಭಾವ ಅತ್ಯಂತ ಆಗತ್ಯವಾಗಿರುವ ಸನ್ನಿವೇಶದಲ್ಲಿ ಬಸವಣ್ಣನವರ ಇವನಾರವ ಎನ್ನಬೇಡ, ಇವ ನಮ್ಮವ ಎಂದು ಎಲ್ಲರನ್ನೂ ಪ್ರೀತಿಯಿಂದ ಕಾಣು ಎಂಬ ಸಂದೇಶ ಬಹಳ ಅವಶ್ಯವಿದೆ" ಎಂದು ನುಡಿದರು.

ಕೊಳಚೆ ನಿರ್ಮೂಲನ ಮಂಡಳಿಯ ಕಾರ್ಯದರ್ಶಿ ಶ್ರೀ ಸಿ ಸೋಮಶೇಖರ್, ಕಲ್ಯಾಣ ಕಿರಣ ಮಾಸಪತ್ರಿಕೆಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ, "1970 ರಲ್ಲಿ ಬಿಡುಗಡೆಯಾದ ಕಲ್ಯಾಣ ಕಿರಣವು ಅಖಂಡವಾಗಿ ಇಪ್ಪತ್ತಾರು ವರ್ಷಗಳ ಕಾಲ ನಡೆದು ಮೌಲಿಕ ಲೇಖನಗಳನ್ನು ಪ್ರಕಟಿಸುತ್ತ ಬೌದ್ಧಿಕ ಆಹಾರ ನೀಡುತ್ತಿದೆ. ಬಸವ ಸಂದೇಶವನ್ನು ಪ್ರಚಾರ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ" ಎಂದು ಕೊಂಡಾಡಿದರಲ್ಲದೆ "ಬಸವಣ್ಣನವರು ಸೃಷ್ಟಿಯ ಒಂದು ವಿಸ್ಮಯವೇ ಸರಿ ಎಂದು ಪ್ರೊ. ಆರ್. ಕೆ. ಶ್ರೀಕಂಠನ್‌ರವರು ಹೇಳಿ, ಬಸವಣ್ಣನವರು ಬುದ್ಧನಂತೆ ದಯಾಶಾಲಿಗಳು, ಮಹಾವೀರನಂತೆ ಸದ್ಭಾವಿಗಳು, ಜೀಸಸನಂತೆ ಸರಳ ಮೂರ್ತಿ, ಮೊಹಮ್ಮದನಂತೆ ಧೈರ್ಯಶಾಲಿಗಳು. ಅವರ ಸಂದೇಶವು ಒಂದು ಜಲಾಶಯದಂತೆ ಇದೆ. ಅದರೊಳಕ್ಕೆ ಹಿಂದಿನ ಅನೇಕ ಮಹಾತ್ಮರ ವಿಚಾರಧಾರೆಗಳು ಹರಿದುಬಂದಿವೆ, ನಂತರದ ಅನೇಕ ವಿಚಾರಧಾರೆಗಳ ಉಗಮಕ್ಕೆ ಸ್ಫೂರ್ತಿ ನೀಡಿವೆ." ಹೇಗೆ ಬದುಕಬೇಕು, ಹೇಗೆ ಮಾತನಾಡಬೇಕು ಎಂಬುವದನ್ನೆಲ್ಲ ಬಸವಣ್ಣನವರು ನಮಗೆ ಕಲಿಸಿದ್ದಾರೆ. ಅವರು ಕೊಟ್ಟ ಕಳಬೇಡ ಕೊಲಬೇಡ ಎಂಬ ಸಪ್ತಸೂತ್ರಗಳಂತೂ ಮಾನವ ಜನಾಂಗಕ್ಕೆ ಅಮೃತ ಸಂದೇಶಗಳಾಗಿವೆ." ಎಂದು ನುಡಿದರು.

ಅಖಿಲ ಭಾರತ ವೀರಶೈವ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷರಾದ ಮೈಸೂರಿನ ಶ್ರೀ ಕೆ. ಪಿ ಶಾಂತಮೂರ್ತಿಯವರು ವಚನ ತಾಂಬೂಲಕ್ಕಾಗಿ ಪ್ರಕಟಿಸಿರುವ ವಚನ-ದೀಪ್ತಿ ಎಂಬ ಚಿಕ್ಕ ಹೊತ್ತಿಗೆಯನ್ನು ಬಿಡುಗಡೆ ಮಾಡಿ, "ಮನೆಗೆ ಬಂದ ಗಣ್ಯರು, ಬಂಧುಗಳು, ಮಿತ್ರರಿಗೆ ಕಾಯಿಯ ತಾಂಬೂಲ ಕೊಡುವ ಬದಲು ಇಂಥ ವಚನ ಗ್ರಂಥಗಳನ್ನು ಕೊಡುವುದು ಬಹಳ ಅಭಿನಂದನಾರ್ಹ, ಈ ಮೂಲಕ ಸಾಹಿತ್ಯ ಪ್ರಚಾರವಾಗುವುದು. ಅದಕ್ಕಾಗಿ ಕಡಿಮೆ ಬೆಲೆಯ ಇಂಥ ಹೊತ್ತಿಗೆ ಪ್ರಕಟಿಸಲಾಗಿದೆ. ಕೋಟಿಗಟ್ಟಳೆ ಹಣವಿರುವ ಮಠಾಧಿಕಾರಿಗಳು ಮಾಡದೆ ಇರುವ ಮಹತ್ತರ ಕಾರ್ಯವನ್ನು **ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ**ಯವರು ಮಾಡುತ್ತಿದ್ದು, ಇಂದು ಸಮಾಜಕ್ಕೆ ಅವರ ಮಾರ್ಗದರ್ಶನ ಅತ್ಯಗತ್ಯವಾಗಿದೆ. ಅವರ ಆದೇಶದಂತೆ ಮೈಸೂರು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಈ ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವ ಮಾಡಲಾಗುವುದು. ಪೂಜ್ಯ ಮಾತಾಜಿಯವರು ಹೇಳುತ್ತಿರುವಂತೆ ಬಸವಣ್ಣನವರೇ ನಮ್ಮ ಲಿಂಗಾಯತ ಧರ್ಮದ ಆದಿಗುರು ಎಂದೊಪ್ಪಿ, ವಚನ ಸಾಹಿತ್ಯವನ್ನು ನಮ್ಮ ಧರ್ಮಸಂಹಿತೆ ಎಂದು ನಂಬಿ, ಕೂಡಲ ಸಂಗಮವೇ ನಮ್ಮ ಧರ್ಮಕ್ಷೇತ್ರ ಎಂದು ಮುನ್ನಡೆದರೆ ಅಖಂಡ ಮತ್ತು ಜೀವಂತ ಸಮಾಜ ಕಟ್ಟುವುದು ಕಷ್ಟಸಾಧ್ಯವಲ್ಲ" ಎಂದು ಮಾತನಾಡಿದರು.

ಶ್ರೀ ಮುದ್ದೀರೇಶ್ವರ ಮೈನಿಂಗ್ ಇಂಡಸ್ಟ್ರೀಸ್ ಮಾಲಿಕರಾದ ಶ್ರೀ ಕೆ. ಆರ್. ಸೋಮಶೇಖರ್ 'ಸಚ್ಚಿದಾನಂದ ಪ್ರಿಯೆಯ ವಚನಗಳು' ಎಂಬ ಪೂಜ್ಯ ಮಾತಾಜಿಯವರು ಬರೆದ ವಚನ ಸಂಕಲನವನ್ನು ಬಿಡುಗಡೆ ಮಾಡಿದರು. ಧರ್ಮ-ಸಮಾಜ-ಸಾಹಿತ್ಯ ಸೇವಾ ಕಾರ್ಯಗಳಲ್ಲಿ ತೊಡಗಿರುವ ಗಣ್ಯರನ್ನು ಸತ್ಕರಿಸಲಾಯಿತು. ತೆಲುಗು ಸಾಹಿತ್ಯ ಮತ್ತು ಕಾಲಜ್ಞಾನ ವಚನಗಳ ಆಧಾರದ ಮೇಲೆ ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ನಡೆದ ವರ್ಣಾಂತರ ವಿವಾಹದ ದಿನಾಂಕ, ಬಸವಣ್ಣನವರ ಲಿಂಗೈಕ್ಯ ದಿನ, ಪ್ರಭುದೇವರ ಲಿಂಗೈಕ್ಯ ದಿನ ಮುಂತಾದುವುಗಳನ್ನು ಶಾಸ್ತ್ರೀಯವಾಗಿ ಗುರುತಿಸಿರುವ ಡಾ॥ ರಾಮಯ್ಯನವರನ್ನು, "ಬಸವ ವಚನ ದೀಪ್ತಿ" ಎಂಬ ಗ್ರಂಥವನ್ನು ರಿಯಾಯಿತಿ ಬೆಲೆಯಲ್ಲಿ ಓದುಗರಿಗೆ ತಲುಪಿಸಲು ಧನ ಸಹಾಯ ಮಾಡಿರುವ ಲಿಂಗಾಯತ ಸಮಾಜದ ಮುಖಂಡರೂ, ಉದ್ಯಮಿಗಳೂ ಆದ ಶ್ರೀ ಆರ್. ಎಂ. ಬಿ. ಆರಾಧ್ಯರನ್ನು, ಅವರ ಧರ್ಮಪತ್ನಿ ಶ್ರೀಮತಿ ಸರೋಜಾ ಅವರನ್ನು, ಮುಂಬೈಯ ರೇಷ್ಮೆ ರಫ್ತುದಾರರಾಗಿರುವ ಶ್ರೀ ವಿ. ಬಸವರಾಜು ಅವರನ್ನು ಅವರ ಕೊಡುಗೆಗಾಗಿ ಸತ್ಕರಿಸಲಾಯಿತು. ಸಮಾಜ ಸೇವೆ-ಮಾನವೀಯ ಕೈಂಕರ್ಯಕ್ಕಾಗಿ ಅನೇಕ ಪ್ರಶಸ್ತಿಗಳನ್ನು, ಇತ್ತೀಚೆಗೆ ತಾನೇ ಕರ್ನಾಟಕ ಕಲ್ಪವಲ್ಲರಿ ಪ್ರಶಸ್ತಿ ಪಡೆದಿರುವ ಸುಮಂಗಲಿ ಸೇವಾಶ್ರಮದ ಶ್ರೀಮತಿ ಎಸ್. ಜಿ. ಸುಶೀಲಮ್ಮನವರನ್ನು ಸನ್ಮಾನಿಸಲಾಯಿತು, ಬಸವ ಧರ್ಮ ಪೀಠದ ಕಟ್ಟಡ ನಿರ್ಮಾಣಕ್ಕೆ ವಿಶೇಷ ಧನ ಸಹಾಯ ಮಾಡಿರುವ ಶ್ರೀ ಕೆ. ಆರ್. ಸೋಮಶೇಖರ್, ಶ್ರೀ ಕೆ. ಆರ್. ಪರಂಜ್ಯೋತಿ, ಮೂರ್ತಿ ಗ್ಲಾಸ್ ವರ್ಕ್ಸ್ ಮಾಲಿಕರು, ದಾನಿಗಳೂ ಆದ ಶ್ರೀ ಎಸ್. ಮೂರ್ತಿಯವರನ್ನು, ದೃಷ್ಟಾಂತ ಸರಸಿ ಗ್ರಂಥಕ್ಕೆ ಧನ ಸಹಾಯ ಮಾಡಿರುವ ಶ್ರೀಮತಿ ಶಕುಂತಲಾ ಪುಟ್ಟಸಿದ್ಧಪ್ಪ, ಈ ಅಷ್ಟಶತಮಾನೋತ್ಸವಕ್ಕಾಗಿ ವಿಶೇಷ ಧನ ಸೇವೆ ಮಾಡಿರುವ ಅಮರಜ್ಯೋತಿ ಕಂಪೆನಿಯ ಶ್ರೀ ಕಾಂತಿಲಾಲ್ ಜೈನ್, ಲೋಟಸ್-ಪ್ರಿಂಟರ್ಸ್‌ದ ಶ್ರೀ ಡಿ. ಎಸ್. ಪಾಟೀಲ, ರಮಣಶ್ರೀ ಗ್ರೂಪ್‌ದ ಶ್ರೀ ಎಸ್. ಷಡಕ್ಷರಿಯವರನ್ನು, ಮುಂಬೈಯ ಉದ್ದಿಮೆದಾರ ಶ್ರೀ ಆರ್. ಬಿ. ಹೆಬ್ಬಳ್ಳಿಯವರನ್ನು ಸನ್ಮಾನಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾಗಿ ಸಮಾಜ ಸೇವೆ ಸಲ್ಲಿಸುತ್ತಿರುವ ವೀರಶೈವ ಸಹಕಾರಿ ಬ್ಯಾಂಕಿನ ಶ್ರೀ ಜಿ. ಶಿವಕುಮಾರ್, ಶ್ರೀ ಎಸ್. ಎನ್. ನೀಲಕಂಠ, ಶ್ರೀ ಆರ್. ಜಿ. ಶಿವಕುಮಾರ್, ಶ್ರೀ ಆರ್. ಹೆಚ್. ಚಂದನಗೌಡರು, ಶರಣ ವಿ. ಟಿ. ರಾಯರೆಡ್ಡಿ, ಶ್ರೀ ಹೆಚ್. ಎನ್. ಶರಣಪ್ಪ, ಶ್ರೀ ಎಸ್. ಸಿ. ಪುಟ್ಟಪ್ಪ, ರೇವಮ್ಮ, ಈಶ್ವರಪ್ಪ ಅವರನ್ನು ಗೌರವಿಸಲಾಯಿತು

ಸಭಾಧ್ಯಕ್ಷತೆಯನ್ನು ವಹಿಸಿದ್ದ ಮುಂಬಯಿಯ ಮೆ॥ ಶಾರದಾ-ಮಂಜುನಾಥ ಬಿಲ್ಡರ್ಸ್ ಸಂಸ್ಥೆಯ ಶ್ರೀ ಆರ್.ಬಿ. ಹೆಬ್ಬಳ್ಳಿಯವರು ಮಾತನಾಡುತ್ತಾ "ಕಲ್ಯಾಣ, ಡೊಂಬಿವೇಲಿ, ಅಂಬರನಾಥಗಳಲ್ಲಿ ಬಸವೇಶ್ವರ ಚೌಕ ಮಾಡಲು ನಗರ ಪಾಲಿಕೆಗಳು ಅನುಮತಿ ನೀಡಿದ್ದು, ಅಲ್ಲಿ ಚೌಕ ಮಾಡುವುದಷ್ಟೇ ಅಲ್ಲದೆ, ಬಸವೇಶ್ವರ ಪ್ರತಿಮೆ ಸಹ ಕೂರಿಸಲು ತಯಾರಿ ನಡೆಸಿದ್ದೇವೆ. ಈಗಾಗಲೇ ಮುಂಬಯಿ ಮಹಾನಗರದ

ಚೆಂಬೂರಿನಲ್ಲಿ ಬಸವೇಶ್ವರ ಚೌಕವಾಗಿದೆ. ಬಸವಣ್ಣನವರ 800 ನೆಯ ಲಿಂಗೈಕ್ಯ ದಿನಾಚರಣೆ ಮತ್ತು ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವ ನಿರ್ವಹಣೆಗಾಗಿ ಪೂಜ್ಯ ಮಾತಾಜಿಯವರು ನಮಗೆ ಆದೇಶ ಮತ್ತು ಸಮಯ ಸಹ ಕೊಟ್ಟರೆ ಮಹಾರಾಷ್ಟ್ರದಲ್ಲಿ ಬಸವ ತತ್ತ್ವ ಪ್ರಚಾರ ಮಾಡಲು ಅನುಕೂಲವಾಗುವುದು. ನಮ್ಮ ಕೈಲಾದ ಸೇವೆಗೆ ಸದಾ ಸಿದ್ಧರಿದ್ದೇವೆ" ಎಂದರು.

ಮಹಾಮಂಗಲದೊಡನೆ ಕಾರ್ಯಕ್ರಮ ಮುಕ್ತಾಯವಾಯಿತು. ಶರಣೆ. ಭಾರತಿ ಕೆಂಪಯ್ಯ ಪ್ರಾರ್ಥನೆ ಮಾಡಿದರು. ಲಿಂಗಾಯತ ಧರ್ಮ ಮಹಾಸಭಾದ ಅಧ್ಯಕ್ಷ ಶರಣ. ಎನ್. ಪುಟ್ಟರುದ್ರಪ್ಪ ಸ್ವಾಗತಿಸಿದರು. ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೋಕಿನ ಹಿರಿಯೂರು ಗ್ರಾಮದ "ಬಸವಾಂಕುರ" ಕಲಾ ಸಂಘದ (ರಾಷ್ಟ್ರೀಯ ಬಸವ ದಳದ ಮಕ್ಕಳ ವಿಭಾಗ) ಮಕ್ಕಳಿಂದ ವಿಶೇಷ ವಚನಗಾಯನ ನಡೆಯಿತು.

ಮೆರವಣಿಗೆ ಮತ್ತು ಪಥ ಸಂಚಲನ

ಕುವೆಂಪು ಕಲಾಕ್ಷೇತ್ರದಿಂದ ಸಹಸ್ರಾರು ಜನರು ಪಥ ಸಂಚಲನದಲ್ಲಿ ಭಾಗಿಗಳಾಗಿ ಶ್ರೀ ಗುರು ಬಸವಣ್ಣನವರ ಭಾವಚಿತ್ರವನ್ನು ಮೆರವಣಿಗೆಯಲ್ಲಿ ಕೊಂಡೊಯ್ದರು. ಹಾಡುತ್ತ, ಕುಣಿಯುತ್ತಾ, ಜಯಘೋಷ ಮಾಡುತ್ತಾ ಸಾಗಿದ ಮೆರವಣಿಗೆಯಲ್ಲಿ ಸ್ವಯಂ ಪ್ರೇರಣೆಯಿಂದ ಅಸಂಖ್ಯಾತ ಶರಣ – ಶರಣೆಯರು, ವಯಸ್ಕರು, ಮಕ್ಕಳು, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಭಾಗವಹಿಸಿದುದು ವಿಶೇಷ ದೃಶ್ಯವೆನಿಸಿತ್ತು. ಸುಮಾರು 4 ಕಿಲೋ ಮೀಟರ್ ದಾರಿಯನ್ನು ಕ್ರಮಿಸಿ ಮೆರವಣಿಗೆ ವಿಧಾನ ಸೌಧದ ಬಳಿ ಇರುವ ಬಸವೇಶ್ವರ ವೃತ್ತಕ್ಕೆ ಆಗಮಿಸಿತು. ಅಶ್ವಾರೂಢ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮತ್ತು ಪುಷ್ಪವೃಷ್ಟಿ ಮಾಡಲಾಯಿತು. ನೆನಹು–ಸಂಕ್ಷಿಪ್ತ ಪ್ರಾರ್ಥನೆಯನ್ನು ಅಲ್ಲೇ ನೆರವೇರಿಸಲಾಯಿತು.

ಸಂಕಲ್ಪ

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಪ್ರಾರ್ಥನಾ ಕಾರ್ಯಕ್ರಮ ನಡೆಸಿದರಲ್ಲದೆ, ಸಂಕಲ್ಪ ತೊಟ್ಟರು.

1. ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವದ ನಿಮಿತ್ತ ವಿಶ್ವಗುರು ಬಸವಣ್ಣನವರ ಜೀವನ–ಸಾಹಿತ್ಯ–ಸಂದೇಶ ಮತ್ತು ವಚನ ಸಾಹಿತ್ಯವು ಜಗತ್ತಿನ ತುಂಬಾ ಪ್ರಚಾರವಾಗುವಂತೆ ವಿಶೇಷ ಪ್ರಯತ್ನ ಮಾಡೋಣ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗ್ರಾಮಮಟ್ಟದವರೆಗೂ, ಹೊರರಾಜ್ಯಗಳಲ್ಲಿ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಭಾಷೆಗಳಿಗೆ ವಚನ ಸಾಹಿತ್ಯವನ್ನು ಭಾಷಾಂತರ ಮಾಡಿ ಪ್ರಚಾರ ಮಾಡುವ ಸಂಕಲ್ಪ ಕೈಗೊಳ್ಳೋಣ.

2. ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡುವ ಸಲುವಾಗಿ ಒಂದು ಹೋರಾಟ ಪ್ರಾರಂಭವಾಗಿದೆ. ಜನವರಿ 21 ರಂದು ಸರ್ಕಾರಕ್ಕೆ ಮನವಿ ಕೊಡುವುದರಿಂದ ಈ ಚಳುವಳಿ ಪ್ರಾರಂಭವಾಯಿತು. ಕೇಂದ್ರ ಸರ್ಕಾರ ರಚನೆಯಾಗುವ ಸಮಯದಲ್ಲಿ ಮೇ 27 ರಂದು ಇಂದಿನ ಪ್ರಧಾನಿ ಶ್ರೀ ಹೆಚ್. ಡಿ. ಗೌಡರು ಇನ್ನು 15 ದಿವಸಗಳಲ್ಲಿ ಇದನ್ನು ಪೂರ್ತಿ ಮಾಡಿ, ಬಸವೇಶ್ವರ ವಿಶ್ವವಿದ್ಯಾಲಯದ ನಾಮಕರಣ ಪ್ರಕ್ರಿಯೆ ಪೂರೈಸುತ್ತೇವೆ ಎಂದು ಮಾತುಕೊಟ್ಟರು. ಅವರು ನಮಗೆ ಕೊಟ್ಟ ವಾಗ್ದಾನದ ಕತ್ತಿ ಅವರ ಮೇಲೆ ತೂಗುತ್ತಿದೆ. ಅವರಿಗೆ ದೇವರು–ಧರ್ಮದಲ್ಲಿ ವಿಶ್ವಾಸ, ಪಾಪ–ಪುಣ್ಯಗಳಲ್ಲಿ ನಂಬಿಕೆ ಇದ್ದರೆ ನಮ್ಮಂತಹ ತ್ಯಾಗಿಗಳಿಗೆ ಕೊಟ್ಟ ಮಾತನ್ನು ಪೂರೈಸಬೇಕು. ವಿಧಾನ ಸಭಾ ಅಧಿವೇಶನ ಆಗುವವರೆಗೆ ಸಮಯಾವಕಾಶ ಕೊಡಿರಿ ಎಂದು ಮುಖ್ಯಮಂತ್ರಿ ಶ್ರೀ ಜೆ. ಹೆಚ್. ಪಟೇಲರು ಮನವಿ ಮಾಡಿಕೊಂಡುದಕ್ಕಾಗಿ ನಾವು ಹೋರಾಟವನ್ನು ತೀವ್ರಗೊಳಿಸದೆ ಕೊಟ್ಟ ಮಾತಿನಂತೆ ನಡೆಯುತ್ತಿದ್ದೇವೆ. ಆದ್ದರಿಂದ ಅಸೆಂಬ್ಲಿ ಮುಗಿಯುತ್ತಲೇ ಶ್ರೀ ಪಟೇಲರು ಈ ಕೆಲಸ ಪೂರ್ಣಗೊಳಿಸಬೇಕು. ಇಲ್ಲದಿದ್ದರೆ ನಾವು ಹೋರಾಟವನ್ನು ತೀವ್ರಗೊಳಿಸುವುದು ಅನಿವಾರ್ಯವಾಗುತ್ತದೆ. ಬಸವೇಶ್ವರರ ಹೆಸರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಘೋಷಿಸಲ್ಪಡುವವರೆಗೆ ನಮ್ಮ ಹೋರಾಟ ನಿಲ್ಲದು" ಎಂದು ಘೋಷಿಸಿದರು. ಮಂಗಲದ ನಂತರ ಶರಣರು ಚದುರಿದರು.

★★

ಬಸವ ಲಿಂಗೈಕ್ಯ ಅಷ್ಟಶತಮಾನೋತ್ಸವದ ವಿಶೇಷ ಕೊಡುಗೆ

ಬಸವ ವಚನ ದೀಪ್ತಿ

(ಧರ್ಮಪಿತ ಬಸವಣ್ಣನವರ ವಚನ ಸಂಗ್ರಹ)

ಧರ್ಮಪಿತ ಬಸವಣ್ಣನವರ 1413 ವಚನಗಳ ಸಂಗ್ರಹವನ್ನು ದಿ. 19–8–96 ರಂದು ಬಿಡುಗಡೆ ಮಾಡಲಾಗಿದೆ. ಅದರ ನಿಜವಾದ ಮುಖ ಬೆಲೆ 85 ರೂ. ದಾನಿಗಳಾದ **ಶರಣ. ಆರ್. ಎಂ. ಬಿ. ಆರಾಧ್ಯರು** ಮತ್ತು ಅವರ ಷಡ್ಡಕರಾದ **ಶರಣ. ವಿ. ಬಿ ರಾಜು,** ಮುಂಬಯಿ ಇವರು ಧನ ಸಹಾಯ ಮಾಡಿದ ಕಾರಣ ರಿಯಾಯಿತಿ ಬೆಲೆಯಲ್ಲಿ 45 ರೂ. ಗೆ ಮಾರಲಾಗುತ್ತಿದೆ. ಪುಸ್ತಕದ [ರಿಯಾಯಿತಿ] ಬೆಲೆ 45 ರೂ ಮತ್ತು ರಿಜಿಸ್ಟರ್ಡ್ ಬುಕ್–ಪೋಸ್ಟ್ ಬೆಲೆ 8 ರೂ ಸೇರಿಸಿ ಎಂ. ಓ. ಅಥವಾ ಬ್ಯಾಂಕ್ ಡ್ರಾಫ್ಟ್ ಮೂಲಕ 53 ರೂ, ಹಣ ಕಳಿಸಿದರೆ ಪುಸ್ತಕ ಕಳಿಸ–

ಲಾಗುವುದು. ಕೇವಲ ತಮ್ಮ ಅಧ್ಯಯನಕ್ಕೆ ಮತ್ತು ಬಂಧು-ಮಿತ್ರರಿಗೆ ಹಂಚಲು, ಬಯಸುವವರಿಗೆ ಮಾತ್ರ ಈ ಪ್ರತಿಗಳನ್ನು ಕೊಡಲಾಗುವುದು. ಪುಸ್ತಕ ಮಾರಾಟಗಾರರಿಗೆ ಈ ಪ್ರತಿ ಲಭ್ಯವಿರದೆ, ಮುಖ ಬೆಲೆ 85 ರೂ. ಇರುವ ಪುಸ್ತಕಗಳನ್ನು [25% ರಿಯಾಯಿತಿಯೊಡನೆ] ಅವರು ಕೊಳ್ಳಬೇಕಾಗುವುದು. ಅತ್ಯಂತ ಸುಂದರ-ವಾದ ಮುದ್ರಣ ಶುದ್ಧೀಕರಣಗೊಂಡ ವಚನಗಳ ಸಂಗ್ರಹವಿದರಲ್ಲಿ. ಸಂಪಾದಕಿ **[ಬಸವಾತ್ಮಜೆ] ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ** ಪ್ರೌಢ ಮುನ್ನುಡಿ, ಪ್ರಸ್ತಾವನೆ ಇದೆ. ಪ್ರತಿಯೊಂದು ಮನೆಯಲ್ಲಿ ಇರಬೇಕಾದ ಮಹತ್ವದ ಕೃತಿ.

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ,
2035, 20 ನೆಯ ಮೇನ್, 2 ನೇ ಬ್ಲಾಕು,
ರಾಜಾಜಿನಗರ, ಬೆಂಗಳೂರು-560010.

ಅಕ್ಟೋಬರ್ ಶಿಬಿರ ಇಲ್ಲ

ಶರಣ ಬಂಧುಗಳೇ,

ಪ್ರತಿ ವರ್ಷವೂ **ಬಸವ ತತ್ತ್ವ ತರಬೇತಿ ಕಮ್ಮಟ**ವಾಗಿ ಅಕ್ಟೋಬರ ತಿಂಗಳಲ್ಲಿ ಶಿಬಿರವನ್ನು ನಡೆಸಲಾಗುತ್ತಿತ್ತಷ್ಟೆ. ಈ ಬಾರಿ ಅದನ್ನು ನಡೆಸುತ್ತಿಲ್ಲ. ಜನವರಿ ತಿಂಗಳಲ್ಲಿ ಶರಣ ಮೇಳದ ವೇದಿಕೆಯ ಮೇಲೆ ಪ್ರತಿಜ್ಞಾ ಸ್ವೀಕಾರ ಮಾಡಿ ಶ್ರೀ ಬಸವೇಶ್ವರ ವಿದ್ಯಾಲಯವೆಂದು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಬೇಕೆಂದು ಸರ್ಕಾರವನ್ನು ಕೋರಲು ನಿಶ್ಚಯಿಸಲಾಯಿತು. ಜನವರಿ 21 ರಂದು ಮನವಿ ನೀಡಿ, ಫೆಬ್ರವರಿ 13 ರಿಂದ ಚಳುವಳಿ ಆರಂಭಿಸಲಾಯಿತು. ಅದು ವಿವಿಧ ಸ್ವರೂಪ ಪಡೆಯುತ್ತಾ ಹೋಯಿತು. ಶ್ರೀ ಹೆಚ್. ಡಿ. ದೇವೇಗೌಡರು ಅಂದಿನ ಮುಖ್ಯಮಂತ್ರಿಗಳು, ಇಂದಿನ ಪ್ರಧಾನಿಗಳು, ಮತ್ತು ಶ್ರೀ ಜೆ. ಹೆಚ್. ಪಟೇಲರು, ಇಂದಿನ ಮುಖ್ಯಮಂತ್ರಿಗಳು ಇನ್ನೂ ಯಾವುದೇ ನಿರ್ಧಾರ ತೆಗೆದು-ಕೊಂಡು ತಾವು ಕೊಟ್ಟ ಮಾತನ್ನು ಪಾಲಿಸಿಲ್ಲ. ದಿ. 27-5-1996 ರಂದು ಸ್ವತಃ ಮಾತನಾಡಿ, "ದೇವರಾಣೆಯಾಗಿ ನಮ್ಮ ಮಾತನ್ನು ನಂಬಿರಿ. 15 ದಿವಸದೊಳಗೆ ಬಸವೇಶ್ವರರ ಹೆಸರನ್ನು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಇಡಲಾಗುವುದು [ನಾನು ಮಾಡದಿದ್ದರೆ ನನ್ನನ್ನು ವಚನ ಭ್ರಷ್ಟ ಎಂದು ಕರೆಯಿರಿ]" ಎಂದು ಮಾತುಕೊಟ್ಟ ಶ್ರೀ ದೇವೇಗೌಡರು ತಮ್ಮ ಮಾತನ್ನು ಇನ್ನೂ ಪೂರೈಸಿಲ್ಲ. ಈ ಕಾರ್ಯ ಆಗುವ-ವರೆಗೂ ನಮ್ಮ ಹೋರಾಟ, ಪ್ರಯತ್ನ ಮುಂದುವರಿಯಬೇಕಾಗುವುದು. ಆದ್ದ-ರಿಂದ ಚಳುವಳಿ ಯಾವ ಸ್ವರೂಪ ಪಡೆಯುವುದೋ ಎಂಬ ಬಗ್ಗೆ ಈಗಲೇ ಹೇಳಲು

ಸಾಧ್ಯವಿಲ್ಲ. ವಿಧಾನ ಸಭಾ ಅಧಿವೇಶನ ಮುಗಿಯುತ್ತಲೇ ಈ ಕಾರ್ಯವನ್ನು ಕೈಗೆ ಎತ್ತಿಕೊಳ್ಳುತ್ತೇವೆ ಎಂದು ಅಲ್ಲಿಯವರೆಗೂ ಚಳುವಳಿಯನ್ನು ತೀವ್ರಗೊಳಿಸಬೇಡಿ ಎಂದು ಇಂದಿನ ಮುಖ್ಯಮಂತ್ರಿಗಳಾದ ಶ್ರೀ ಜೆ. ಹೆಚ್. ಪಟೇಲರು ಮಾಧ್ಯಮಗಳ ಮೂಲಕ ಮತ್ತು ಪ್ರತಿನಿಧಿಗಳ ಮೂಲಕ ಮನವಿ ಮಾಡಿಕೊಂಡದ್ದರಿಂದ ಅವರ ಮಾತಿಗೆ ಗೌರವ ನೀಡಿ ಚಳುವಳಿ ತೀವ್ರಗೊಳಿಸಿರಲಿಲ್ಲ. ಈಗ ವಿಧಾನ ಸಭಾ ಅಧಿವೇಶನ ಮುಗಿದಿದೆ. ಈಗ ಶ್ರೀ ಜೆ. ಹೆಚ್. ಪಟೇಲರ ಸರ್ಕಾರ ಏನು ಕ್ರಮ ಕೈಗೊಳ್ಳುವುದೋ ನೋಡಿ ಮುಂದಿನ ಹೋರಾಟ ಹಮ್ಮಿಕೊಳ್ಳಬೇಕಾಗಿದೆ. ಆದ್ದರಿಂದ ಅಕ್ಟೋಬರ್ ಶಿಬಿರವನ್ನು ಹಮ್ಮಿಕೊಳ್ಳಲಾಗುವುದಿಲ್ಲ.

ಶರಣ ಮೇಳ ಪ್ರಚಾರ ಸಾಮಗ್ರಿ

1997 ನೆಯ ಜನವರಿ 12, 13, 14, 15 ರಂದು ಎಂದಿನಂತೆ 10 ನೆಯ ಶರಣ ಮೇಳವು ನಡೆಯಲಿದ್ದು ಇದರ ಪ್ರಚಾರ ಸಾಮಗ್ರಿಗಳಾದ ಕರಪತ್ರ, ಭಿತ್ತಿ-ಪತ್ರ, ರಸೀತಿ ಪುಸ್ತಕ ಮುಂತಾದವು ಸಿದ್ಧವಾಗಿರುತ್ತವೆ. ಅಕ್ಟೋಬರ್ 2 ರೊಳಗೆ ಈ ಸಾಮಗ್ರಿ ಸಿದ್ಧವಾಗಿರುತ್ತದೆ. ಆದ್ದರಿಂದ ಶರಣ ಮೇಳದ ಪ್ರಚಾರ ಮತ್ತು ಅದರ ಯಶಸ್ವೀ ನಿರ್ವಹಣೆಗಾಗಿ ದೇಣಿಗೆ ಸಂಗ್ರಹ ಮಾಡಲು ಆಸಕ್ತಿಯುಳ್ಳವರು ಬೆಂಗಳೂರು ಬಸವ ಮಂಟಪ, ಧಾರವಾಡದ ಅಕ್ಕಮಹಾದೇವಿ ಮಠ, ಕೂಡಲ ಸಂಗಮದ ಬಸವ ಧರ್ಮ ಪೀಠದ ಕಾರ್ಯಾಲಯ, ರಾಷ್ಟ್ರೀಯ ಬಸವ ದಳಗಳು ಇಲ್ಲಿಂದ ಸಾಮಗ್ರಿ ಪಡೆಯಬಹುದು. ಕಾರ್ಯನಿಮಿತ್ತ ಬೆಂಗಳೂರಿಗೆ ವಿವಿಧ ಊರುಗಳಿಂದ ಬರುವ ಜನರ ಕೈಲಿ ರಾಷ್ಟ್ರೀಯ ಬಸವ ದಳದವರು ಪ್ರಚಾರ ಸಾಮಗ್ರಿ-ಗಳನ್ನು ತರಿಸಿಕೊಳ್ಳಬಹುದು.

—ಮಾತಾಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ಹತ್ತನೆಯ ಶರಣ ಮೇಳದ ಪ್ರಚಾರ ಪ್ರವಾಸ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ (ಲಿಂಗಾಯತ) ಧರ್ಮ ಸಂಸ್ಥಾಪನಾ ದಿನ (ಪ್ರತಿ ವರ್ಷದ ಜನವರಿ 14) ದ ಅಂಗವಾಗಿ ಬಸವ ಧರ್ಮೀಯರ ವಾರ್ಷಿಕ ಗಣ ಸಮಾವೇಶವಾದ ಹತ್ತನೆಯ ಶರಣ ಮೇಳವು 1997 ರ ಜನವರಿ 12 ರಿಂದ 15 ರ ವರೆಗೆ ನಡೆಯಲಿದೆಯಷ್ಟೆ. ಇದರ ಪ್ರಚಾರಾರ್ಥ ಅಂದರೆ ಇದರ ಮಹತ್ವವನ್ನು

ತಿಳಿಸಿಕೊಟ್ಟು ಹೆಚ್ಚು ಜನರನ್ನು ಆಕರ್ಷಿಸಲು, ಧರ್ಮ ತತ್ತ್ವಗಳನ್ನು ಬೋಧಿಸಲು, ದೀಕ್ಷಾ ಸಂಸ್ಕಾರ ಮುಂತಾದಿ ನೆರವೇರಿಸಲು, ಶರಣ ಮೇಳದ ವ್ಯವಸ್ಥೆ-ದಾಸೋಹ ನಿರ್ವಹಣೆಗೆ ದೇಣಿಗೆ ಸಂಗ್ರಹಿಸಲು ಬಸವ ಧರ್ಮ ಪೀಠ ಟ್ರಸ್ಟ್ ಮತ್ತು ಶರಣ ಮೇಳ ಉತ್ಸವ ಸಮಿತಿಯ ಕೋಶಾಧ್ಯಕ್ಷರೂ, ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಗುರುಪೀಠದ ದ್ವಿತೀಯ ಅಧಿಕಾರಿಣಿಯೂ ಆಗಿರುವ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ಪ್ರವಾಸವನ್ನು ಈ ರೀತಿ ಯೋಜಿಸಲು ಪ್ರಾಯೋಗಿಕ-ವಾಗಿ ರೂಪುರೇಷೆ ಹಾಕಲಾಗಿದೆ.

ಕ್ರ.ಸಂ.	ಊರುಗಳು	ದಿನಾಂಕಗಳು
1.	ಬೆಂಗಳೂರು [ಬಸವ ಮಂಟಪ]	ಭಾನುವಾರ 27-10-1996
2.	ವಿಜಯಪುರ ಮತ್ತು ಸುತ್ತಮುತ್ತ	ಸೋಮವಾರ 28-10-1996 ರಿಂದ 13 ದಿವಸಕಾಲ 9-11-1996 ರವರೆಗೆ
3.	ಬೆಂಗಳೂರು	10-11-1996
4.	ತುಮಕೂರು	11-11-1996, ಮತ್ತು 12-11-96
5.	ತಿಪಟೂರು	13-11-1996, ಮತ್ತು 14-11-96
6.	ಹಂದ್ರಾಳು	15-11-1996
7.	ಚಿಕ್ಕಮಂಗಳೂರು	16-11-1996
8.	ಭದ್ರಾವತಿ	17-11-1996, 18-11-1996
9.	ಶಿವಮೊಗ್ಗ ಮತ್ತು ಸನಿಹದ ಊರುಗಳು	19-11-1996 ರಿಂದ 22-11-96
10.	ಚಿತ್ರದುರ್ಗ	23-11-1996 ಮತ್ತು 24-11-96
11.	ಚಳ್ಳಕೆರೆ	25-11-1996 ಮತ್ತು 26-11-96
12.	ಹಿರಿಯೂರು	27-11-1996
13.	ಗನ್ನಾಯ್ಕನ ಹಳ್ಳಿ	28-11-1996
14.	ಪ್ರಯಾಣ ಧಾರವಾಡ ಹಾಲ್ಟ್	29-11-1996
15.	ಮುಗುಟಖಾನ ಹುಬ್ಬಳ್ಳಿ	30-11-1996
16.	ಬೆಳಗಾಂವ ಮತ್ತು ಸಮೀಪದ ಊರು	1-12-1996 ರಿಂದ 4-12-1996
17.	ಬೈಲಹೊಂಗಲ	5-12-1996 ಮತ್ತು 6-12-1996
18.	ಗೋಕಾಕ	7-12-1996 ಮತ್ತು 8-12-1996
19.	ನಿಪ್ಪಾಣಿ	9-12-1996
20.	ಸಂಕೇಶ್ವರ	10-12-1996
21.	ಗಡಹಿಂಗ್ಲಾಜ್ ಮತ್ತು ಸಮೀಪ	11-12-1996, 12-12-1996 13-12-1996
22.	ಈಚಲಕರಂಜಿ	14-12-1996
23.	ಶೆಡಶ್ಯಾಳ	15-12-1996 ಮತ್ತು 16-12-1996
24.	ರಾಜಾಪುರ	17-12-1996 ಮತ್ತು 18-12-1996
25.	ಹೇರವಾಡ	19-12-1996 ಮತ್ತು 20-12-96
26.	ಐನಾಪುರ	21-12-1996 ಮತ್ತು 22-12-96
27.	ಉಟಗಿ (ಸಾಂಗ್ಲಿ)	23-12-1996 ಮತ್ತು 24-12-96
28.	ಜಮಖಂಡಿ	25-12-1996 ಮತ್ತು 26-12-1996
29.	ತೇರದಾಳ	27-12-1996
30.	ಸೊಲ್ಲಾಪುರ	28-12-1996 ಮತ್ತು 29-12-1996
31.	ಮುಂಡುವಾಡಿ	30-12-1996
32.	ಉಮರ್ಗಾ	31-12-1996
33.	ಕುಸನೂರು	1-1-1997
34.	ಹೈದರಾಬಾದ	2-1-1997 ರಿಂದ 5-1-1997
35.	ಗುಲಬರ್ಗಾ	6-1-1997 ಮತ್ತು 7-1-1997
36.	ಕಗ್ಗೋಡು	8-1-1997
37.	ಬಿಜಾಪುರ	9-1-1997
	ಕೂಡಲಸಂಗಮಕ್ಕೆ ಪ್ರಯಾಣ	10-1-1997

ಈ ವಿವರ ಓದಿದ ನಂತರ ಕಾರ್ಯಕ್ರಮ ಹಾಕಿಕೊಳ್ಳಬಯಸುವ ಶರಣ ಬಂಧುಗಳು ಅವರಿಗೆ ಕೊಟ್ಟ ದಿನಾಂಕ ಹೊಂದುವುದೇ ಎಂಬುದನ್ನು ತಿಳಿಸಬೇಕು, ಆ ದಿನಾಂಕಗಳಂದು ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಲು ಆಗುವುದೇ ಎಂಬು-ದನ್ನು ಖಚಿತ ಪಡಿಸಬೇಕು. ಈ ಪಟ್ಟಿಯಲ್ಲಿ ಇಲ್ಲದೆ ಆ ಮಾರ್ಗದಲ್ಲಿ ಇರುವ ಬೇರೆ ಊರುಗಳವರು, ಇಂಥ ಊರಿಗೆ ಬರುತ್ತಾರೆ ನಮ್ಮ ಊರಿಗೂ ಒಂದು ದಿವಸ ಕೊಡಿರಿ ಎಂದು ಪತ್ರ ಬರೆದು ತಿಳಿಸಬೇಕು ಸಾಧ್ಯವಾದರೆ ಸಮಯವನ್ನು ಒದಗಿಸ-ಲಾಗುವುದು. ಒಂದು ವೇಳೆ ಕಾರಣಾಂತರದಿಂದ ತಮ್ಮಲ್ಲಿ ಕಾರ್ಯಕ್ರಮ ಏರ್ಪ-ಡಿಸಲು ಸಾಧ್ಯವಾಗದವರು ಮೊದಲೇ ಪತ್ರ ಬರೆದು ತಿಳಿಸಬೇಕು. ಶರಣ ಮೇಳ ಪ್ರಚಾರ ಪ್ರವಾಸದಲ್ಲಿ ಒಂದೊಂದು ದಿವಸವೂ ಅಮೂಲ್ಯವಾದ ಕಾರಣ ಸಮಯ-ವನ್ನು ವ್ಯರ್ಥ ಮಾಡಬಾರದಾಗಿ ಕೋರುತ್ತೇವೆ.

ಕಲ್ಯಾಣ ಕಿರಣ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ವಾಸ್ತವ್ಯ ಒಂದು ದಿವಸ, ಎರಡು ದಿವಸ ಮಾತ್ರ ಇರುವುದರಿಂದ ಮೊದಲೇ ಸ್ಥಳೀಯವಾಗಿ ಕರಪತ್ರ ಮುದ್ರಿಸಿ ಹೆಚ್ಚಿನ ಪ್ರಚಾರ ಮಾಡಿರಬೇಕು. ಎರಡು ದಿವಸ ವಾಸ್ತವ್ಯ ಇದ್ದಲ್ಲಿ ಪೂಜ್ಯರು ಬಂದ ಮರುದಿವಸ ದೀಕ್ಷಾ ಕಾರ್ಯಕ್ರಮ ಏರ್ಪಡಿಸಬಹುದು.

ರಾಷ್ಟ್ರೀಯ ಬಸವ ದಳಗಳ ಸಂಘಟನೆ, ಪುನಶ್ಚೇತನಕ್ಕೆ ಈ ಕಾರ್ಯಕ್ರಮವನ್ನು ಸದುಪಯೋಗ ಮಾಡಿಕೊಳ್ಳಬೇಕು. ಈ ಪ್ರಕಟಣೆಗೆ ಉತ್ತರವನ್ನು ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳುಹಿಸಿರಿ; ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಒಂದು ಮಹಾನ್ ಪ್ರೇರಕ ಶಕ್ತಿಯಾಗಿದ್ದರು ಅವರ ಉಪಸ್ಥಿತಿಯಿಲ್ಲದೆ ಒಂಭತ್ತನೆಯ ಶರಣ ಮೇಳವನ್ನು ನಾವು ಮಾಡಬೇಕಾಗಿ ಬಂದಾಗ ತಾವೆಲ್ಲರೂ ಇಮ್ಮಡಿಸಿದ ಉತ್ಸಾಹದಿಂದ ದುಡಿದು ಯಶಸ್ವಿಗೊಳಿಸಿದ್ದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ.

ಅದರಂತೆಯೇ ಹತ್ತನೆಯ ಶರಣ ಮೇಳವು ಅತ್ಯಂತ ಯಶಸ್ವಿಯಾಗಲು ನಿಮ್ಮೆಲ್ಲರ ಸಹಾಯ ಸಹಕಾರ ಬಹು ಅಗತ್ಯವೆಂದು ಬೇರೆ ಹೇಳಬೇಕಾಗಿಲ್ಲ. ವರ್ಷದಿಂದ ವರ್ಷಕ್ಕೆ ಹೆಚ್ಚಾಗಿ ಆಗಮಿಸುತ್ತಿರುವ ಶರಣ ಬಂಧುಗಳ ಸಂಖ್ಯೆ, ಏರುತ್ತಿರುವ ಖರ್ಚು ವೆಚ್ಚಗಳನ್ನು ಗಮನದಲ್ಲಿರಿಸಿಕೊಂಡು ತಾವೆ ಶರಣ ಮೇಳ ನಿರ್ವಹಣೆಗೆ ದೇಣಿಗೆಯನ್ನು ಸಂಗ್ರಹಿಸುವಿರಾಗಿ ನಂಬುತ್ತೇವೆ.

ಶುಭಹಾರೈಕೆಗಳೊಡನೆ

ವಿಜಯಾನಂದ
ಕಾರ್ಯದರ್ಶಿ

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ

ಶರಣ ಮೇಳ ಉತ್ಸವ ಸಮಿತಿ, 2035, 20 ನೆಯ ಮುಖ್ಯರಸ್ತೆ
ಎರಡನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು–560010

ಕಾಗೆಯೊಂದಗುಳ ಕಂಡರೆ ಕೂಗಿ ಕರೆಯದೆ
ತನ್ನ ಬಳಗವೆಲ್ಲವ ?
ಕೋಳಿ ಒಂದು ಕುಟುಕ ಕಂಡರೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಗಿಂತ ಕರಕಷ್ಟ, ಕೂಡಲ ಸಂಗಮ ದೇವಾ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ. ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು–ಮೈಸೂರು ಹೆದ್ದಾರಿಗೆ ಹೊಂದಿಕೊಂಡತೆ. ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12 ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" ಯೋಜನೆ ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು. ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'–೪೦' × ೬೦'–ವಿಸ್ತೀರ್ಣ ೨೪೦೦ ಚ. ಅಡಿಗಳು
ವರ್ಗ 'ಬಿ'–೩೦' × ೪೦'–ವಿಸ್ತೀರ್ಣ ೧೨೦೦ ಚ. ಅಡಿಗಳು
ಕೆಲವೇ ಕೆಲವು ೪೦' × ೪೦' ಅಳತೆಯ ನಿವೇಶನಗಳೂ ಇವೆ.

ನಿವೇಶನಗಳಲ್ಲಿ ಬೆಳೆದ ತೆಂಗಿನಮರಗಳು ಬರುವಂತೆ ಯೋಜಿಸಲಾಗುವುದರಿಂದ ಅಳತೆಯು ಹೆಚ್ಚಿಗೆಯೂ ಆಗಬಹುದು.

ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ಅಭಿವೃದ್ಧಿ ಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.

3. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ೧೦೦೦–೦೦ (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

4. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦–೦೦ [ಒಂದು ನೂರು] ರೂ.ಗಳನ್ನು ಎಂ. ಓ. ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :– ದೂರವಾಣಿ : 3325335

ಶರಣ. ಡಿ. ಎಸ್. ವಿಜಯಾನಂದ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, 2035,
ಕಾರ್ಡ್‌ರಸ್ತೆ, 20 ನೆಯ ಮುಖ್ಯರಸ್ತೆ, 2 ನೆಯ ಬ್ಲಾಕ್,
ರಾಜಾನಗರ, ಬೆಂಗಳೂರು–560010

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ. ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ ಬಿ, ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡಾಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿ ಬಹಳ ಹತ್ತಿರ, ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ದಾಸೋಹ ನಿಧಿಗೆ 1111-00 ರೂ. ಸಲ್ಲಿಸಿದ ದಾಸೋಹಿಗಳ ಯಾದಿ

[ಸೆಪ್ಟಂಬರ್ 1995 ರಿಂದ ಮುಂದುವರಿದ ಭಾಗ]

ಕ್ರ. ಸಂಖ್ಯೆ	ಹೆಸರು ಮತ್ತು ಊರು	ದಾಸೋಹದ ದಿನ
	ಶರಣರುಗಳಾದ :	
1861	ಎಲ್. ನಾಗೇಂದ್ರಪ್ಪ, ಕ್ಲಾಸಹಳ್ಳಿ	ಏಪ್ರಿಲ್–5
1862	ಬಿ. ಎ. ಪ್ರತಿಭಾ, ಜಗಳೂರು	ಮೇ–19
1863	ಶಿವರುದ್ರಮ್ಮ, ಜಗಳೂರು	ಏಪ್ರಿಲ್–5
1864	ಶರಣಮ್ಮ ಉಮಾಪತಿಯಪ್ಪ ಮತ್ತು ಮಕ್ಕಳು, ಜಗಳೂರು.	(ಮಹಾಲಯ ಅಮಾವಾಸ್ಯೆ)
1865	ಶಾಂತಾ ಬಿ. ಕಲ್ಲಯ್ಯಮಠ, ಗೋಕಾಕ	ಮೇ–22
1866	ಗಣಪತಿ ಮುತ್ತಪ್ಪ ನಿಲಜಗಿ, ನಂದಗಾಂವ	ಬಸವ ಜಯಂತಿ
1867	ಎಸ್. ಎಲ್. ಮಠ, ಬಿಜಾಪುರ	ಬಸವ ಜಯಂತಿ
1868	ಕೆ. ಸುಬ್ಬಮ್ಮ ಕೆ. ಹನುಮಂತಪ್ಪ, ಬಳ್ಳಾರಿ	ಬಸವ ಜಯಂತಿ
1869	ಸದಾಶಿವ ಸ್ವಾಮಿಗಳು ಮತ್ತು ಭಕ್ತವೃಂದ, ನೆಲಮಂಗಲ	ಸೆಪ್ಟಂಬರ್–1
1870	ಡಿ. ಆರ್. ಲಕ್ಷ್ಮೀಲತಮ್ಮ, ಶಿವಮೊಗ್ಗ	ಸೆಪ್ಟಂಬರ್–2
1871	ಸರೋಜಮ್ಮ ರಾಮಸಿಂಗಪ್ಪ, ಮೈಸೂರು	ಸೆಪ್ಟಂಬರ್–3
1872	ಮಹಾದೇವಪ್ಪ ನಿಂಗಪ್ಪ ಮುಂದೇವಾಡಗಿ, ಸಿಂಧಗಿ	ಸೆಪ್ಟಂಬರ್–4
1873	ಈರವ್ವ ವಿರುಪಾಕ್ಷಪ್ಪ ತಾರಾಪುರ, ಸಿಂಧಗಿ	ಸೆಪ್ಟಂಬರ್–5
1874	ಬಿ. ಎಸ್. ಓಂಕಾರಸ್ವಾಮಿ ವನಜಾಕ್ಷಮ್ಮ, ಬೆಂಗಳೂರು	ಡಿಶೆಂಬರ್–16
1875	ವಿಮಲಮ್ಮ W/o ಹೆಚ್. ಬಿ. ಮರಿಯಪ್ಪ, ಹುಲ್ಲಹಳ್ಳಿ	ಸೆಪ್ಟಂಬರ್–6
1876	ರೇಖಾ W/o ಎಚ್. ಎಸ್. ವಸಂತಕುಮಾರ್, ಹುಲ್ಲಹಳ್ಳಿ	ಫೆಬ್ರವರಿ–2
1877	ಹೆಚ್. ಎನ್. ಮಲ್ಲೇಶಪ್ಪ ಬಿನ್. ನಾಗಪ್ಪ, ಹುಲ್ಲಹಳ್ಳಿ	ಏಪ್ರಿಲ್–2
1878	ಹೆಚ್. ಎನ್. ಬಸವರಾಜು [ಮಂಗಳಾ] ಹುಲ್ಲಹಳ್ಳಿ	ಮಾರ್ಚ–4
1879	ಕೆ. ಶಿವಪ್ರಸಾದ್, ಬಿನ್. ಡಿ. ಕೆ. ಕಲಿವೀರಪ್ಪ, ಮೈಸೂರು	ಫೆಬ್ರವರಿ–29
1880	ರಾಜಮ್ಮ D/o ಸುಬ್ಬರಾಯಪ್ಪ, ಹುಲ್ಲಹಳ್ಳಿ	ಬಸವ ಜಯಂತಿ
1881	ಲಲಿತಮ್ಮ D/o ಎ. ಎಸ್. ಪುಟ್ಟಣ್ಣಯ್ಯ, ಹುಲ್ಲಹಳ್ಳಿ	ಬಸವ ಜಯಂತಿ
1882	ಸರೋಜಮ್ಮ D/o ಹೆಚ್. ಪಿ. ಸುಬ್ಬಣ್ಣ, ಹುಲ್ಲಹಳ್ಳಿ	ಬಸವ ಜಯಂತಿ

1883	ವೀರಜಾಂಬ W/o ಹೆಚ್. ಎನ್. ಪುಟ್ಟಸುಬ್ಬಣ್ಣ, ಹುಲ್ಲಹಳ್ಳಿ	ಶಿವರಾತ್ರಿ
1884	ಹೆಚ್. ಎನ್. ಲಿಂಗಪ್ಪ ವಿಶಾಲಾಕ್ಷಮ್ಮ, ಹುಲ್ಲಹಳ್ಳಿ	ಬಸವ ಜಯಂತಿ
1885	ವೀರಶೈವ ಸಜ್ಜನ ಸಂಘ, ಹುಲ್ಲಹಳ್ಳಿ	ಜುಲೈ-19
1886	ಬಾಡದ ರುದ್ರಮ್ಮ W/o ಬಾಡದ ವೀರಣ್ಣ, ಬಳ್ಳಾರಿ	ಸೆಪ್ಟಂಬರ್-7
1887	ಪಿ. ಏಕಾಂಬರಗೌಡ	ಸೆಪ್ಟಂಬರ್-8
1388	ಸೋಮಲಿಂಗಪ್ಪ, ಬಳ್ಳಾರಿ	ಸೆಪ್ಟಂಬರ್-9
1889	ಅಲಗಶೆಟ್ಟಿ ಶ್ಯಾಮ್, ,,	ಆಗಸ್ಟ್-20
1890	ಬಿ. ವೀರನಗೌಡ, ಬಳ್ಳಾರಿ	ಸೆಪ್ಟಂಬರ್-10
1891	ಪಾಲಾಕ್ಷರೆಡ್ಡಿ ಹೆಚ್. ಬಳ್ಳಾರಿ	ಡಿಶೆಂಬರ್-20
1892	ಪಂಚಪ್ಪ ಮತ್ತು ಕರಿಬಸಪ್ಪ, ಬಳ್ಳಾರಿ	ಫೆಬ್ರುವರಿ-24
1893	ಕೆ. ರಾಜೇಂದ್ರಪ್ರಸಾದ್, ಬಳ್ಳಾರಿ	ಸೆಪ್ಟಂಬರ್-11
1894	ಕೆ. ವೀರಭದ್ರಪ್ಪ, ಬಳ್ಳಾರಿ	ಸೆಪ್ಟಂಬರ್-12
1895	ಎನ್. ಬಸಪ್ಪ ,,	ಶ್ರಾವಣ ಗುರುವಾರ
1896	ಎ. ಶರಣಪ್ಪ ,,	ಸೆಪ್ಟಂಬರ್-13
1897	ನಿಷ್ಠಿ, ಬಸವರಾಜಪ್ಪ ಮತ್ತು ಪ್ರಭಾವತಿ, ಬಳ್ಳಾರಿ	,, -14
1898	ಸಿ. ಭೀಮಲಿಂಗನಗೌಡ, ಬಳ್ಳಾರಿ	,, -15
1899	ಎಮ್. ಎಸ್. ಎಸ್. ಪಾಟೀಲ ಮತ್ತು ಶ್ರೀಮತಿ ರಾಜೇಶ್ವರಿ, ಬಳ್ಳಾರಿ	,, -16
1900	ಜಿ. ತಿಪ್ಪೇರುದ್ರರೆಡ್ಡಿ, ,,	,, -17
1901	ಜಿ. ಕೃಷ್ಣರೆಡ್ಡಿ (ಯರಗುಡಿ), ಬಳ್ಳಾರಿ.	ಸೆಪ್ಟಂಬರ್-18
1902	ಬಿ. ಎಮ್. ಜಿತೇಂದ್ರನಾಥ್, ಬಳ್ಳಾರಿ.	ಏಪ್ರಿಲ್-20
1903	ಬಿ. ವಿರುಪಾಕ್ಷಗೌಡರು ಹಗರಿ, ಬಳ್ಳಾರಿ	ಏಪ್ರಿಲ್-13
1904	ಅವಂಟಿ ಹನುಮಂತರೆಡ್ಡಿ, ಮುದ್ದಹಟ್ಟಿ	ಜುಲೈ-1
1905	ಡಾ॥ ಪಂಪನಗೌಡ, ಬಳ್ಳಾರಿ.	ಸೆಪ್ಟಂಬರ್-19
1906	ಪಿ. ಶರಣಪ್ಪ, ಮಹದೇವ ಪುರ	ಸೆಪ್ಟಂಬರ್-20
1907	ಕೇಣ ವಿರೂಪಣ್ಣ, ಚುಳ್ಳಗುಂರಕಿ ಗ್ರಾಮ	ಸೆಪ್ಟಂಬರ್-21
1908	T. M. ಸುಂದರಂ S/o ಡಿ. ಎಸ್. ನಂಜುಂಡಪ್ಪ, ತಾಯೂರು	ಅಕ್ಟೋಬರ್-4
1909	ಎಚ್. ವಿ. ನಂಜುಂಡಸ್ವಾಮಿ, ಟಿ. ನರಸೀಪುರ	ಏಪ್ರಿಲ್-15

1910	ಶೈಲಾ, ಆರ್. ಕುಮಾರಸ್ವಾಮಿಯವರು, ಟಿ. ನರಸೀಪುರ	ಬಸವಜಯಂತಿ
1911	ಕುಮಾರಿ. ವಿಜಯಾ D/o ಎಸ್. ಮಹಾದೇವಪ್ಪ, ಟಿ. ನರಸೀಪುರ	ಮಾಘಹುಣ್ಣಿಮೆ
1912	ಜಿ. ಲಿಂಗಯ್ಯ. ಬಿನ್. ಗುರುಬಸಪ್ಪ, ಟಿ. ನರಸೀಪುರ	ಜನವರಿ-12
1913	ಸಿದ್ದಮಲ್ಲಪ್ಪಾ, ಟಿ. ನರಸೀಪುರ	ಅಕ್ಟೋಬರ್-2
1914	ವಿಶ್ವೇಶ್ವರ ಮೂರ್ತಿ, ಟಿ. ನರಸೀಪುರ	ಅಕ್ಟೋಬರ್-23
1915	ಮಹಾದೇವ ಟಿ. ನರಸೀಪುರ	ಬಸವ ಜಯಂತಿ
1916	ಎಮ್. ಪಿ. ಸುಬ್ರಮ್ಮಣ್ಯಂ, ಟಿ. ನರಸೀಪುರ	ಆಗಸ್ಟ್-12
1917	ಶಿವಮ್ಮ W/o ಸಿ. ಎಂ. ಮುರುಡಪ್ಪ, ಚನ್ನಪಟ್ಟಣ	ಸೆಪ್ಟಂಬರ್-22
1918	ಡಿ. ಮಾದಯ್ಯ, ರಾಮನಗರ	ಸೆಪ್ಟಂಬರ್-23
1919	ಸಿ. ಬಿ. ಚನ್ನಬಸಪ್ಪ ಮತ್ತು ಮಕ್ಕಳು, ಚನ್ನಪಟ್ಟಣ	ಸೆಪ್ಟಂಬರ್-24
1920	ಅರುಣಕುಮಾರ್ ಶೆಟ್ಟರ್, ಮೈಸೂರು	ಸೆಪ್ಟಂಬರ್-25
1921	ಹೆಚ್. ಎಸ್. ವಿಜಯಕುಮಾರ್, ವಿಜಯನಗರ	ಸೆಪ್ಟಂಬರ್-26
1922	ಸಿ. ಜಿ. ಜಗದೀಶ, ಚನ್ನಪಟ್ಟಣ	ಸೆಪ್ಟಂಬರ್-27
1923	ಬಸಪ್ಪ ಮತ್ತು ಮಕ್ಕಳು, ಚೆನ್ನಪಟ್ಟಣ	ಸೆಪ್ಟಂಬರ್-28
1924	ಸಿ. ಜಿ. ಬಸವರಾಜ ಚನ್ನಪಟ್ಟಣ	ಸೆಪ್ಟಂಬರ್-29
1925	ಡಾ॥ ಕೊಟ್ರಪ್ಪ ವೀರಪ್ಪ ಚಂದೂರ, ಚನ್ನಪಟ್ಟಣ	ಸೆಪ್ಟಂಬರ್-30
1926	ಸಿ. ಆರ್. ರಘುನಾಥ್, ಚನ್ನಪಟ್ಟಣ	ಅಕ್ಟೋಬರ್-1
1927	ಗಿರಿಜಾ ಪರಮೇಶ, ಚನ್ನಪಟ್ಟಣ	ಅಕ್ಟೋಬರ್-2
1928	ರಾಜಮ್ಮ ಮತ್ತು ಮಕ್ಕಳು, ಚನ್ನಪಟ್ಟಣ	ಅಕ್ಟೋಬರ್-3
1929	ಚಿಕ್ಕಮಣ್ಣಮ್ಮ, ಚನ್ನಪಟ್ಟಣ	ಅಕ್ಟೋಬರ್-4
1930	ಕೆ. ವಿಜಯೇಂದ್ರ, ಚನ್ನಪಟ್ಟಣ	ಅಕ್ಟೋಬರ್-5
1931	ಬಿ. ಎನ್. ಜಯದೇವ, ಚನ್ನಪಟ್ಟಣ	ಅಕ್ಟೋಬರ್-6
1932	ಎಮ್. ರಾಜೇಂದ್ರ, ಚನ್ನಪಟ್ಟಣ	ಅಕ್ಟೋಬರ್-7
1933	ಕವಿತಾ ಬಸವರಾಜ ಮುದಿಗೊಂಡ, ಹಾವೇರಿ	ಮೇ-3
1934	ಮಹೇಶ ಬಸಯ್ಯ ಹಿರೇಮಠ, ಬಾಗಲಕೋಟೆ	ಅಕ್ಟೋಬರ್-8
1935	ಸೋಮಶೇಖರಪ್ಪ ಕುಲಕರ್ಣಿ, ಗದಗ	ಅಕ್ಟೋಬರ್-9
1936	ಜಿ. ಗುರು ಶಂಭುಲಿಗಪ್ಪಾ, ಹಿರಿಯೂರು	ಅಕ್ಟೋಬರ್-10
1937	ಹೆಚ್. ತಿಪ್ಪೇಸ್ವಾಮಿ, ದೊಡ್ಡ ಸಿದ್ದವ್ವನ ಹಳ್ಳಿ	ಶರಣ ಮೇಳ
1938	ಪಿ. ವಿ. ಕೃಷ್ಣಯ್ಯ ಶೆಟ್ಟಿ, ಹಿರಿಯೂರು	ಜೂನ್-30

1939	ಶೈಲ ಮಹಾಲಿಂಗಪ್ಪ ಟೀರಕಿ, ಮಹಾಲಾಪುರ	ಬಸವ ಜಯಂತಿ
1940	ಬಿ. ಎಸ್. ಲಕ್ಷ್ಮೀಕಾಂತ್, ಬೆಳಧರ	ಜೂನ್–30
1941	ಎ. ಡಿ. ತಿಮ್ಮರಾಯಪ್ಪ, ಕೊರಟಗೆರೆ	ಬಸವ ಜಯಂತಿ
1942	ಸುನಿತಾ W/o ಆರ್. ಜಗದೀಶ, ಶೀತಾ	ಅಕ್ಟೋಬರ್–7
1943	ದೇವಿ ಅಪೂರ್ವ D/o R. ಜಗದೀಶ, ಶೀತಾ	ಫೆಬ್ರವರಿ–5
1944	Y. S. ಸದಾಶಿವಯ್ಯ, ಕೊರಟಗೆರೆ	ಶ್ರಾವಣ ಶನಿವಾರ
1945	ಡಾ॥ ವಿ. ವಿ. ಬಾಗಲಕೋಟ, ಗೋಕಾಕ	ಅಕ್ಟೋಬರ್–1
1946	ವೀರಣ್ಣ ಮಟಮಾರಿ, ಕೂಡಲ ಸಂಗಮ	ಜೂನ್–30
1947	A. ತಾರಕನಾಥ, ಹಿರಿಯೂರು	ಜೂನ್–30
1948	ಬಸಪ್ಪ ಮಲ್ಲಪ್ಪ ಗಾಣಗೇರ, ಗೋಕಾಕ	ಜನವರಿ–3
1949	ಸಿ. ಟಿ. ಗುಲ್ಲಿ, ಗೋಕಾಕ	,, –4
1950	ನಿಂಗಪ್ಪ ಬಸಪ್ಪ ಅಂಗಡಿ, ತುರಮರಿ	,, –6
1951	ಡಿ. ಗಿರಿಯಣ್ಣನವರು	,, –14
1952	ಪಿ. ಕೆ. ಅವಡಿ, ಅಥಣಿ	,, –14
1953	ಹಳ್ಳಳ್ಳಿ ವೀರಪ್ಪನವರು	,, –14
1954	ಎನ್. ಸಿ. ಸದಾಶಿವಯ್ಯ	,, –14
1955	ಕೆ. ಜಿ. ಸರ್ವಮಂಗಳಾ ಮರೇಗೌಡರು, ಬಳ್ಳಾರಿ	ಫೆಬ್ರವರಿ–15
1956	ಡಾ॥ ಎಚ್. ಬಸವನಗೌಡ, ಬಳ್ಳಾರಿ	ಜನವರಿ–8
1957	ಟಿ. ಹೆಚ್. ಎಮ್. ಮೃತ್ಯುಂಜಯ್ಯ, ಬಳ್ಳಾರಿ	,, –9
1958	ಬಸವಣ್ಣೆಪ್ಪ ಗಡಂದ, ಬಳ್ಳಾರಿ	,, –10
1959	ಕೆ. ಎಸ್. ಎಮ್. ಚಂದ್ರಮೌಳಿ, ಬಳ್ಳಾರಿ	,, –11
1960	ಗವಿಸಿದ್ದಪ್ಪ ಹರಿಜನ್, ಕಕ್ಕಬೇವಿನಹಳ್ಳಿ	,, –12
1961	ಕೆ. ರಾಜಶೇಖರ, ಬಳ್ಳಾರಿ	,, –19
1962	ಪಿ. ಎನ್. ಗಂಗಮ್ಮ, ಬಳ್ಳಾರಿ	,, –23
1963	ಆರ್. ಕುಮಾರಗೌಡ, ಕೆರೂರು	ಭಾದ್ರಪದ ಸೋಮವಾರ
1964	ಎಸ್. ಕೆ. ಸೌಜನ್ಯಕುಮಾರ, ಬಳ್ಳಾರಿ	ಜನವರಿ–21
1965	ಸಂಗನಕಲ್ ಕೋಟಿ ಮಲ್ಲಿಕಾರ್ಜುನಗೌಡರು, ಬಳ್ಳಾರಿ	,, –22
1966	ಎಮ್. ಲಿಂಗರೆಡ್ಡಿ, ಬಳ್ಳಾರಿ	,, –22
1967	ಎಸ್. ಡಿ. ವೀರಮ್ಮ W/o ಎಸ್. ಡಿ. ಸಿದ್ದಬಸಪ್ಪ, ಬಳ್ಳಾರಿ	,, –23
1968	ಪಿ. ತಿಪ್ಪೇಸ್ವಾಮಿ, ಬಳ್ಳಾರಿ	,, –24

1969	I. B. ಸಾರವಾಡ್, ಶ್ರೀಧರಗಡ್ಡೆ	ಜನವರಿ–24
1970	ಲಕ್ಷ್ಮಣ ವೀರಪ್ಪ ಗಡಾದ, ಬಳ್ಳಾರಿ	,, –25
1971	ಗಂಗಮ್ಮ ಅಂಗಡಿ, ಯರಂಗಳಗಿ	,, –26
1972	ಜಿ. ರಾಜಶೇಖರಯ್ಯ, ಬಳ್ಳಾರಿ	,, –26
1973	ವಿ. ರುದ್ರಗೌಡ, ಬಳ್ಳಾರಿ	,, –26
1974	ಎಸ್. ಜಿ. ಮಹೇಶ್ವರಪ್ಪ, ಎಸ್. ಜಿ. ಹಳ್ಳಿ	,, –27
1975	ಎನ್. ರತ್ನಯ್ಯ ಬಳ್ಳಾರಿ	,, –27
1976	ಅಲ್ಲಂ ವೀರಭದ್ರಪ್ಪ, ಬಳ್ಳಾರಿ	,, –27
1977	ಮಹಾದೇವ ಸ್ವಾಮಿ ಟ್ರೇಡಿಂಗ್ ಕಂಪನಿ, ಬಳ್ಳಾರಿ	,, –28
1978	ಹಾವಿನಹಾಳು ಶರಣಬಸಪ್ಪ ಮತ್ತು ಸೂಗಪ್ಪ ,,	,, –28
1979	ಗುರುಬಸಪ್ಪ ಚೌದರಿ ಮುಲ್ಲಂಗಿ, ಬಳ್ಳಾರಿ	,, –28
1980	ನೀಲಮ್ಮ ವದಗ W/o ವೀರಪ್ಪ ವದಗ, ಬಳ್ಳಾರಿ	,, –28
1981	ಎ. ಸುದರ್ಶನ ಗೌಡ, ವೈರಾಪುರ	,, –29
1982	ಮಂಜುನಾಥ, ಬಳ್ಳಾರಿ	,, –29
1983	C. P. ಸಿದ್ದಲಿಂಗನಗೌಡ, ಬಳ್ಳಾರಿ	,, –29
1984	S. ನೀಲಕಂಠಪ್ಪ ,,	,, –31
1985	ಎಸ್. ನಾರಾಯಣಪ್ಪ ,,	,, –31
1986	ಟಿ. ಮರಿಬಸಪ್ಪ ಮತ್ತು ಡಾ॥ ಸೋಮಶೇಖರ ಬಳ್ಳಾರಿ	ಫೆಬ್ರವರಿ–3
1987	ಲಿಂಗಮ್ಮ ಸುರಶೆಟ್ಟಿ, ಬಳ್ಳಾರಿ	,, –4
1988	ಬಿ. ಚನ್ನಬಸಪ್ಪ ,,	,, –6
1989	ಶಿವರಾಮರೆಡ್ಡಿ ,,	,, –6
1990	ಕೆ. ಪಿ. ದೊಡ್ಡಬಸಪ್ಪ S/o ಕೆರನಹಳ್ಳಿ ಪರ್ವತರೆಡ್ಡಿ,	,, –7
	ಬಳ್ಳಾರಿ	ಫೆಬ್ರುವರಿ–7
1991	ದೊಡ್ಡನಗೌಡರು ಮತ್ತು ಮಕ್ಕಳು, ಬಳ್ಳಾರಿ	,, –8
1992	ಕೆ. ಚನ್ನಪ್ಪ, ಬಳ್ಳಾರಿ	,, –11
1993	ಕೆ. ಹನುಮಂತಪ್ಪ, ಬಳ್ಳಾರಿ	,, –11
1994	ಬಿ. ಕೆ. ತಿಪ್ಪನಗೌಡ, ಬ್ಯಾಲಚಿಂತೆ ಗ್ರಾಮ	,, –12
1995	ದೊಡ್ಡಬಸವರಾಜ ರೆಡ್ಡಿ, ಬಳ್ಳಾರಿ	,, –13
1996	ವಿ. ಕೆ. ದೊಡ್ಡಮಲ್ಲಪ್ಪ, ,,	,, –13
1997	ಬಸಮ್ಮ ವೀರಪ್ಪ ಕಾಳಪ್ಪನವರ, ಬಳ್ಳಾರಿ	,, –13

1998	ಐ. ಚೆನ್ನಬಸಪ್ಪ ಸಂಗನಕಲ್, ಬಳ್ಳಾರಿ	ಫೆಬ್ರುವರಿ-15
1999	ಎಚ್. ಎಚ್. ಪಾಟೀಲ, ಬೆಂಗಳೂರು	ಸೆಪ್ಟೆಂಬರ್-1
2000	ಎಸ್. ಕೆ. ಶಿವಮ್ಮ W/o ಕಲ್ಲೂರು ಸಣ್ಣಯರ್ರಪ್ಪ, ಬಳ್ಳಾರಿ	ಫೆಬ್ರುವರಿ-16
2001	ಮಹಾದೇವ ಗುರುಪಾದ ಜಂಬಗಿ, ಕೃಷ್ಣಾಕಿತ್ತೂರು	ಶ್ರಾವಣ ಸೋಮವಾರ
2002	ಅಣ್ಣಪ್ಪ ಮಲ್ಲಪ್ಪ ಶಿರಗಾಂವ, ಐನಾಪುರ	,,
2003	ಡಾ॥ ಬಾಪು ಅಡಿವೆಪ್ಪ ಹಾದಿಗೊಂದ, ಐನಾಪುರ	ಬಸವ ಪಂಚಮಿ
2004	ಭೀಮಪ್ಪ ರುದ್ರಪ್ಪ ಕುಡಚಿ ಐನಾಪುರ	ಶ್ರಾವಣ ಸೋಮವಾರ
2005	ಶ್ರೀಮತಿ ತಮ್ಮಣ್ಣ ಕುಡಚಿ ,,	,,
2006	ಅಲ್ಲವ್ವಾ D/o ಶಂಕರ ಕಾರ್ಜಿ, ಐನಾಪುರ	ಬಸವ ಜಯಂತಿ
2007	ಡಾ॥ ಸತ್ಯಪ್ಪ ವಿರುಪಾಕ್ಷ ಕಾರ್ಜಿ ,,	ಶ್ರಾವಣ ಸೋಮವಾರ
2008	ಶಿವಪುತ್ರ ಮಹಾಲಿಂಗಪ್ಪ ಕವಂತಗಿ ,,	ಅಕ್ಟೋಬರ್-22
2009	ಶಿವಪ್ಪ ಗೂಳಪ್ಪ ಚೌಗಲಾ ,,	ಶ್ರಾವಣ ಸೋಮವಾರ
2010	ಮಹಾಲಿಂಗಪ್ಪ ಭೀಮಪ್ಪ ಕುಡಚಿ ,,	——
2011	ತಮ್ಮಣ್ಣ ಅಪ್ಪಣ್ಣ ಕುಡುಂವಕ್ಕಲಿಗಿ ,,	ಬಸವ ಜಯಂತಿ
2012	ತಮ್ಮಣ್ಣ ಗೌಡಪ್ಪ ಬಸ್ತಗೌಡ, ,,	ಶ್ರಾವಣ ಸೋಮವಾರ
2013	ಶಿವಗೌಡ ಶಂಕರಗೌಡ ಪಾಟೀಲ, ,,	ಬಸವ ಜಯಂತಿ
2014	ಭೀಮಪ್ಪ ರಾಮಪ್ಪ ಜೆಂತನ್ನವರ, ಐನಾಪುರ	ಶ್ರಾವಣ ಸೋಮವಾರ
2015	ಕಲ್ಲಪ್ಪ ಗುಂಡಪ್ಪ ಕುಡುಂವಕ್ಕಲಿಗಿ, ಐನಾಪುರ	ಮೇ-18
2016	ಅಂಬಕ್ಕಾ ವಿರುಪಾಕ್ಷಪ್ಪ ಮುದಕವಿ, ,,	ಯುಗಾದಿ
2017	ಪರಪ್ಪಾ ಬಸಪ್ಪಾ ಕಾಲತಿಪ್ಪಿ, ,,	ಶ್ರಾವಣ ಸೋಮವಾರ
2018	ವೀರಭದ್ರೇಶ್ವರ ಫೈನಾನ್ಸ್, ,,	ಬಸವ ಜಯಂತಿ
2019	ಶಿವಪಾದ ಮಹಾಲಿಂಗಪ್ಪ ಕವಂತಗಿ, ಐನಾಪುರ	ನವೆಂಬರ್-28
2020	ಚಿನ್ನಪ್ಪಾ ಸತ್ಯಪ್ಪಾ ಕಾರ್ಜಿ, ಐನಾಪುರ	ಶ್ರಾವಣ ಸೋಮವಾರ
2021	ಲಲಿತಪ್ರಭು ಕಲಘಟ್ಟಗಿ C/o ಪ್ರಕಾಶ ಗರಗದ, ಧಾರವಾಡ	ಸೆಪ್ಟೆಂಬರ್-28
2022	K. V. ಸುವರ್ಣಮ್ಮ, ಬೆಂಗಳೂರು	ಫೆಬ್ರುವರಿ-16
2023	ಅಣ್ಣಪ್ಪ ಶಿವಲಿಂಗ ಬಾಗೇವಾಡಿ, ಕರ್ಲಟ್ಟಿ	ಸೆಪ್ಟೆಂಬರ್-23
2024	ಶ್ರೀಶೈಲ ಸಿದ್ರಾಮಪ್ಪ ಬುರ್ಲಟ್ಟಿ, ಸಿದ್ದಾಪುರ	ಅಕ್ಟೋಬರ್-14
2025	ಬ ಪ್ಪಾ ಗುರುಪಾದ ಪಾಲಭಾವಿ, ,,	—,— 15

2026	ಕಾಡಗೌಡ ಸಿದ್ದುಗೌಡ ಪಾಟೀಲ, ಸಿದ್ದಾಪುರ	—,— 14
2027	ಗುರುಪಾದ ಅಮ್ಮಣ್ಣ ಅರಗೆ ,,	—,— 15
2028	ರಾಮಪ್ಪಾ ಮುತ್ತಪ್ಪಾ ಬಿ॥ ಪಾಟೀಲ ,,	—"— 17
2029	ಶಂಕರಗೌಡ ಕಾಡಗೌಡ ಪಾಟೀಲ ,,	—"— 28
2030	ಅಣ್ಣಾ ಸೋ ಶಂಕರ್ ಗಡಗೆ, ಶೇಡಶ್ಯಾಳ	—"— 17

[ಕಾರಣಾಂತರದಿಂದ ಸೆಪ್ಟಂಬರ್ 1995 ರಿಂದಲೂ ಪ್ರಕಟಿಸಲಾಗದಿದ್ದುದರಿಂದ ಪಟ್ಟಿ ಬೆಳೆದಿದೆ. ಮುಂದಿನ ಸಂಚಿಕೆಗೆ ಮುಂದುವರಿಯುವುದು]

ಮಹಾಚೈತ್ರ ರದ್ದತಿ ಕುರಿತು

ಒಂದು ಪ್ರಕಟಣೆ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ಚರಿತ್ರೆ ಹಾಗೂ ಚಾರಿತ್ರ್ಯ ಕುರಿತು ಅತ್ಯಂತ ಅವಹೇಳನಕರ ಕೃತಿಯಾದ ಶ್ರೀ ಶಿವಪ್ರಕಾಶ್ ಬರೆದಿರುವ "ಮಹಾಚೈತ್ರ"ವನ್ನು ಗುಲಬರ್ಗಾ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಪದವಿ ಪರೀಕ್ಷೆಗೆ ಪಠ್ಯವಾಗಿ ಇಟ್ಟಿದ್ದರು. ಆ ಪುಸ್ತಕದೊಳಗಣ ಲೋಪದೋಷ, ಪ್ರಮಾದ ಗುರುತಿಸಿ ಅದನ್ನು ಪಠ್ಯಕ್ರಮದಿಂದ ರದ್ದು ಪಡಿಸಲು ಒಂದು ಚಳುವಳಿ ಮಾಡಲಾಯಿತು. ಅದರಂತೆ ಆ ಪುಸ್ತಕ ಪಠ್ಯದಿಂದ ವಾಪಸ್ಸು ಪಡೆಯಲ್ಪಟ್ಟಿತು. ಆ ನಂತರ ಒಮ್ಮೆ ಅದರ ಪ್ರದರ್ಶನ ನಡೆಸಲು ಧಾರವಾಡದಲ್ಲಿ ಶ್ರೀ ಚಂಪಾ ಮುಂತಾದವರು ಪ್ರಯತ್ನಿಸಿದಾಗ ಹಿರಿಯರು ಗಣ್ಯರೂ ಆದ ಶರಣ. ಜಿ. ಜಿ. ದೊಡ್ಡವಾಡ, ಶ್ರೀ ರಾಮಜಾಧವ (ಈಗ ಅವರು ಇಲ್ಲ) ಅವರ ನೇತೃತ್ವದಲ್ಲಿ ಅನೇಕರು ಪ್ರತಿಭಟನೆ ಮಾಡಿ ನಿಲ್ಲಿಸಿದರು. ನಂತರ ಬೆಂಗಳೂರಲ್ಲಿ ಒಂದು ಪ್ರದರ್ಶನ ಮಾಡಿದರು. ಆದರೆ ಮೊದಲೇ ಆ ಪ್ರದರ್ಶನದ ವಿಚಾರ ಯಾರಿಗೂ ತಿಳಿಯದ್ದರಿಂದ ಪ್ರತಿಭಟಿಸಲು ಆಗಲಿಲ್ಲ. ಸರ್ಕಾರವು ಜನಪ್ರಿಯ ಪುಸ್ತಕ ಮಾಲಿಕೆಯಲ್ಲಿ ಪುನಃ ಆ ಪುಸ್ತಕವನ್ನು ಪ್ರಕಟಿಸಿದೆ. ಬಸವಣ್ಣನವರಂಥ ಮಹಾನ್ ವ್ಯಕ್ತಿಯ ಸಾಧನೆ-ಸಂದೇಶಗಳನ್ನು ಪ್ರಚಾರ ಮಾಡುವ ಕಳಕಳಿಯಾಗಲಿ, ಅಭಿಮಾನವಾಗಲೀ ಕರ್ನಾಟಕ ಸರ್ಕಾರಕ್ಕೆ ಇಲ್ಲ. ಇನ್ನು ಒಳಹೊರಗಿನ ಪುರೋಹಿತ ಶಾಹಿಗಳ ಕಾಟವಂತೂ ಹೇಳಲಸದಳ. ಹೀಗಾಗಿ ಉದ್ದೇಶ ಪೂರ್ವಕವಾಗಿ ಆ ಕೆಟ್ಟ ನಾಟಕವನ್ನು ಪ್ರದರ್ಶಿಸಿ ಶ್ರೀ ಗುರು ಬಸವಣ್ಣನವರ ಬಗ್ಗೆ ತಪ್ಪು ಕಲ್ಪನೆ ಹುಟ್ಟಿಸ-

ಬೇಕು ಅಂಥ ಪುಸ್ತಕವನ್ನು ಪ್ರಚಾರ ಮಾಡಬೇಕೆಂಬ ಹಂಬಲ ಸರ್ಕಾರವೂ ಸೇರಿ ಹಲವರದ್ದು. ಆದ್ದರಿಂದ ಈ ಪುಸ್ತಕವನ್ನು ನಿಷೇಧಿಸಬೇಕು ಎಂದು ಕೋರಿ ನಾನು ನ್ಯಾಯಾಲಯದಲ್ಲಿ ದಾವೆ ಹೂಡಿದ್ದೇನೆ. ಈಗ ಅದು ವಿಚಾರಣೆಗೆ ಬರುವ ಹಂತದಲ್ಲಿದೆ. ಈ ಸಂದರ್ಭದಲ್ಲಿ ಆಸಕ್ತಿ ಇರುವ ಯಾರು ಬೇಕಾದರೂ ತಮ್ಮ ವಾದವನ್ನು ಮಂಡಿಸಿ ಈ ಕೃತಿಯಲ್ಲಿರುವ ಐತಿಹಾಸಿಕ ದೋಷ, ವ್ಯಕ್ತಿತ್ವ ಹನನ ಮತ್ತು ಅಸಂಗತಗಳನ್ನು ಕುರಿತು ಸಾಕ್ಷ್ಯ ನುಡಿಯಬಹುದು.

ಆದ್ದರಿಂದ ಈ ಪ್ರಕಟಣೆಯ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅನೇಕರು ತಾವು ಶಾಸ್ತ್ರೀಯವಾಗಿ ಅಧ್ಯಯನ ಮಾಡಿರುವುದೇ ಅಲ್ಲದೆ ಆ ಬಗ್ಗೆ ವಿಮರ್ಶೆ ಸಹ ಪ್ರಕಟಿಸಿದ್ದೀರಿ, ಹೋರಾಟದಲ್ಲೂ ಸಕ್ರಿಯವಾಗಿ ಭಾಗವಹಿಸಿದ್ದೀರಿ. ಆದ್ದರಿಂದ ಮಹಾಚೈತ್ರದೊಳಗಣ ಅಸಂಗತ, ಶರಣರ ಚಾರಿತ್ರಿಕ ವಧೆ ಕುರಿತು ಪ್ರತಿಪಾದಿಸಬಲ್ಲ ಯಾರೇ ಆದರೂ ಸಾಕ್ಷಿಗಳಾಗಿ ಭಾಗವಹಿಸಹುದು. ಈ ಪ್ರಕಟಣೆ ನೋಡಿದ ಬಳಿಕ ನೀವು ಪತ್ರ ಬರೆದು, ಸಾಕ್ಷ್ಯ ಹೇಳಲು ಸಿದ್ಧರಿರುವ ಬಗ್ಗೆ ನನಗೆ ತಿಳಿಸಿದರೆ ನಿಮ್ಮ ಹೆಸರನ್ನು ನಾನು ನ್ಯಾಯಾಲಯಕ್ಕೆ ಒದಗಿಸುವ ಪಟ್ಟಿಯಲ್ಲಿ ಕೊಡುತ್ತೇನೆ ನಿಮ್ಮ ಹೆಸರು, ತಂದೆಯ ಹೆಸರು, ಅಡ್ಡ ಹೆಸರು (ಇದ್ದರೆ), ಪೂರ್ಣವಿಳಾಸ ಮತ್ತು ವಯಸ್ಸು ಇಷ್ಟು ಮಾಹಿತಿಯನ್ನು ಬರೆದು ಕಳಿಸಿರಿ, ನೀವು ಸಾಕ್ಷ್ಯ ನುಡಿಯಬೇಕಾದ ಸಮಯಕ್ಕೆ ನಿಮಗೆ ಮೊದಲೇ ಪತ್ರ ಬರೆದು ದಿನಾಂಕ ತಿಳಿಸಿ, ಬರಲು ಹೇಳುತ್ತೇವೆ.

ಧರ್ಮಗುರು ಬಸವಣ್ಣನವರು, ಅವರ ಸಮಕಾಲೀನ ಶರಣರಿಗೆ ನೀವು ಸಲ್ಲಿಸಬಹುದಾದ ಮಹತ್ವಪೂರ್ಣ ಸೇವೆ ಇದು.

ಶರಣ. ಕೊಂಡಜ್ಜಿ ಜಿ. ಬಸಪ್ಪ, 750,
5 ನೆಯ ಬ್ಲಾಕ್, 60 ನೇ ಅಡ್ಡ ರಸ್ತೆ,
ರಾಜಾಜಿನಗರ, ಬೆಂಗಳೂರು-560010

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ। —ಶ್ರೀ ಸಿದ್ಧರಾಮೇಶ್ವರರು

ವಿಶ್ವಧರ್ಮ ಪ್ರವಚನದ ಸಂದೇಶ ಸಾರ

- **ವೈಜ್ಞಾನಿಕ ಯುಗದಲ್ಲಿ ಧರ್ಮದ ಅವಶ್ಯಕತೆ ಏನು ?**
ಮಾನವನು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಲವಾರು ಬಗೆಯ ಮಾನಸಿಕ ಒತ್ತಡಗಳಿಗೆ ಈಡಾಗುತ್ತಿದ್ದಾನೆ. ಜೀವನದ ವಿವಿಧ ವಿಲಕ್ಷಣಗಳ ಪ್ರಸಂಗದಲ್ಲಿ ಮಾರ್ಗದರ್ಶನ ಮಾಡಬಲ್ಲ ದಿವ್ಯ ಸಂಜೀವಿನಿಯಾಗಿ ಧರ್ಮವು ಕೆಲಸ ಮಾಡಬಲ್ಲದು.

- **ಧರ್ಮವು– ರಾಷ್ಟ್ರ ಸಮಾಜಗಳಲ್ಲಿ ಒಡಕು ಹುಟ್ಟಿಸುವುದೆ ?**
ಧರ್ಮದ ನಿಜವಾದ ಅರ್ಥವನ್ನು ತಿಳಿದುಕೊಂಡು ನಡೆದುದೇ ಆದರೆ ಅದು ಒಡಕು ಹುಟ್ಟಿಸದು, ವಿಶಾಲ ಮನೋಭಾವವನ್ನು ಬೆಳೆಸುವುದು.

- **ಹಿಂದುತ್ವವು ಸಂಕುಚಿತತೆಯ ಮನೋಭಾವ ಬೆಳೆಸುವುದೆ ?**
ಹಿಂದುತ್ವವು ಒಂದು ಮಹಾನ್ ಪರಂಪರೆಯನ್ನು ಪ್ರತಿನಿಧಿಸುವ ಪದ. ಭಾರತ ದೇಶದ ವಿವಿಧ ಸಂತರು, ಪ್ರವಾದಿಗಳು ಕೊಟ್ಟ ಧರ್ಮ ಮತ ಪಂಥಗಳು ಹಿಂದೂ ಕಕ್ಷೆಯಲ್ಲೇ ಬರುವ ಕಾರಣ, ಹಿಂದೂತ್ವದ ಪ್ರಜ್ಞೆಯು ವಿಶಾಲ ಸಮನ್ವಯ ದೃಷ್ಟಿಯನ್ನು ಬೆಳೆಸುವ ಭಾವೈಕ್ಯತೆಯ ಸಾಧನವೇ ವಿನಾ ಅನೈಕ್ಯತೆ, ವಿಘಟನೆಗೆ ಕಾರಣವಾಗುವ ಮತಾಂಧತೆಯಲ್ಲ.

"ಸ್ವಧರ್ಮದಲ್ಲಿ ಅಭಿಮಾನ ಪರಧರ್ಮ ಸಹಿಷ್ಣುತೆ
ವೈವಿಧ್ಯತೆಯಲ್ಲಿ ಐಕ್ಯತೆ, ಭಿನ್ನತೆಯಲ್ಲಿ ಸಮರಸ
ವಿಚಾರ ಭಿನ್ನಾಭಿಪ್ರಾಯವಿದ್ದರೂ, ಹೃದಯ ಭಿನ್ನಾಭಿಪ್ರಾಯ ಸಲ್ಲದು"
ಈ ಮಹಾನ್ ಸೂತ್ರಗಳೇ ಹಿಂದು ಪರಂಪರೆಯ ಚಿರಂತನ ಘೋಷಣೆಗಳು.

- **ಹಲವಾರು ಧರ್ಮಗಳ ಅಸ್ತಿತ್ವ ದೇಶದ ಪ್ರಗತಿಗೆ ಮಾರಕವೆ ?**
ಭಾರತ ಭೂಮಿಯ ಅಭಿವೃದ್ಧಿ ಎಂಬ ವಾದ್ಯ ವೃಂದದ ಗಾಯನದಲ್ಲಿ ವಿವಿಧ ಧರ್ಮ, ಮತ, ಪಂಥಗಳು ವಿವಿಧ ವಾದ್ಯಗಳಿದ್ದಂತೆ. ಎಲ್ಲ ವಾದ್ಯಗಳೂ ಶ್ರುತಿಯೊಡನೆ ಕೂಡಿ ಸುಸ್ವರವ ಹಾಡುವಂತೆ, ರಾಷ್ಟ್ರಭಕ್ತಿ ಎಂಬ ಶ್ರುತಿಯ ಗತಿಯನ್ನು ಅನುಸರಿಸಿ ಎಲ್ಲ ಧರ್ಮ ಮತ ಪಂಥಗಳವರೂ ವಿಶ್ವಕಲ್ಯಾಣದ ಹಾಡು ಹಾಡಬೇಕು.

